ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಡಿಸೆಂಬರ್ 11, 2020

ಸಂಪುಟ : 47 ಸಂಚಿಕೆ : 221 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com




## ಅನುಭವ ಮಂಟಪ ಸಂಸತ್ತಿನ ಸ್ವರೂಪ

ನವದೆಹಲಿ, ಡಿ. 10 – 12ನೇ ಶತಮಾನದಲ್ಲಿ ಬಸವಣ್ಣನವರು ಸಂಸತ್ತಿನ ಸ್ವರೂಪದಲ್ಲಿ ಅನುಭವ ಮಂಟಪ ರೂಪಿಸಿದ್ದರು ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ಅನುಭವ ಮಂಟಪ ನಾಡಿನ ಹಾಗೂ ರಾಷ್ಟ್ರದ ಉನ್ನತಿಗೆ ಪೂರಕವಾಗಿ ಕೆಲಸ ಮಾಡಿತ್ತು ಎಂದಿದ್ದಾರೆ.



ಸಂಸತ್ತಿನ ನೂತನ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, ಸಾವಿರಾರು ವರ್ಷಗಳಿಂದ ಭಾರತದಲ್ಲಿ ನಡೆದು ಬಂದಿರುವ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ವಿವರಿಸಿದರಲ್ಲದೇ, ಈ ಭವ್ಯ ಪರಂಪರೆಯ ಆಧಾರದ ಮೇಲೆ ಭಾರತವು ವಿಶ್ವದಲ್ಲಿ 'ಪ್ರಜಾಪ್ರಭುತ್ವದ (5ನೇ ಪುಟಕ್ಕೆ)

## ಗ್ರಾ.ಪಂ ಚುನಾವಣೆ : ಹರಾಜು ಆಯ್ಕೆ ಮಾಡಿದರೆ ಕ್ರಿಮಿನಲ್ ಮೊಕದ್ದಮೆ : ಡಿಸಿ

ದಾವಣಗೆರೆ, ಡಿ.10- ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯ ಸ್ಥಾನಗಳನ್ನು ಹರಾಜು ಮೂಲಕ ಅಥವಾ ದೇವಸ್ಥಾನಗಳಿಗೆ ಹಣ ನೀಡುವ ಮತ್ತು ಇತರೆ ವ್ಯವಹಾರಗಳ ಮೂಲಕ ಚುನಾವಣೆ ಪ್ರಕ್ರಿಯೆ ನಡೆಸದೇ ಆಯ್ಕೆ ಮಾಡಿದ್ದಲ್ಲಿ ಅಂತಹವರ ವಿರುದ್ಧ ಕ್ರಿಮಿನಲ್ ಮೊಕ್ಕದ್ದಮೆ ದಾಖಲಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದ್ದಾರೆ. (5ನೇ ಪುಟಕ್ಕೆ)




## ಹಂದಿಗಳು ಅಡ್ಡಾಡಿದರೆ ಮಾಲೀಕರ ವಿರುದ್ಧ ಕ್ರಮಕ್ಕೆ ಸಚಿವರ ಸೂಚನೆ



ದಾವಣಗೆರೆ, ಡಿ.10- ನಗರವನ್ನು ಸುಂದರ ಹಾಗೂ ಸ್ವಚ್ಛ ನಗರವನ್ನಾಗಿಸಲು ಎಲ್ಲರೂ ಶ್ರಮಿಸುತ್ತಿದ್ದು, ಬಿಡಾಡಿ ಹಂದಿಗಳ ಹಾವಳಿ ಹೆಚ್ಚಾಗಿದೆ. ರಸ್ತೆಯಲ್ಲಿ ವಾಹನಗಳಿಗೆ ಅಡ್ಡಬರುವುದು ಸೇರಿದಂತೆ, ರಸ್ತೆಗಳನ್ನು ಗಲೀಜು ಮಾಡುತ್ತಿದ್ದು ಇದನ್ನು ತಡೆಯಲು ಸಂಬಂಧಿಸಿದವರ ಮೇಲೆ ಸೂಕ್ತ ಹಾಗೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ತಮ್ಮ ಕಚೇರಿಯಲ್ಲಿ ಗುರುವಾರ ಸಂಜೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಹಂದಿ ಸಾಕಾಣಿಕೆಗೆ ನಮ್ಮ ವಿರೋಧವಿಲ್ಲ. ಆದರೆ ಸಂಬಂಧಿಸಿದ ಹಂದಿ ಮಾಲೀಕರು ಕಾಂಪೌಂಡನ್ನು ನಿರ್ಮಿಸಿಕೊಂಡು ಅಥವಾ ಹೊರ ವಲಯದಲ್ಲಿ ಹಂದಿ ಸಾಕಾಣಿಕೆ ಮಾಡಿಕೊಳ್ಳಲಿ ಎಂದರು.

ಹಂದಿಗಳ ಕಾರಣದಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದನ್ನು ಸಹಿಸಲು ಆಗುವುದಿಲ್ಲ. ಹಾಗಾಗಿ ಮಹಾನಗರಪಾಲಿಕೆಯಲ್ಲಿ ಕೂಡಲೇ ಹಂದಿ ಮಾಲೀಕರ ಸಭೆ ಕರೆದು ಅವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಪಾಲಿಕೆ (4ನೇ ಪುಟಕ್ಕೆ)


## ಅರ್ಜುನ ಪ್ರಶಸ್ತಿ ವಿಜೇತನ ಮೇಲೆ ಅತ್ಯಾಚಾರದ ಆರೋಪ

**30 ವರ್ಷದ ಸಿ.ಆರ್.ಪಿ.ಎಫ್. ಮಹಿಳಾ ಪೇದೆಯಿಂದ ದೂರು: ಎಫ್‌ಐಆರ್ ದಾಖಲು**

ನವದೆಹಲಿ, ಡಿ. 10 – ಅರ್ಜುನ ಪ್ರಶಸ್ತಿ ವಿಜೇತ ಖಜನ್ ಸಿಂಗ್ ಹಾಗೂ ತರಬೇತುದಾರ ಸುರ್ಜಿತ್ ಸಿಂಗ್ ಅವರು ಮೂರು ವರ್ಷಗಳಿಗೂ ಹೆಚ್ಚು ಕಾಲ ಲೈಂಗಿಕವಾಗಿ ಪೀಡಿಸಿದ್ದಾರೆ, ಅತ್ಯಾಚಾರ ಎಸಗಿ ಬೆದರಿಕೆ ಹಾಕಿದ್ದಾರೆ ಎಂದು 30 ವರ್ಷದ ಸಿ.ಆರ್.ಪಿ.ಎಫ್. ಮಹಿಳಾ ಪೇದೆಯೊಬ್ಬರು ಪೊಲೀಸರಲ್ಲಿ ದೂರು ನೀಡಿದ್ದು, ಎಫ್.ಐ.ಆರ್. ದಾಖಲಿಸಲಾಗಿದೆ.

ಆದರೆ, ಸಿ.ಆರ್.ಪಿ.ಎಫ್.ನಲ್ಲಿ ಡಿಐಜಿ ದರ್ಜೆ ಅಧಿಕಾರಿಯಾಗಿರುವ ಖಜನ್ ಸಿಂಗ್ ಆರೋಪಗಳನ್ನು ತಳ್ಳಿ ಹಾಕಿದ್ದಾರೆ. ಆರೋಪ ಮಾಡಿರುವ ಸಿಆರ್‌ಪಿಎಫ್ ಸಿಬ್ಬಂದಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪದಕಗಳನ್ನು ಪಡೆದಿದ್ದಾರೆ.

ಖಜನ್ ಹಾಗೂ ಸುರ್ಜಿತ್ ಸೈನಿಕ ಪಡೆಯಲ್ಲಿ ಲೈಂಗಿಕ ಹಗರಣ ನಡೆಸಿದ್ದಾರೆ. ಇವರ ಜೊತೆ ಹಲವರು ಶಾಮೀಲಾಗಿದ್ದಾರೆ ಎಂದು ಎಫ್.ಐ.ಆರ್.ನಲ್ಲಿ ಹೇಳಲಾಗಿದೆ. ಬಾಬಾ ಹರಿದಾಸ್ ಪೊಲೀಸ್ ಠಾಣೆಯಲ್ಲಿ ಡಿಸೆಂಬರ್ 3ರಂದು ಎಫ್.ಐ.ಆರ್. (5ನೇ ಪುಟಕ್ಕೆ)










# ಮಾದರಿ 'ಕಾಡಾ' ಮಾಡಲು ರೈತರ ಸಹಕಾರ ಮುಖ್ಯ

## ಮಾಯಕೊಂಡ ವಿಧಾನಸಭಾ ವ್ಯಾಪ್ತಿ ಗ್ರಾಮಗಳಿಗೆ ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಭೇಟಿ



ದಾವಣಗೆರೆ, ಡಿ.10- ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆ ಪವಿತ್ರರಾಮಯ್ಯ ಅವರು ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶ್ಯಾಗಲೆ, ಕೋಡಿಹಳ್ಳಿ, ಮಳಲಕೆರೆ, ಲೋಕಿಕೆರೆ ಭಾಗದ ರೈತರು ಕಚೇರಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸುವಂತೆ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ರೈತರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳ ಬಗ್ಗೆ ತಿಳಿಯುವ ಹಿನ್ನೆಲೆಯಲ್ಲಿ ನೇರವಾಗಿ ಭೇಟಿ ಮಾಡಿ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿದರು. ನಂತರ ದುರಸ್ತಿಗೊಂಡಿರುವ ಕಾಲುವೆಗಳನ್ನು, ಗುಂಡಿ ಬಿದ್ದಿರುವ ಅಚ್ಚುಕಟ್ಟು ರಸ್ತೆಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ರೈತರನ್ನುದ್ದೇಶಿಸಿ ಮಾತನಾಡಿದ ಅವರು, ಕೊರೋನಾ ಕಾರಣದಿಂದ ರಾಜ್ಯ ಸರ್ಕಾರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರೂ, ಅನ್ನದಾತರಿಗೆ ಯಾವುದೇ ತೊಂದರೆಯಾಗದಂತೆ ಯೋಜನೆಗಳನ್ನು ರೂಪಿಸುತ್ತಿದೆ ಎಂದರು.

ನೀರಾವರಿ ಯೋಜನೆಗಳಿಗೆ, ಕಾಡಾ ಪ್ರಾಧಿಕಾರಗಳಿಗೆ ಸೂಕ್ತ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ರೈತರ ಕಷ್ಟಗಳನ್ನು ಹತ್ತಿರದಿಂದ ಬಲ್ಲ ನನಗೆ ಮಾನ್ಯ ಮುಖ್ಯಮಂತ್ರಿಗಳು ಈ ಜವಾಬ್ದಾರಿಯುತ ಸ್ಥಾನವನ್ನು ನೀಡಿದ್ದಾರೆ. ನಿಮ್ಮ ಪ್ರತಿಯೊಂದು ಸಮಸ್ಯೆಗಳು ನನ್ನ ಅರಿವಿಗೆ ಇದ್ದು, ಸರ್ಕಾರದಿಂದ ಅನುದಾನ ಬಿಡುಗಡೆಗೊಳ್ಳುತ್ತಿದ್ದ ಹಾಗೆ ಆದ್ಯತೆ ಮೇರೆಗೆ ಕೆಲಸಗಳನ್ನು ಕೈಗೆತ್ತಿಕೊಳ್ಳಲು ರೂಪುರೇಷೆ ಸಿದ್ದಪಡಿಸಿದ್ದು, ರೈತರು ತಾಳ್ಮೆಯಿಂದ ವರ್ತಿಸಬೇಕು ಎಂದು ಮನವಿ ಮಾಡಿದರು.

ಈಗಾಗಲೇ ನೀರು ಪೋಲಾಗುವುದನ್ನು ರೈತರು ನೀರಾವರಿ ಇಲಾಖೆಯ ಗಮನಕ್ಕೆ ತರಲು ಅನುಕೂಲವಾಗುವಂತೆ ಸಹಾಯವಾಣಿ ತೆರೆಯಲು ನಿರ್ದೇಶನ ನೀಡಿದ್ದು, ಅದು ಕೂಡ ಪ್ರಗತಿಯಲ್ಲಿದೆ ಎಂದು ಹೇಳಿದರು.

ಕಾಡಾ ಪ್ರಾಧಿಕಾರವನ್ನು ಮಾದರಿಯಾಗಿ ಮಾಡುವುದು ನನ್ನ ಕನಸಾಗಿದ್ದು, ನಿಮ್ಮ ಸಲಹೆ ಸಹಕಾರ ಅತಿ ಮುಖ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ನೀರು ಬಳಕೆದಾರರ ಸಹಕಾರ ಸಂಘದ ಪದಾಧಿಕಾರಿಗಳು, ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಮಹಾಪರಿನಿರ್ವಾಣ ದಿನಾಚರಣೆ



ಜಗಳೂರು


ಜಗಳೂರು, ಡಿ.10- ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪಟ್ಟಣದಲ್ಲಿ ಪ್ರತ್ಯೇಕವಾಗಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನಾಚರಣೆ ಆಚರಿಸಲಾಯಿತು.

ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಶಾಸಕ ಎಚ್.ಪಿ. ರಾಜೇಶ್, ಕೆ.ಪಿ.ಸಿ.ಸಿ. ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ ಪಾಲಯ್ಯ ಸೇರಿದಂತೆ ಹಲವು ಗಣ್ಯ ವ್ಯಕ್ತಿಗಳು, ದಲಿತ ಸಂಘಟನೆಗಳ ಮುಖಂಡರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು .

ಈ ಸಂದರ್ಭದಲ್ಲಿ ತಾಲ್ಲೂಕು ದಂಡಾಧಿಕಾರಿ ಡಾ. ನಾಗವೇಣಿ, ಪೊಲೀಸ್ ಇಲಾಖೆ ವೃತ್ತ ನಿರೀಕ್ಷಕ ಡಿ. ದುರುಗಪ್ಪ, ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ರಾಜು ಡಿ. ಬಣಕಾರ್, ದಲಿತ ಮುಖಂಡರಾದ ಓಬಣ್ಣ, ಪಲ್ಲಾಗಟ್ಟೆ ಶೇಖರಪ್ಪ, ಹಟ್ಟಿ ತಿಪ್ಪೇಸ್ವಾಮಿ, ನಾಗಲಿಂಗಪ್ಪ. ಚಿಕ್ಕಮ್ಮನ ಹಟ್ಟಿ ದೇವೇಂದ್ರಪ್ಪ, ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ಸಿ. ತಿಪ್ಪೇಸ್ವಾಮಿ, ಕಸಾಪ ಅಧ್ಯಕ್ಷ ಹಜರತ್ ಅಲಿ, ತಾ.ಪಂ. ಸದಸ್ಯ ಬಸವರಾಜ್, ಪ.ಪಂ. ಸದಸ್ಯ ಪಾಪಲಿಂಗಪ್ಪ, ವಕೀಲ ಹನುಮಂತಪ್ಪ, ಬಿ. ಸತೀಶ್. ರಾಜಪ್ಪ, ಕುಬೇಂದ್ರಪ್ಪ, ಪಟ್ಟಣ ಪಂಚಾಯಿತಿ ಪೌರಕಾರ್ಮಿಕರು ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಸಮಾಜಕಲ್ಯಾಣ ಇಲಾಖೆಯ ಕಛೇರಿಯಲ್ಲಿ ನಡೆದ ಸಮಾರಂಭದಲ್ಲಿ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಅಂಬೇಡ್ಕರ್ ಪುಷ್ಪಾರ್ಚನೆ ಮೂಲಕ ನಮನ ಸಲ್ಲಿಸಿದರು. ಬಸವರಾಜ್, ಧನ್ಯಕುಮಾರ್, ಮಲ್ಲಿಕಾರ್ಜುನ್, ಗಿರೀಶ್ ಇನ್ನಿತರರಿದ್ದರು.

# ಬೀದಿ ವ್ಯಾಪಾರಿಗಳ ಪುನಶ್ಚೇತನಕ್ಕೆ ಆತ್ಮ ನಿರ್ಭರ್ ಯೋಜನೆ



ಹರಪನಹಳ್ಳಿ

ಹರಪನಹಳ್ಳಿ, ಡಿ.10- ಬೀದಿ ಬದಿ ವ್ಯಾಪಾರಿಗಳು ಕೊರೊನಾ ವೈರಸ್‌ನಿಂದ ತೊಂದರೆಗೆ ಒಳಗಾಗಿದ್ದು ಅವರಿಗೆ ಆರ್ಥಿಕ ಸಹಕಾರ ಒದಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಬೀದಿ ವ್ಯಾಪಾರಿಗಳ ಆತ್ಮ ನಿರ್ಭರ್ ಯೋಜನೆಯನ್ನು ಜಾರಿಗೆ ತಂದಿದೆ ಎಂದು ಜಿಲ್ಲಾ ಕೌಶಲ್ಯ ಇಲಾಖೆ ವ್ಯವಸ್ಥಾಪಕ ಪ್ರಾಣೇಶ ಹೇಳಿದರು.

ಪಟ್ಟಣದ ಪುರಸಭೆಯ ಆವರಣದಲ್ಲಿ ಆತ್ಮ ನಿರ್ಭರ್ ಯೋಜನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಿಜಿಟಲ್ ವ್ಯವಸ್ಥೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಬೀದಿ ಬದಿ ವ್ಯಾಪಾರಸ್ಥರು ಹೆಚ್ಚಾಗಿ ಆನ್ ಲೈನ್ ವ್ಯವಹಾರವನ್ನು ವೃದ್ಧಿಗೊಳಿಸಿದಲ್ಲಿ ಕೇಂದ್ರ ಸರ್ಕಾರ ಅವರಿಗೆ ಮಾರ್ಜಿನ್ ಹಣ ನೀಡಲಿದೆ ಎಂದರು.

ಸಮುದಾಯ ಸಂಘಟಕ ಲೋಕ್ಯಾನಾಯ್ಕ ಮಾತನಾಡಿ, ಕೇಂದ್ರ ಸರ್ಕಾರ ಬೀದಿ ಬದಿ ವ್ಯಾಪಾರಿಗಳಿಗೆ 10 ಸಾವಿರ ರೂ ಸಾಲವನ್ನು ನೀಡುತ್ತಿದ್ದು, ವ್ಯಾಪಾರಸ್ಥರು ಸಮಯಕ್ಕೆ ಸರಿಯಾಗಿ ಹಣ ಮರು ಪಾವತಿಸಿದರೆ, ಹೆಚ್ಚಿನ ಸೌಲಭ್ಯ ಕೂಡ ದೊರೆಯುತ್ತದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ನಾಗರಾಜ ನಾಯ್ಕ, ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಜಂಗ್ಲಿ ಅಂಜಿನಪ್ಪ, ಸದಸ್ಯರುಗಳಾದ ರಾಜು ಸಂಡೂರು, ಎಂ. ಶಾಂತಾನಾಯ್ಕ, ಶಿವನಾಗಪ್ಪ, ಭೀರಾನಾಯ್ಕ, ಕೆ.ವೀರೇಶ್, ಎಸ್. ಬಸಮ್ಮ, ಉಲ್ಲಾಸಿನಿ, ಲಕ್ಷ್ಮಿ, ಎಂ. ತಿರುಪತಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಪನಹಳ್ಳಿಯಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಸ್ವಾಗತಿಸಿ ಸಂಭ್ರಮ ಆಚರಣೆ



ಹರಪನಹಳ್ಳಿ, ಡಿ.10 - ತಾಲ್ಲೂಕು ಬಿಜೆಪಿ ಮಂಡಲದ ವತಿಯಿಂದ ಗೋಹತ್ಯೆ ನಿಷೇಧ ಕಾಯ್ದೆ ಸ್ವಾಗತಿಸಿ ಗೋವಿಗೆ ಪೂಜೆ ಮಾಡಿ ಹಣ್ಣು ತಿನ್ನಿಸಿ. ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಉದಯಕುಮಾರ, ಬಸವರಾಜ, ಪುರಸಭೆ ಸದಸ್ಯ ಗೌಳಿ ವಿನಯ್, ಮುಖಂಡರಾದ ಎಂ.ಪಿ. ನಾಯ್ಕ್, ಆರ್.ಕರಿಗೌಡ್ರು, ವಿಶ್ವನಾಥ ಶಿರಗನಹಳ್ಳಿ, ತಿಮ್ಮಣ್ಣ, ಜೆಟ್ಟೆಪ್ಪ, ವೀರೇಶ ಹಿಂದೂಸ್ತಾನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಂಘಟನೆ, ನಾಯಕತ್ವ ಒಂದು ಸಾಮಾಜಿಕ ಜವಾಬ್ದಾರಿ

## ಡಾ. ಬಿ.ಆರ್. ಅಂಬೇಡ್ಕರ್ ಅವರ 64ನೇ ಪರಿನಿರ್ವಾಣ ದಿನಾಚರಣೆಯಲ್ಲಿ ಎಂ.ಗುರುಮೂರ್ತಿ



ಹರಿಹರ, ಡಿ.10- ಬದುಕಲು ಸಂಘಟನೆಗೆ ಬರಬೇಡಿ, ಜನರ ಬದುಕನ್ನು ಬದಲಾಯಿಸಲು ಸಂಘಟನೆಗೆ ಬನ್ನಿ ಎಂದು ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಹೇಳಿದರು.

ನಗರದ ಅಕ್ಷಯ ಆಸ್ಪತ್ರೆ ಆವರಣದಲ್ಲಿ ಡಾ.ಅಂಬೇಡ್ಕರ್ 64ನೇ ಪರಿನಿರ್ವಾಣ ದಿನದ ಅಂಗವಾಗಿ ದಸಂಸ ತಾಲ್ಲೂಕು ಸಮಿತಿ, ಅಕ್ಷಯ ಆಸ್ಪತ್ರೆಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಘಟನೆ, ನಾಯಕತ್ವ ಎನ್ನುವುದು ಉದ್ಯೋಗವಲ್ಲ, ಅದೊಂದು ಸಾಮಾಜಿಕ ಜವಾಬ್ದಾರಿಯಾಗಿದೆ. ಕೆಲವರು ಸಂಘಟನೆಯನ್ನು ತಮ್ಮ ಸ್ವಂತ ಉದ್ದಾರಕ್ಕೆ ಎಂಬಂತೆ ಬಳಸಿಕೊಳ್ಳುತ್ತಿರುವುದು ವಿಪರ್ಯಾಸ. ಇದು ನಮ್ಮ ತತ್ವ, ಸಿದ್ಧಾಂತ, ವಿಚಾರಧಾರೆಗೆ ಧಕ್ಕೆ ತರುತ್ತದೆ ಎಂದು ವಿಷಾದಿಸಿದರು.

ಡಾ. ಅಂಬೇಡ್ಕರ್‌ರವರಿಗೆ ಅಪಮಾನ ಮಾಡಿದ್ದು ದೇಶವಲ್ಲ ಬದಲಿಗೆ ಮನುವಾದಿಗಳೆಂದ ಅವರು, ಅಪಮಾನಕ್ಕಿಂತ ಆಳವಾದ ಗಾಯ ಮತ್ತೊಂದಿಲ್ಲ. ದೇವಸ್ಥಾನದೊಳಗೆ ಪ್ರವೇಶ ನಿಷೇಧ, ಸಾರ್ವಜನಿಕವಾಗಿರುವ ಕೆರೆ, ಕಟ್ಟೆ, ಬಾವಿಗಳಿಂದ ನೀರು ಮುಟ್ಟಲು ಬಿಡದಿರುವುದು. ಭೀಕರ ಜಾತೀಯತೆಯ ಅಪಮಾನವನ್ನು ಅನುಭವಿಸಿದ ಅಂಬೇಡ್ಕರ್ ಅದನ್ನು ಕಿತ್ತೊಗೆಯಲು ಪಣ ತೊಟ್ಟರು ಎಂದರು.

ಸಾಮ್ರಾಜ್ಯಶಾಹಿವಾದ, ಬಂಡವಾಳಶಾಹಿಗಳ ವಿರುದ್ಧ ದಸಂಸ ನಿರಂತರ ಸಂಘಟಿತ ಹೋರಾಟ ಮಾಡಬೇಕಿದೆ. ದಾರಿ ತಪ್ಪಿಸುವ ತಾತ್ಕಾಲಿಕ ಆಕರ್ಷಣೆಗಳಿಂದ ದೂರವಿದ್ದು ಸಂಘಟನೆ, ಏಕತೆಗೆ ಒತ್ತು ನೀಡಬೇಕು, ಶೋಷಿತರೆಲ್ಲ ಒಂದಾಗಬೇಕಿದೆ ಎಂದರು.

ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಕ್ಷಯ ಆಸ್ಪತ್ರೆ ಮುಖ್ಯಸ್ಥ ಡಾ.ನಾಗರಾಜ್ ವಿ.ಟಿ. ಮಾತನಾಡಿ, ದೇಶದ ಸಾಮಾಜಿಕ ಆರೋಗ್ಯವನ್ನು ಕಾಪಾಡಲು ಅಂಬೇಡ್ಕರ್ ಬಹುವಾಗಿ ಶ್ರಮಿಸಿದ್ದರು ಎಂದರು.

ಶಾಸಕ ಎಸ್.ರಾಮಪ್ಪ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಡಾ. ಎನ್. ಸೀಮಾ, ಡಾ. ನಜೀಬ್‌ಉಲ್ಲಾ ಖಾನ್, ಡಾ.ಅನಂತರಾಜ್ ಜಿ.ಎಸ್. ಶಿಬಿರ ನಡೆಸಿಕೊಟ್ಟರು. ದಸಂಸ ಮುಖಂಡರಾದ ಹೊನ್ನಾಳಿ ಅಶೋಕ್, ಹನುಮಂತಪ್ಪ ಎಡಾಳ್, ರಾಜು, ಸಂದೀಪ್ ಶಿವಮೊಗ್ಗ, ಡಿ.ಎಂ. ಮಂಜುನಾಥ್, ಭಾನುವಳ್ಳಿ ಸಿ. ಚೌಡಪ್ಪ, ಹಳದಪ್ಪ, ಹರೀಶ್, ಯುವರಾಜ ಹೊಸಪಾಳ್ಯ, ರಾಜಪ್ಪ, ಫಾರ್ಮಾಸಿಸ್ಟ್ ಕರಿಬಸಪ್ಪ, ಅಶೋಕ್ ಉಕ್ಕಡಗಾತ್ರಿ, ಚಂದ್ರಶೇಖರ್ ಆಮ್ರುದ್ ಹಾಗೂ ಆಸ್ಪತ್ರೆ ಸಿಬ್ಬಂದಿಗಳು ಇದ್ದರು.

# ಪೋತಲಕಟ್ಟೆ ಗ್ರಾಪಂ ರಚನೆಗೆ ಮನವಿ

ಹರಪನಹಳ್ಳಿ, ಡಿ.7- ಪೋತಲಕಟ್ಟೆ ಗ್ರಾಮಕ್ಕೆ ಪ್ರತ್ಯೇಕ ಬೂತ್ (ನಂ. 236) ಇದ್ದು, ಪ್ರತ್ಯೇಕ ಗ್ರಾಮ ಪಂಚಾಯ್ತಿ ಮಾಡುವಂತೆ ಗ್ರಾಮಸ್ಥರು ತಹಶೀಲ್ದಾರ್, ಉಪವಿಭಾಗಾಧಿಕಾರಿ ಹಾಗೂ ಚುನಾವಣಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುವುದಾಗಿ ದುರ್ಗದ ಶಿವಪ್ಪ ತಿಳಿಸಿದ್ದಾರೆ.

ಪೋತಲಕಟ್ಟೆ ಗ್ರಾಮವನ್ನು ಗ್ರಾಮ ಪಂಚಾಯ್ತಿ ಮಾಡಿದಲ್ಲಿ ಉಮ್ಲಾನಾಯ್ಕನ ತಾಂಡಾ, ಸಣ್ಣ ತಾಂಡಾ, ಬೇವಿನಹಳ್ಳಿ ದೊಡ್ಡ ತಾಂಡಾ, ಒಂಟಿಮನೆತಾಂಡಾ, ಗೌಳೇರಹಟ್ಟಿ ಗ್ರಾಮಗಳು ಸೇರುತ್ತವೆ. ಈ ಹಳ್ಳಿಗಳು ಗ್ರಾಮ ಪಂಚಾಯ್ತಿಗೆ 6-7 ಕಿ.ಮೀ. ದೂರವಾಗುತ್ತವೆ. ಮುಂದಿನ ಚುನಾವಣೆ ಬರುವುದರೊಳಗೆ ಪೋತಲಕಟ್ಟೆಯನ್ನು ಗ್ರಾ.ಪಂ. ಮಾಡಲು ಮನವಿ ಮಾಡಿದ್ದಾರೆ.

# ಮಕ್ಕಳಿಗೆ ಮಾನವೀಯ ಮೌಲ್ಯಗಳ ಶಿಕ್ಷಣ ಕಲಿಸಬೇಕು



ಜಗಳೂರಿನ ನ್ಯಾಯಾಧೀಶ ಜಿ. ತಿಮ್ಮಯ್ಯ

ಜಗಳೂರು, ಡಿ.10- ಮಕ್ಕಳಿಗೆ ಸಂಸ್ಕಾರಯುತ ಮತ್ತು ಮಾನವೀಯ ಮೌಲ್ಯಗಳ ಶಿಕ್ಷಣ ಕಲಿಸಬೇಕು ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಜಿ. ತಿಮ್ಮಯ್ಯ ಕರೆ ನೀಡಿದರು.

ಪಟ್ಟಣದ ಶ್ರೀ ರಾಮಮಂದಿರ ಸಭಾಂಗಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಹಿರಿಯ ನಾಗರಿಕರ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ನಾಲ್ಸಾ (ಹಿರಿಯ ನಾಗರಿಕರಿಗೆ ಕಾನೂನು ಸೇವೆಗಳು) ಯೋಜನೆ 2016 ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ ಕಾನೂನು ಅರಿವು, ನೆರವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭವಿಷ್ಯದಲ್ಲಿ ಮಾನವೀಯತೆ ಮರೆತು ಪೋಷಕರು ಜೀವಂತವಿರುವಾಗ ವೃದ್ಧಾಶ್ರಮಕ್ಕೆ ನೂಕಿ ಸಾವಿನ ನಂತರ ಆಸ್ತಿಗಾಗಿ ವ್ಯಾಜ್ಯ ಹೂಡಿದರೆ ಅಂತಹ ಶಿಕ್ಷಣಕ್ಕೆ ಅರ್ಥವೇನಿದೆ? ಎಂದ ಅವರು ಆಸ್ತಿ ಗಳಿಕೆಗಿಂತ ಮಕ್ಕಳನ್ನೇ ಆಸ್ತಿಯನ್ನಾಗಿಸಿರಿ ಎಂದು ಕಿವಿಮಾತು ಹೇಳಿದರು.

ಸರ್ವೋಚ್ಚ ನ್ಯಾಯಾಲಯ ಹಿರಿಯರಿಗೆ 2007 ರಲ್ಲಿ ಜೀವಿಸುವ ಹಕ್ಕು ನೀಡಿದೆ. ಹಿರಿಯ ನಾಗರಿಕರಿಗೆ ಕಾನೂನು ಬದ್ಧ ಸರ್ಕಾರಿ ಸೌಲಭ್ಯ ಕಲ್ಪಿಸಲು ಸದಾ ಸಿದ್ಧ. ಕೀಳರಿಮೆ ಬಿಟ್ಟು ಅಹವಾಲು ಸಲ್ಲಿಸಿರಿ. ಹಿರಿಯರಿಗೆ, ನಮ್ಮ ಧರ್ಮಕ್ಕೆ ಕಿರಿಯರು ತಲೆ ತಗ್ಗಿಸಿ ನಡೆದಾಗ ಮಾತ್ರ ನ್ಯಾಯಾಲಯಕ್ಕೆ ಗೌರವ ಸೂಚಿಸಿದಂತೆ ಎಂದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಭಾರತಿ ಮಾತನಾಡಿ, ಪ್ರತಿಯೊಂದು ಜೀವಿಗೂ ಬದುಕಲು ಅವಕಾಶವಿದ್ದು, ಪ್ರಕೃತಿಗೆ ನಮ್ಮ ಕೊಡುಗೆ ಅಪಾರವಿದೆ ಎಂದರು. ಇಬ್ಬರ ಮಧ್ಯೆ ಮನೋಭಾವನೆಗಳು ಹಂಚಿಕೆಯಾದರೆ ಬಾಂಧವ್ಯ ಹೆಚ್ಚುತ್ತದೆ. ನಾನಷ್ಟೇ ಮುಂಚೂಣಿ ಎಂಬ ಅಹಂ ಪ್ರವೃತ್ತಿಯಿದ್ದರೆ ಬದುಕಿನಲ್ಲಿ ವ್ಯತ್ಯಾಸ ಉಂಟಾಗುವುದು. ಪ್ರತಿಯೊಬ್ಬ ನಾಗರಿಕ ಕಾನೂನನ್ನು ಅರಿತುಕೊಂಡು ಜವಾಬ್ದಾರಿಯಿಂದ ಇತರರಿಗೆ ತಲುಪಿಸುವ ಕರ್ತವ್ಯ ಪಾಲಿಸಬೇಕು ಅಲ್ಲದೆ ಶ್ರೇಷ್ಠ ಚಿಂತನೆ ಮೈಗೂಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಸಮಾರಂಭದಲ್ಲಿ ಹಿರಿಯ ನಾಗರಿಕರ ಸಂಘದ ತಾಲೂಕಾಧ್ಯಕ್ಷ ಸಿ.ತಿಪ್ಪೇಸ್ವಾಮಿ, ವಕೀಲರ ಸಂಘದ ಅಧ್ಯಕ್ಷ ಬಸವರಾಜ್, ಕಾರ್ಯದರ್ಶಿ ತಿಪ್ಪೇಸ್ವಾಮಿ, ಪದಾಧಿಕಾರಿಗಳಾದ ಕೆ.ಎಂ. ಬಸವರಾಜಪ್ಪ, ವೈ. ಹನುಮಂತಪ್ಪ, ಡಿ. ಪ್ರಕಾಶ್, ಕುಂಬಾರ್ ಶರಣಪ್ಪ ಇನ್ನಿತರರಿದ್ದರು.


# ಗೋ ಪೂಜೆ ಸಲ್ಲಿಸಿ ಸಂಭ್ರಮ



ಜಗಳೂರು

ಜಗಳೂರು, ಡಿ.10- ಗೋಹತ್ಯೆ ನಿಯಂತ್ರಣ ಹಾಗೂ ಜಾನುವಾರು ಸಂರಕ್ಷಣಾ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರಗೊಂಡ ಹಿನ್ನೆಲೆಯಲ್ಲಿ ಪಟ್ಟಣದ ಮಹಾತ್ಮಗಾಂಧಿ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಗೋ ಪೂಜೆ ನೆರವೇರಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಪಲ್ಲಾಗಟ್ಟೆ ಮಹೇಶ್, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಸದಸ್ಯರಾದ ಪಾಪಲಿಂಗಪ್ಪ , ನವೀನ್ ಕುಮಾರ್, ದೇವರಾಜ್, ಮುಖಂಡರಾದ ಜೆ.ವಿ. ನಾಗರಾಜ್, ಓಬಳೇಶ್, ನಾಗರಾಜ್, ರೇಖಾ ಶಿವಕುಮಾರ್ ಇನ್ನಿತರರಿದ್ದರು.

# ಕ್ಷಯರೋಗ ನಿರ್ಮೂಲನಾ ಜಾಗೃತಿ




ಹರಿಹರ

ಹರಿಹರ, ಡಿ.10- ಪಟ್ಟಣದ ಪೊಲೀಸ್ ಸ್ಟೇಷನ್ ವೃತ್ತದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಲಾವಣಿ ಪದ ಹಾಗೂ ಬೀದಿ ನಾಟಕ ಆಡುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಡಿಎಚ್‌ಓ ಚಂದ್ರಮೋಹನ್ ಮಾತನಾಡಿ ರೋಗ ಹಾಗೂ ಚಿಕಿತ್ಸೆ ಕುರಿತು ಮಾಹಿತಿ ನೀಡಿದರು. ಜಿಲ್ಲಾ ಮೇಲ್ವಿಚಾರಕ ಎಂ.ವಿ. ಹೊರಕೇರಿ, ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಕ್ಷಯರೋಗ ನಿಯಂತ್ರಣ ಮೇಲ್ವಿಚಾರಕ ಮಂಜುನಾಥ, ನಂದೀಶ್, ಶರೀಫ್, ದೊಡ್ಡಮನಿ ಸತೀಶ್, ಆರೋಗ್ಯ ಸಹಾಯಕರಾದ ದಾದಾಪೀರ್, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.


## ಮೊದಲನೇ ವರ್ಷದ ಪುಣ್ಯಸ್ಮರಣೆ



ಮೆರವಣಗಿ

ಎಸ್. ಚಂದ್ರಶೇಖರಪ್ಪನವರು

ನಿವೃತ್ತ ಲೆಕ್ಕಾಧಿಕಾರಿಗಳು, ಬಾಪೂಜಿ ಕೋ.ಆಪ್ ಬ್ಯಾಂಕ್ ಲಿ.,

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದಿದೆ. ಸದಾ ನಿಮ್ಮ ನೆನಪಿನಲ್ಲಿರುವ...

ಪತ್ನಿ : ಶ್ರೀಮತಿ ಮೆರವಣಗಿ ಎಸ್. ಪಾರ್ವತಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಹಳೇಪೇಟೆ, ದಾವಣಗೆರೆ.


# ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ ನೀಡಲು ಅರ್ಜಿ ಆಹ್ವಾನ

ದಾವಣಗೆರೆ, ಡಿ.10- ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮುಂದುವರೆಸಲು ಪ್ರೋತ್ಸಾಹಿಸಿ, ಕಲಿಕಾ ಮತ್ತು ಬೋಧನಾ ಸಾಮಗ್ರಿಗಳನ್ನು ಖರೀದಿಸಲು ಸಹಾಯ ಮಾಡುವ ಉದ್ದೇಶದಿಂದ ಬಿ.ಇಡಿ. ಮತ್ತು ಡಿ.ಇಡಿ. ಕೋರ್ಸು ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಆಯಾ ತಾಲ್ಲೂಕು ಅಲ್ಪಸಂಖ್ಯಾತರ ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಆಫ್ ಲೈನ್ ಅರ್ಜಿಯನ್ನು ಪಡೆದು, ಅಧಿಕೃತ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, 44, ಎ ಬ್ಲಾಕ್, 2ನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ಹರಿಹರ ರಸ್ತೆ, ದಾವಣಗೆರೆ ಕಚೇರಿಗೆ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಇದೇ ದಿನಾಂಕ 15 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಇಲಾಖೆ ವೆಬ್‌ಸೈಟ್ Website: https://dom.karnataka.gov.in ಹಾಗೂ ಅಲ್ಪಸಂಖ್ಯಾತರ ಜಿಲ್ಲಾ ಕಚೇರಿ-08192-250022 ಸಂಪರ್ಕಿಸಲು ಇಲಾಖೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.


## ಬಿ. ಹಾಲಪ್ಪನವರು ನಿಧನ

(ನಿ. ಕಿರಿಯ ಕಾರ್ಯ ಪಾಲಕ ಅಭಿಯಂತರರು)



ನಂ. 1831/ಎ 59, 18ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ ವಾಸಿಯಾದ **ಬಿ. ಹಾಲಪ್ಪನವರು** (78) ನಿವೃತ್ತ ಕಿರಿಯ ಕಾರ್ಯ ಪಾಲಕ ಅಭಿಯಂತರರು, ಇವರು ದಿನಾಂಕ : 10.12.2020ರ ಗುರುವಾರ ಬೆಳಿಗ್ಗೆ 11.50ಕ್ಕೆ ನಿಧನರಾಗಿರುತ್ತಾರೆ. ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 11.12.2020ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ಬೊಮ್ಮೇನಹಳ್ಳಿ (ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ) ಯ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗದವರು

91088 40698, 94493 35406



॥ ಶ್ರೀ ಶಿವನಾರದ ಮುನಿ ಪ್ರಸನ್ನ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಹನಗವಾಡಿ ಶ್ರೀಮತಿ ವೀರಬಸಮ್ಮನವರು

ಜನನ: 20.06.1922 ಲಿಂಗೈಕ್ಯ : 03.12.2020

ದಾವಣಗೆರೆ ಜಿ॥, & ತಾ॥ ಎಲೆಬೇತೂರು ಗ್ರಾಮದ ವಾಸಿ ಹನಗವಾಡಿ ಶ್ರೀ ಬಿ.ಹೆಚ್. ನಾರಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 03.12.2020ನೇ ಗುರುವಾರ ರಾತ್ರಿ 11.15ಕ್ಕೆ ನನ್ನ ಪೂಜ್ಯ ತಾಯಿಯವರಾದ

**ಹನಗವಾಡಿ ಶ್ರೀಮತಿ ವೀರಬಸಮ್ಮನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 11.12.2020ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ **ದಾವಣಗೆರೆ ತಾ॥ ಎಲೆಬೇತೂರು ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

♦ ಹನಗವಾಡಿ ಶ್ರೀ ಹೆಚ್.ಎಂ. ನಾಗರಾಜ್ ♦ ಶ್ರೀ ಎಂ. ಪ್ರಭು, ಮಾಲೀಕರು, ಸರ್ಕಾರಿ ನ್ಯಾಯಬೆಲೆ ಅಂಗಡಿ

♦ ಶ್ರೀ ಎಂ.ಸುರೇಶ್ ಎಲೆಬೇತೂರು, ದಾವಣಗೆರೆ ಜಿ॥, ತಾ॥

ಮೊ: 94819 09653, 99020 98240



## ಶಶಿರೇಖ ಶಾಂತಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 10ನೇ ಮೇನ್, # 3174, ('ಮಾರುತಿ') ವಾಸಿ ದಿ॥ ಬಿ.ಜಿ. ಶಾಂತಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಶಶಿರೇಖ**

ಅವರು ದಿನಾಂಕ 10.12.2020ರ ಗುರುವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.12.2020ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ದೊಗ್ಗನಾಳ್ ಹಾಗೂ ಅನ್ನೆಹಾಳ್ ವಂಶಸ್ಥರು

ಮೊ. : 98440 51699


# ಜಗಳೂರಿನಲ್ಲಿ ವೈದ್ಯಕೀಯ ಶಿಬಿರ

ಜಗಳೂರು,ಡಿ.10- ದಾವಣಗೆರೆಯ ಸಿಟಿ ಸೆಂಟ್ರಲ್ ಆಸ್ಪತ್ರೆ ಮತ್ತು ನಿರ್ಮಲ ನರ್ಸಿಂಗ್ ಹೋಂ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 13 ರ ಭಾನುವಾರ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ನಡೆಯಲಿದೆ ಎಂದು ನಿರ್ಮಲ ನರ್ಸಿಂಗ್ ಹೋಂ ನ ಮ್ಯಾನೇಜಿಂಗ್ ಡೈರೆಕ್ಟರ್ ನಿಂಗಪ್ಪ ತಿಳಿಸಿದರು. ನಿರ್ಮಲ ನರ್ಸಿಂಗ್ ಹೋಂ ಆವರಣದಲ್ಲಿ ದಂತ, ಚರ್ಮ ರೋಗ, ಕೀಲು ಮೂಳೆ, ನೇತ್ರ, ರಕ್ತದೊತ್ತಡ ಚಿಕಿತ್ಸೆ ಸೇರಿದಂತೆ, ಶಸ್ತ್ರ ಚಿಕಿತ್ಸೆ ನಡೆಸಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಆಡಳಿತಾಧಿಕಾರಿ ಶಿಲ್ಪ, ಆಡಳಿತ ಮಂಡಳಿ ಸದಸ್ಯೆ ಶಾಹಿನಾ ಬೇಗಂ ಉಪಸ್ಥಿತರಿದ್ದರು.

# ವರ್ಕ್ ಫ್ರಮ್ ಹೋಂನಲ್ಲಿ ಹಸ್ತಕ್ಷೇಪವಿಲ್ಲ

**ಹೋಟೆಲ್, ಕ್ಯಾಬ್, ಕಟ್ಟಡಗಳ ನಿರ್ವಹಣೆ ಉದ್ಯೋಗಿಗಳಿಗೆ ತೊಂದರೆಯಾಗಿದ್ದು, ಕಚೇರಿಗಳಿಗೆ ಉದ್ಯೋಗಿಗಳನ್ನು ಕರೆಸಲು ಶಾಸಕರ ಆಗ್ರಹ**

**- ಅಶ್ವತ್ಥನಾರಾಯಣ್**

ಬೆಂಗಳೂರು, ಡಿ.10 - ಕೊರೊನಾ ಹಿನ್ನೆಲೆಯಲ್ಲಿ ವರ್ಕ್ ಫ್ರಮ್ ಹೋಂ ಪರಿಕಲ್ಪನೆ ಸದ್ಯದ ಪರಿಸ್ಥಿತಿಯಲ್ಲಿ ಹಾಗೇ ಮುಂದುವರೆಯಲಿದೆ. ಈ ವಿಚಾರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಶರತ್‌ಬಚ್ಚೇಗೌಡ, ರಘುಪತಿಭಟ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕೋವಿಡ್ ಸೋಂಕು ನಿಯಂತ್ರಣಕ್ಕೆ ಬರುವವರೆಗೂ ಇದೇ ಪರಿಸ್ಥಿತಿ ಮುಂದುವರೆಯಲಿದ್ದು, ನಂತರ ತಾನಾಗಿಯೇ ಯಥಾಸ್ಥಿತಿಗೆ ಬರಲಿದೆ ಎಂದರು.

ಇಂಥ ವ್ಯವಸ್ಥೆಯಿಂದ ಕೆಲಸಕ್ಕೆ ಅಡಚಣೆಯಾಗಿಲ್ಲ. ಸುಲಲಿತವಾಗಿ ನಡೆಯುತ್ತಿದೆ. ನಾವು ಸಂಸ್ಥೆಗಳ ಮೇಲೆ ಹೀಗೆ ಮಾಡಬೇಕು ಎಂದು ಹೇಳುವ ಅಧಿಕಾರ ನಮಗಿಲ್ಲ. ಇಂಥ ವ್ಯವಸ್ಥೆಯಿಂದ ಇತರೆ ಆರ್ಥಿಕ ಚಟುವಟಿಕೆಗಳ ಮೇಲೆ ದುಷ್ಪರಿಣಾಮ ಬೀರಿದೆ. ನಿರುದ್ಯೋಗವು ಕಾಡಿರುವುದು ಗಮನದಲ್ಲಿದೆ ಎಂದೂ ಉಪ ಮುಖ್ಯಮಂತ್ರಿ ಹೇಳಿದ್ದಾರೆ.

ಆದರೆ, ಈಗಿನ ಪರಿಸ್ಥಿತಿಯಲ್ಲಿ ನಾವು ಏನೂ ಮಾಡಲು ಸಾಧ್ಯವಿಲ್ಲ. ಈಗ ತಾತ್ಕಾಲಿಕವಾಗಿ ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಯಾವುದೇ ಅಡಚಣೆ ಇಲ್ಲದೆ ಕೆಲಸಗಳು ನಡೆಯುತ್ತಿವೆ. ಖಾಸಗಿ ಕಂಪೆನಿಗಳ ಮೇಲೆ ಕಚೇರಿಯಲ್ಲಿ ಕೆಲಸ ಮಾಡುವಂತೆ ಸರ್ಕಾರ ಒತ್ತಾಯ ಅಥವಾ ನಿರ್ಬಂಧ ತರುವುದಿಲ್ಲ. ಮುಂದಿನ ದಿನಗಳಲ್ಲಿ ತಾನಾಗಿಯೇ ಕಚೇರಿಗಳಲ್ಲಿ ಕೆಲಸ ಮಾಡುವ ಪ್ರಕ್ರಿಯೆ ಜಾರಿಯಾಗಲಿದೆ ಎಂದು ಹೇಳಿದರು.

ವರ್ಕ್ ಫ್ರಂ ಹೋಂ ಮಾಡುತ್ತಿರುವುದ ರಿಂದ ಇದನ್ನೇ ನಂಬಿದವರಿಗೆ ಭಾರೀ ತೊಂದರೆಯಾಗಿದೆ. ತಕ್ಷಣವೇ ಮಧ್ಯೆ ಪ್ರವೇಶಿಸಿ, ಡಿಸೆಂಬರ್ ಅಂತ್ಯಕ್ಕೆ ನಿಲ್ಲಿಸಬೇಕು ಎಂದು ಸದಸ್ಯರು ಆಗ್ರಹಿಸಿದರು.

ಹೋಟೆಲ್, ಕ್ಯಾಬ್, ಕಟ್ಟಡಗಳನ್ನು ನಿರ್ವಹಣೆ ಮಾಡುತ್ತಿದ್ದವರಿಗೆ ಭಾರೀ ತೊಂದರೆಯಾಗಿದೆ. ಅವರು ಉದ್ಯೋಗ ಕಳೆದುಕೊಂಡು ಭಾರೀ ತೊಂದರೆಯಾಗಿದೆ. ಮತ್ತೆ ಕಚೇರಿಯಲ್ಲೆ ಕೆಲಸ ಮಾಡಲು ಅವಕಾಶ ಮಾಡಿಕೊಡಿ ಎಂದು ಸದಸ್ಯರು ಒತ್ತಾಯಿಸಿದ್ದರು.

ಸರ್ಕಾರದ ಈ ನಿರ್ಧಾರದಿಂದ ಎಂಎನ್‌ಸಿ ಕಂಪನಿಗಳಿಗೆ ಲಾಭವಾಗುತ್ತಿದೆ. ಅವುಗಳು ಲಾಭಾಂಶವನ್ನು ವಿದೇಶಕ್ಕೆ ಕೊಂಡೊಯ್ಯುತ್ತಿವೆ. ನಮಗೆ ಪ್ರಯೋಜನವಿಲ್ಲ. ನಮ್ಮವರಿಗೂ ಉಪ ಉದ್ಯೋಗಗಳು ದೊರೆಯಬೇಕು ಎಂದರೆ, ವರ್ಕ್ ಫ್ರಂ ಹೋಂ ಪದ್ಧತಿ ಸ್ಥಗಿತಗೊಳಿಸಿ ಎಂದು ಒತ್ತಾಯಿಸಿದರು.



# ಗೋ ಹತ್ಯೆ ನಿಷೇಧ: ಬಿಜೆಪಿ ಸಂಭ್ರಮಾಚರಣೆ

ದಾವಣಗೆರೆ, ಡಿ.10- ಗೋ ಹತ್ಯೆ ನಿಷೇಧಿಸಿದ ರಾಜ್ಯ ಸರ್ಕಾರದ ಕ್ರಮ ಸ್ವಾಗತಿಸಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿಂದು ವಿಜಯೋತ್ಸವ ಆಚರಿಸಲಾಯಿತು.

ಗೋ ಹತ್ಯೆಯನ್ನು ನಿಷೇಧಿಸುವ ಕಾನೂನಿಗೆ ಬೆಂಬಲಾರ್ಥವಾಗಿ ನಿಟ್ಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಗೋ ಮಾತೆಗೂ ಪೂಜೆ ನೆರವೇರಿಸಿ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡು ಬಿಜೆಪಿ ಮುಖಂಡರು, ಕಾರ್ಯಕರ್ತರು ಸಂಭ್ರಮಾಚರಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಮಾತನಾಡಿ, ದಿನೇ ದಿನೇ ನಶಿಸುತ್ತಿರುವ ಗೋ ಸಂತತಿಯನ್ನು ಉಳಿಸಬೇಕೆಂಬುದು ಎಲ್ಲಾ ಭಾರತೀಯರ ಒಕ್ಕೊರಲ ಆಶಯವಾಗಿತ್ತು. ಸ್ವಾತಂತ್ರ್ಯ ಪೂರ್ವದಿಂದಲೂ ಹಿಂದೂಗಳು ಗೋಹತ್ಯೆ ನಿಷೇಧಕ್ಕೆ ಒತ್ತಾಯಿಸಿಕೊಂಡೇ ಬಂದಿದ್ದರು. ಇದೀಗ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ರಾಜ್ಯ ಸರ್ಕಾರವು ಗೋಹತ್ಯೆ ನಿಷೇಧ ವಿಧೇಯಕಕ್ಕೆ ಅಂಗೀಕಾರ ಪಡೆಯುವ ಮೂಲಕ ಬಹುಜನರ ಭಾವನೆಗಳಿಗೆ ಸ್ಪಂದಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ಗೃಹ ಪ್ರವೇಶ ಸೇರಿದಂತೆ, ಅನೇಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಗೋ ಪೂಜೆ ನೆರವೇರಿಸಲಾಗುತ್ತದೆ. ಹಾಲು ಕೊಡುವುದನ್ನು ನಿಲ್ಲಿಸಿದಾಕ್ಷಣ ಹಸು ನಿರುಪಯುಕ್ತವಾಗುವುದಿಲ್ಲ.

ವಯಸ್ಸಾದ ಎತ್ತುಗಳನ್ನು ಹೊರೆಯಾಗಿ ಪರಿಗಣಿಸುವುದು ಸರಿಯಲ್ಲ. ಗೋ ಮೂತ್ರ, ಗೋಮಯದಲ್ಲಿ ಅನೇಕ ಔಷಧೀಯ ಗುಣಗಳಿದ್ದು, ಸಾವಯವ ಕೃಷಿ ಅನುಸರಿಸುವ ಮೂಲಕ ಗೋ ಉತ್ಪನ್ನಗಳನ್ನು ಸದ್ಬಳಕೆ ಮಾಡಿಕೊಳ್ಳಬಹುದು ಎಂದರು.

ಈ ಸಂಭ್ರಮದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ಜಿಲ್ಲಾ ಬಿಜೆಪಿ ಉತ್ತರ ಮಂಡಲ ಅಧ್ಯಕ್ಷ ಸಂಗನಗೌಡ್ರು, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ನಗರ ಪಾಲಿಕೆ ಸದಸ್ಯರಾದ ಕೆ. ಪ್ರಸನ್ನ ಕುಮಾರ್, ಕೆ.ಎಂ. ವೀರೇಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳ ಮಹೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪುಷ್ಪ ವಾಲಿ, ಸವಿತ ರವಿಕುಮಾರ್, ಜಿಲ್ಲಾ ಮಾಧ್ಯಮ ಪ್ರಮುಖ್ ಹೆಚ್.ಪಿ. ವಿಶ್ವಾಸ್, ಹನುಮಂತಪ್ಪ, ಬಸವರಾಜಯ್ಯ, ಸಚಿನ್ ವೆರ್ಣೇಕರ್, ಎಂ. ರವಿ ನಾಯ್ಕ, ರಾಜೇಶ್, ಕೊಟ್ರೇಶ ಗೌಡ, ಶ್ರೀನಿವಾಸ್, ಕೆ.ಪಿ. ಗುರು ಸೇರಿದಂತೆ ಇತರರು ಭಾಗವಹಿಸಿದ್ದರು.

## ಜಾಮೀನು ಅರ್ಜಿ ಬಗ್ಗೆ ನ್ಯಾ॥ ಯಿಂದ ಆರೋಪ

ಶ್ರೀನಗರ, ಡಿ. 10 – ಜಾಮೀನು ಅರ್ಜಿಯೊಂದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರ ಪರವಾಗಿ ತಮ್ಮ ಮೇಲೆ ಪ್ರಭಾವ ಬೀರಲು ಯತ್ನಿಸಲಾಗಿತ್ತು ಎಂದು ಇಲ್ಲಿನ ಹಿರಿಯ ನ್ಯಾಯಮೂರ್ತಿಯೊಬ್ಬರು ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರ ಕಾರ್ಯದರ್ಶಿ ತಮಗೆ ದೂರವಾಣಿ ಕರೆ ಮಾಡಿ ಗಂಭೀರ ಅಪರಾಧಿಕ ಪ್ರಕರಣದಲ್ಲಿ ಬಂಧಿತ ಆರೋಪಿಯೊಬ್ಬನಿಗೆ ಜಾಮೀನು ನೀಡದಂತೆ ಸೂಚಿಸಿದ್ದರು ಎಂದು ಶ್ರೀನಗರದ ಪ್ರಧಾನ ಸೆಷನ್ಸ್ ನ್ಯಾಯಮೂರ್ತಿ ಅಬ್ದುಲ್ ರಶೀದ್ ಮಲಿಕ್ ಆರೋಪಿಸಿದ್ದಾರೆ.

## ನಗರದಲ್ಲಿ ನಾಳೆ ಎಂ. ಜಯಣ್ಣ ಒಂದು ನೆನಪು ಕಾರ್ಯಕ್ರಮ

ದಾವಣಗೆರೆ, ಡಿ.10- ಜಿಲ್ಲಾ ಮಾದಿಗ ನೌಕರರ ಬಳಗದಿಂದ 'ಜನಪದ ದಲಿತ ಹೋರಾಟಗಾರ ಹಾಗೂ ಆಧುನಿಕ ಭಗೀರಥ ದಿ.ಎಂ. ಜಯಣ್ಣನವರ ಒಂದು ನೆನಪು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಅಧ್ಯಕ್ಷ ಪಿ.ನಾಗರಾಜಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಾಡಿದ್ದು ದಿನಾಂಕ 12 ರಂದು ಕುವೆಂಪು ಕನ್ನಡ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ ಅವರು ದಿ.ಜಯಣ್ಣ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಿದ್ದಾರೆ.

ಸಂಸದ ಎ.ನಾರಾಯಣಸ್ವಾಮಿ, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಮಾಜಿ ಸಚಿವ ಹೆಚ್.ಆಂಜನೇಯ, ಶಾಸಕರುಗಳಾದ ಪ್ರೊ.ಎನ್. ಲಿಂಗಣ್ಣ, ಎಸ್.ಎ. ರವೀಂದ್ರನಾಥ್ ಮತ್ತು ಇತರರು ಮುಖ್ಯ ಅತಿಥಿಗಳಾಗಿದ್ದಾರೆ.

## ಗೋ ಹತ್ಯೆ ನಿಷೇಧ : ವಿಧಾನಸಭಾ ಕಲಾಪಕ್ಕೆ ಕಾಂಗ್ರೆಸ್ ಬಹಿಷ್ಕಾರ

ಬೆಂಗಳೂರು, ಡಿ. 10 - ಗೋಹತ್ಯೆ ನಿಷೇಧ ಕಾಯ್ದೆಯನ್ನು ತರಾತುರಿಯಲ್ಲಿ ಮಂಡಿಸಿ ಅಂಗೀಕಾರ ಪಡೆದ ಸರ್ಕಾರದ ಕ್ರಮವನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಇಡೀ ದಿನ ವಿಧಾನಸಭೆಯ ಕಲಾಪವನ್ನು ಬಹಿಷ್ಕರಿಸಿದರು.

ಸರ್ಕಾರದ ವಿರುದ್ಧ ಕೆಲವು ವಿಷಯಗಳ ಬಗ್ಗೆ ಸದನದ ಒಳ, ಹೊರಗೆ ಹೋರಾಟ ಮಾಡುತ್ತಿದ್ದ ಕಾಂಗ್ರೆಸ್, ಬಹಿಷ್ಕಾರ ಹಾಕಿರುವುದು ಇದೇ ಮೊದಲು.

ಸದನದ ಕಾರ್ಯಕಲಾಪದಲ್ಲಿ ವಿಷಯ ಪ್ರಸ್ತಾಪಿಸದೇ ಮಸೂದೆಯ ಪ್ರತಿಗಳನ್ನು ನೀಡದೇ ಉದ್ದೇಶ ಪೂರ್ವಕವಾಗಿ ಏಕಾಏಕಿ ಕಾಯ್ದೆಯನ್ನು ಮಂಡಿಸಿ ಬಲವಂತವಾಗಿ ಅಂಗೀಕಾರ ಪಡೆದುಕೊಂಡಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಇದಕ್ಕೆ ನಾವು ಭಾಗಿಯಾಗುವುದಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾದ ವಿಧೇಯಕ. ಇದನ್ನು ಪ್ರತಿಭಟಿಸಿ ನಾವು ಕಲಾಪದಿಂದ ದೂರ ಉಳಿಯುವುದಾಗಿ ಪ್ರತಿ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ಅಧಿವೇಶನಕ್ಕೂ ಮುನ್ನ ಪಕ್ಷದ ಶಾಸಕಾಂಗ ಪಕ್ಷದ ಸಭೆ ನಡೆಸಿ ಸರ್ಕಾರದ ನಿರ್ಧಾರಗಳ ಬಗ್ಗೆ ಕಟು ಟೀಕೆ ಮಾಡಿ. ನಂತರ ಬಹಿಷ್ಕರಿಸುವ ನಿರ್ಧಾರ ಕೈಗೊಂಡಿದ್ದಲ್ಲದೆ, ರೈತ ವಿರೋಧಿ ಧೋರಣೆ ಖಂಡಿಸಿ ರೈತ ಸಂಘಟನೆಗಳು ನಡೆಸುತ್ತಿರುವ ಧರಣಿ ಮತ್ತು ಪ್ರತಿಭಟನಾ ಸ್ಥಳಕ್ಕೆ ತೆರಳಿದರು.

ವಿಧಾನಸೌಧದಿಂದ ಸ್ವಾತಂತ್ರ್ಯ ಉದ್ಯಾನವನದವರೆಗೂ ಎಲ್ಲಾ ಸದಸ್ಯರು ಕಾಲ್ನಡಿಗೆಯಲ್ಲಿ ನಡೆದು ಅಲ್ಲಿನ ರೈತರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿ ಸರ್ಕಾರದ ನೀತಿಗಳನ್ನು ಖಂಡಿಸಿದರು.

ಆದರೆ, ವಿಧಾನ ಪರಿಷತ್ತಿನಲ್ಲಿ ಮಾತ್ರ ಕಾಂಗ್ರೆಸ್ ಸದಸ್ಯರು ಎಂದಿನಂತೆ ಕಲಾಪದಲ್ಲಿ ಪಾಲ್ಗೊಂಡು ಅಲ್ಲಿ ಗೋಹತ್ಯೆ ನಿಷೇಧ ವಿಧೇಯಕವನ್ನು ವಿರೋಧಿಸಿದರು. ಪ್ರತಿಪಕ್ಷದ ಸದಸ್ಯರಿಲ್ಲದೆ, ಸದನ ನಡೆಸಬಾರದು ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರ ಮನವೊಲಿಸಲು ಸರ್ಕಾರಕ್ಕೆ ಸೂಚಿಸಿ ಸದನವನ್ನು 10 ನಿಮಿಷ ಮುಂದೂಡಿದರು.

ಮತ್ತೆ ಸದನ ಸಮಾವೇಶಗೊಂಡಾಗ ಕಾಂಗ್ರೆಸ್ ಸದಸ್ಯರು ಬರುವ ನಿರೀಕ್ಷೆಯಲ್ಲಿ ಕಾರ್ಯಕಲಾಪ ಆರಂಭಿಸುವುದಾಗಿ ತಿಳಿಸಿ ವಿಧೇಯಕದ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟರು.

## ಸರ್ಕಾರಿ ಆಸ್ಪತ್ರೆಗಳು ಮೇಲ್ದರ್ಜೆಗೆ ಸದ್ಯಕ್ಕಿಲ್ಲ

ಬೆಂಗಳೂರು, ಡಿ.10 - ಜಿಲ್ಲಾ ಕೇಂದ್ರಗಳಲ್ಲಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಕೇಂದ್ರ ಸರ್ಕಾರ ಅನುದಾನ ನೀಡುತ್ತಿರುವ ಹಿನ್ನೆಲೆಯಲ್ಲಿ ಸದ್ಯಕ್ಕೆ ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸಾಧ್ಯವಿಲ್ಲ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಐಹೊಳೆ ಡಿ.ಮಹಾಲಿಂಗಪ್ಪ ಅವರ ಪ್ರಶ್ನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಉತ್ತರ ನೀಡಿದ ಅವರು, ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ, ಕೇಂದ್ರ ಸರ್ಕಾರ 350 ಕೋಟಿ ರೂ. ನೀಡುತ್ತಿದೆ. ಇದಕ್ಕೆ ಸರಿಸಮನಾದ ಅನುದಾನವನ್ನು ರಾಜ್ಯ ಸರ್ಕಾರವೂ ನೀಡಬೇಕು ಎಂದರು.

ನಮ್ಮ ಪಾಲಿನ ಅನುದಾನ ನೀಡದಿದ್ದರೆ, ಹೊಸ ಕಾಲೇಜು ಸ್ಥಾಪಿಸಲಾಗುವುದಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ದೊಡ್ಡ ಪ್ರಮಾಣದ ಆಸ್ಪತ್ರೆಗಳು ಆಗುವುದಿಲ್ಲ. ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ ಅನುದಾನ ನೀಡಬೇಕಾಗಿರುವುದರಿಂದ ಸದ್ಯಕ್ಕೆ ತಾಲ್ಲೂಕು ಆಸ್ಪತ್ರೆ ಉನ್ನತ್ತೀಕರಿಸಲಾಗುವುದಿಲ್ಲ ಎಂದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞರು, ವೈದ್ಯರು ಹಾಗೂ ಅರೆ ವೈದ್ಯಕೀಯ ಸಿಬ್ಬಂದಿ ವರ್ಗದವರನ್ನು ಭರ್ತಿ ಮಾಡಲು ಈಗಾಗಲೇ ಇಲಾಖೆ ಕ್ರಮ ಕೈಗೊಂಡಿದೆ ಎಂದರು.

## ವಿವೇಕಾನಂದ ಬಡಾವಣೆ ನಾಗರಿಕ ಸಮಿತಿಗೆ ಆಯ್ಕೆ

ದಾವಣಗೆರೆ, ಡಿ.10- ಸ್ವಾಮಿ ವಿವೇಕಾನಂದ ಬಡಾವಣೆಯ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷರಾಗಿ ಉಮೇಶ್ ಎನ್. ಪಾಟೀಲ್, ಉಪಾಧ್ಯಕ್ಷರಾಗಿ ಎಂ.ಕೆ. ಪ್ರಕಾಶ್, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಸಿ. ಚನ್ನಪ್ಪ, ಸಹ ಕಾರ್ಯದರ್ಶಿಯಾಗಿ ಕೆ. ಸುರೇಶ್, ಖಜಾಂಚಿಯಾಗಿ ಬಿ. ಬಸವರಾಜ್ ಆಯ್ಕೆಯಾಗಿದ್ದು, ಇವರೊಂದಿಗೆ 10 ಜನ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.





## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ, ನಂ.120,ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ–577001




### ಬ್ಯಾಂಕಿನ ಸದಸ್ಯರ ಗಮನಕ್ಕೆ

ಈ ಮೂಲಕ ನಮ್ಮ ಬ್ಯಾಂಕಿನ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ ಕೋವಿಡ್–19ರ ವೈರಾಣು ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಇ 43 ಸಿ.ಎಲ್ಎಮ್ 2020 (ಇ) ಬೆಂಗಳೂರು. ದಿನಾಂಕ 21.10.2020ರ ಅನ್ವಯ ಬ್ಯಾಂಕಿನ ಸದಸ್ಯರ ಸುರಕ್ಷತೆಯ ಹಿತದೃಷ್ಟಿಯಿಂದ ದಿನಾಂಕ 29.10.2020ರಂದು ನಡೆದ ಆಡಳಿತ ಮಂಡಳಿ ಸಭೆಯ ತೀರ್ಮಾನದ ಮೇರೆಗೆ ವಾರ್ಷಿಕ ಮಹಾಸಭೆಯನ್ನು ವೀಡಿಯೋಕಾನ್ಫರೆನ್ಸ್/ವರ್ಚ್ಯುಯಲ್ ಮೂಲಕ ದಿನಾಂಕ 13.12.2020ರ ಭಾನುವಾರ ಮಧ್ಯಾಹ್ನ 12.30 ಗಂಟೆಗೆ ನಡೆಸಲು ತೀರ್ಮಾನಿಸಿರುವುದರಿಂದ ಮಾನ್ಯ ಸದಸ್ಯರು ತಮ್ಮ ಮೊಬೈಲ್‌ನಲ್ಲಿ **Zoom App**ನ್ನು ಅಳವಡಿಸಿಕೊಂಡು ಬ್ಯಾಂಕಿನಿಂದ ತಮ್ಮ ಮೊಬೈಲ್‌ಗೆ ಎಸ್ಎಂಎಸ್ ಮೂಲಕ ಕಳುಹಿಸುವ ಲಿಂಕ್ **https://us02web.zoom.us/j/8578136382?pwd=UXhMWVZpOThqY0xDcmRuQ0dPTE5sZz09** ಅಥವಾ **YOU Tube Link https:/youtu.be/ubvjpN794ks** ಅಥವಾ ನಮ್ಮ ಬ್ಯಾಂಕಿನ ವೆಬ್‌ಸೈಟ್ **www.bapujicoopbank.com**ನ್ನು ಒತ್ತುವ ಮೂಲಕ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೂಲಕ ಭಾಗವಹಿಸಲು ವಿನಂತಿಸಲಾಗಿದೆ.

ಸಹಕಾರ ಸಂಘಗಳ ಕಾಯ್ದೆ ಕಲಂ 27ಎ ರ ಅನ್ವಯ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಸದಸ್ಯರು ಮೂರು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ ಈ ಲಿಂಕ್ ಮೂಲಕ ತಾವುಗಳು ಮಹಾಸಭೆಗೆ ಹಾಜರಾದಲ್ಲಿ ವಾರ್ಷಿಕ ಮಹಾಸಭೆಗೆ ಹಾಜರಾದಂತೆ ಪರಿಗಣಿಸಲಾಗುವುದು.

ಬ್ಯಾಂಕಿನ ಎಲ್ಲಾ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದ್ದು, ವಿಷಯ ಸೂಚಿಯನ್ನು ಕ್ರಮವಾಗಿ ದಿನಾಂಕ 01.12.2020 ಮತ್ತು 06.12.2020ರಂದು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ.

ಮಾನ್ಯ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವು ತಲುಪದೇ ಇದ್ದಲ್ಲಿ ಈ ಪ್ರಕಟಣೆಯನ್ನು ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವೆಂದು ತಿಳಿದು ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೂಲಕ ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ಬ್ಯಾಂಕಿನ ವೆಬ್‌ಸೈಟ್ **www.bapujicoopbank.com** ನ್ನು ಸಂಪರ್ಕಿಸಿ.

ಸಹಿ/– **ಜಿ.ವಿ.ಶಿವಶಂಕರ್**
ಪ್ರಧಾನ ವ್ಯವಸ್ಥಾಪಕರು

ಸಹಿ/– **ಡಾ॥ ಶಾಮನೂರು ಶಿವಶಂಕರಪ್ಪ**
ಅಧ್ಯಕ್ಷರು

## ಕಾಲೇಜು ಆರಂಭವಾದ ನಂತರವೇ ಅತಿಥಿ ಉಪನ್ಯಾಸಕರ ನೇಮಕ

ಬೆಂಗಳೂರು, ಡಿ.10 - ಶಾಲಾ-ಕಾಲೇಜು ಪ್ರಾರಂಭವಾದಾಗ ಪದವಿ ಪೂರ್ವ ಕಾಲೇಜಿನ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಹರೀಶ್‌ಪೂಂಜಾ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶೈಕ್ಷಣಿಕ ವರ್ಷ ಪ್ರಾರಂಭವಾದಾಗ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ನೇಮಕ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರಿಗೆ ವೇತನ ಪಾವತಿಸಲಾಗಿದೆ ಎಂದು ಸಚಿವರು ತಿಳಿಸಿದರು. ಇದಕ್ಕೂ ಮುನ್ನ ಮಾತನಾಡಿದ ಹರೀಶ್ ಪೂಂಜಾ, ಕಳೆದ ಜುಲೈನಿಂದ ಆನ್‌ಲೈನ್ ತರಗತಿಗಳು ಪ್ರಾರಂಭವಾಗಿದ್ದು, ಅತಿಥಿ ಉಪನ್ಯಾಸಕರಿಗೆ ವೇತನವಿಲ್ಲದೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬೇರೆ ಬೇರೆ ವೃತ್ತಿ ಅವಲಂಬಿಸಿದ್ದಾರೆ. ಕೂಲಿ ಕೆಲಸಕ್ಕೂ ಇಳಿಯುವಂತಾಗಿದೆ. ಈಗಾಗಲೇ ಪದವಿ ಕಾಲೇಜುಗಳ ಉಪನ್ಯಾಸಕರಿಗೆ ವೇತನ ಕೊಡಲಾಗಿದೆ. ಅದರಂತೆ ಪದವಿ ಪೂರ್ವ ಕಾಲೇಜಿನ ಅತಿಥಿ ಉಪನ್ಯಾಸಕರಿಗೂ ವೇತನ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

## ವಿವಿ ಕ್ಯಾಂಪಸ್‌ನಲ್ಲಿ ಮರಗಳ ಮಾರಣಹೋಮ ತಡೆಯಲು ಮನವಿ

ದಾವಣಗೆರೆ, ಡಿ.10- ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹಾಲುವರ್ತಿ ಮತ್ತು ಉಳುಪಿನಕಟ್ಟೆಯ ವಿವಿ ಕ್ಯಾಂಪಸ್‌ನಲ್ಲಿ ತಂತಿಬೇಲಿ ನಿರ್ಮಾಣಕ್ಕಾಗಿ 143 ಮರಗಳ ಮಾರಣ ಹೋಮ ನಡೆಸುವುದನ್ನು ತಡೆಯುವಂತೆ ಜನಸಾಮಾನ್ಯರ ಸೇವಾ ಸಂಸ್ಥೆ ಕರ್ನಾಟಕವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಅಭಿವೃದ್ಧಿಗಾಗಿ ಪರಿಸರ ನಾಶವನ್ನು ಮಕ್ಕಳ ಎದುರಿಗೆ ಮಾಡಲಾಗುತ್ತಿದೆ. ಸದರಿ ಎಲ್ಲಾ ಮರಗಳನ್ನು ಉಳಿಸಿಕೊಂಡು ಕ್ಯಾಂಪಸ್‌ನಲ್ಲಿ ತಂತಿಬೇಲಿ ನಿರ್ಮಾಣ ಮಾಡಿದರೆ ಪರಿಸರವನ್ನು ಕಾಪಾಡುವ ನಿಟ್ಟಿನಲ್ಲಿ ಮಕ್ಕಳಿಗೆ ತಿಳಿಹೇಳಿದಂತಾಗುತ್ತದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಪರಿಸರ ಪ್ರೇಮಿಗಳ, ವಿದ್ಯಾರ್ಥಿಗಳ, ಸಾರ್ವಜನಿಕರ ಅಭಿಪ್ರಾಯವನ್ನು ಪರಿಗಣಿಸದೇ ಕಟಾವಣೆ ಆದೇಶ ನೀಡಿರುತ್ತದೆ. ಈ ಕುರಿತು ಇಲಾಖೆಯ ಅಧಿಕಾರಿಗಳು ಆದೇಶವನ್ನು ಪರಿಶೀಲಿಸಿ, ನೀಡಲಾಗಿರುವ 143 ಮರಗಳ ಕಟಾವಣೆ ಆದೇಶವನ್ನು ರದ್ದುಪಡಿಸಲು ಸಂಸ್ಥೆಯ ಅಧ್ಯಕ್ಷ ಪ್ರಸನ್ನ ಬೆಳಕೇರಿ ಕೋರಿದ್ದಾರೆ.

### ಪ್ರೀತಿಯೆಂಬ ಭ್ರಮೆ

ಪ್ರೀತಿಯೆಂಬ ಭ್ರಮೆಯಲ್ಲಿ
ಮೋಸ ಹೋಗಬೇಡ ಮನುಜ
ಕಾಲ ಬಹಳ ಕಠಿಣ !

ನಾನು ನನ್ನವರು ಎಂದು
ಬೀಗಬೇಡ ಮನುಜ
ಯಾರು ಬರಲಾರರು ನಿನ್ನ ಜೊತೆಗೆ !

ನಿನ್ನ ಅರ್ಥಮಾಡಿಕೊಳ್ಳದವರು
ಅಪಾರ್ಥ ಸಂದೇಶ ನೀಡುವರು
ಜಾಗೃತನಾಗು ಮನುಜ !

ಒಳ್ಳೆಯತನದ ದುರುಪಯೋಗ
ಕಾಲಕ್ಕೆ ತಕ್ಕ ಬದಲಾವಣೆ
ಈ ಕಾಲದ ಮಹಿಮೆ ಮನುಜ !

ಪ್ರೀತಿ ಸ್ನೇಹ ವಿಶ್ವಾಸ
ದೂರವಾಯಿತು ಬದುಕಿಂದ
ತಿಳಿ ಬೇಗ ನೀ ಮನುಜ !

ಜಗದೀಶನ ನೆನೆಯುತ್ತ
ಮಾಯಾ ಪ್ರಪಂಚ ಮರೆಯುತ್ತ
ಸಾಗು ಮುಂದಕೆ ಮನುಜ !

- ಜೆಂಬಿಗಿ ಮೃತ್ಯುಂಜಯ
ಉಪನ್ಯಾಸಕರು, ದಾವಣಗೆರೆ

### ದಿನದ ಚುಟುಕು

ಸುಳ್ಳಿನ ಸಿಕ್ಕಲ್ಲಿ ಸಿಕ್ಕರೇ
ಹೊರ ಬರಲಾಗದು ಪಕ್ಕನೆ
ಸುಳ್ಳದು ಬಾಳಿಗೆ ಮಾರಕ
ಸತ್ಯದ ಮಾತದು ಪೂರಕ.

- ವೀಕೆಎಂ

# ಕೊನೆಗೂ ಪೊಲೀಸ್ ಠಾಣೆಯ ಸಭೆಗೆ ಬಂದ ಕಾರಂತಜ್ಜ


## ಕಡಲತೀರದ ಭಾರ್ಗವ ಕೋಟಾ ಶಿವರಾಮ ಕಾರಂತರವರ ಪುಣ್ಯಸ್ಮರಣೆಯ ಪ್ರಯುಕ್ತ ಹೀಗೊಂದು ಲೇಖನ...

ಕಡಲತೀರದ ಭಾರ್ಗವ ಎಂದೇ ಪ್ರಸಿದ್ಧಿಯಾಗಿದ್ದ ಕನ್ನಡದ ಮೇರು ಸಾಹಿತಿ ಕೋಟಾ ಶಿವರಾಮ ಕಾರಂತರವರು ನಮ್ಮನ್ನಗಲಿ ಇದೇ ಡಿಸೆಂಬರ್ 9ಕ್ಕೆ 23 ವರ್ಷಗಳು ಸಂದಿವೆ. ನಡೆದಾಡುವ ವಿಶ್ವಕೋಶ ದಂತಿದ್ದ ಕಾರಂತಜ್ಜ ಅವರು ಕನ್ನಡ ಸಾಹಿತ್ಯ-ಸಂಸ್ಕೃತಿಯ ವಕ್ತಾರ, ಕವಿ, ಕಾದಂಬರಿಕಾರ, ನಾಟಕ ಕಾರ, ಅನುವಾದಕ, ವೈಜ್ಞಾನಿಕ ಬರಹಗಾರ ಹೀಗೆ ನಾನಾ ಪ್ರಾಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಕ್ಷರ ಲೋಕವನ್ನು ಸಮೃದ್ಧಗೊ ಳಿಸಿದವರು. ಸಾಹಿತ್ಯ ಕೃಷಿಯಲ್ಲದೇ ಯಕ್ಷಗಾನ, ಪರಿಸರ ಕಾಳಜಿಯೂ ಅವರ ಆಸಕ್ತಿಗಳಾಗಿದ್ದವು. ಅವರ ಪುಣ್ಯ ಸ್ಮರಣೆಯ ಪ್ರಯುಕ್ತ ಹೀಗೊಂದು ಲೇಖನ....

ಕಾರಂತಜ್ಜನ ಒಡನಾಟದಿಂದ ನಾನು ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡಂತೆ, ಅವರಿಗೆ ಮೊದ ಮೊದಲು ಪೊಲೀಸರ ಬಗ್ಗೆ ಒಂದು ಬಗೆಯ ತಾತ್ಸಾರ, ಸಣ್ಣ ಪ್ರಮಾಣದ ಸಿಟ್ಟೂ ಇದ್ದಂತಿತ್ತು. ಅದಕ್ಕೊಂದು ಪುಟ್ಟ ಹಿನ್ನೆಲೆಯೂ ಇದೆ. 1983-84ರ ಆಸುಪಾಸಿನಲ್ಲಿ ಒಮ್ಮೆ ಶಿವರಾಮ ಕಾರಂತರ ಮನೆಯಲ್ಲಿ ಕಳ್ಳತನವಾಗಿತ್ತಂತೆ. ಸ್ವಲ್ಪ ದುಬಾರಿ ಮೌಲ್ಯದ ಸರುಕುಗಳೇ ಕಾಣೆಯಾಗಿದ್ದವು. ಪೊಲೀಸರಿಗೆ ದೂರನ್ನೂ ಕೊಟ್ಟಿದ್ದರು. ಆದರೆ ಕಳ್ಳತನವನ್ನು ಭೇದಿಸುವಲ್ಲಿ ಪೊಲೀಸರು ಅಷ್ಟೇನು ಮುತುವರ್ಜಿ ತೋರಿಸಿರಲಿಲ್ಲವಂತೆ. ಇದರಿಂದ ಪೊಲೀಸ್ ಇಲಾಖೆಯ ಮೇಲೆಯೇ ಅವರಿಗೆ ಒಂದು ಬಗೆಯ ತಾತ್ಸಾರ ಮಡುಗಟ್ಟಿತ್ತು. 1987 ಅಕ್ಟೋಬರ್ 2 ರಂದು ಗಾಂಧಿ ಜಯಂತಿಯ ಶುಭ ದಿನದಂದು ಕೋಟಾ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿ ನಾನು ಚಾರ್ಜ್ ತೆಗೆದುಕೊಂಡಾಗ, ಕನ್ನಡ ಸಾಹಿತ್ಯದ ಕುರಿತು ಅಪಾರ ಅಭಿರುಚಿ ಇರುವ ನನಗೆ ಸಹಜವಾಗಿಯೇ ನಮ್ಮದೇ ಠಾಣಾ ವ್ಯಾಪ್ತಿಯ ಸಾಲಿಗ್ರಾಮದಲ್ಲಿ ನೆಲೆಸಿರುವ ಕಾರಂತಜ್ಜನನ್ನು ಭೇಟಿ ಮಾಡಬೇಕೆಂಬ ಹಂಬಲ ಮೂಡಿತು. ನನ್ನ ಈ ಬಯಕೆಯನ್ನು ಅರಿತ ಸಿಬ್ಬಂದಿಗಳು, ಸಾರ್, ಕಾರಂತರಿಗೆ ಪೊಲೀಸರೆಂದರೆ ಅಷ್ಟಕ್ಕಷ್ಟೇ, ಯಾಕೆ ಅವರ ಉಸಾಬರಿಗೆ ಹೋಗಿ ಮುಖಭಂಗ ಮಾಡಿಸಿಕೊಳ್ತೀರಿ ಅನ್ನೋ ಗೀತೋಪದೇಶ ಮಾಡಿದರು. ಆದರೆ ನಾನು ಜಗ್ಗಲಿಲ್ಲ.

ಒಂದು ದಿನ ಕಾರಂತಜ್ಜನ ಮನೆ 'ಸುಹಾಸ್' ಮೆಟ್ಟಿಲು ತುಳಿದೇಬಿಟ್ಟೆ. ತುಸು ಅಳುಕಿನಿಂದಲೇ ಒಳನಡೆದೆ. ನಮ್ಮ ಸಿಬ್ಬಂದಿಗಳು ಯಾವ ಪರಿ ಭಯವನ್ನು ನನ್ನಲ್ಲಿ ಮೂಡಿಸಿದ್ದರೆಂದರೆ, ನನ್ನ ಮೈಮೇಲಿನ ಸಮವಸ್ತ್ರ ನೋಡುತ್ತಿದ್ದಂತೆಯೇ ಕ್ಯಾಕರಿಸಿ ಉಗಿದು ಕಳಿಸಿಬಿಡುತ್ತಾರೇನೋ ಎಂಬ ಆತಂಕ ನನ್ನಲ್ಲಿತ್ತು. ನಮ್ಮ ಸಿಬ್ಬಂದಿಗಳಷ್ಟೇ ಅಲ್ಲ, ನನಗೆ ಪರಿಚಯವಿದ್ದ ಅದೇ ಸಾಲಿಗ್ರಾಮದ ಅನೇಕರು ಸೂಕ್ಷ್ಮ ಸ್ವಭಾವದ ಕಾರಂತರನ್ನು ಮಾತನಾಡಿಸುವುದಕ್ಕೇ ಹೆದರಿಕೊಳ್ಳುತ್ತಿದ್ದ ಅನುಭವಗಳನ್ನೂ ನಾನು ಕೇಳಿದ್ದೆ. ಆದರೆ ಅಂತದ್ದೇನೂ ಘಟಿಸಲಿಲ್ಲ. ಮನೆಯಲ್ಲೇ ಇದ್ದ ಅವರು ನನ್ನನ್ನು ಆತ್ಮೀಯತೆಯಿಂದಲೇ ಸ್ವಾಗತಿಸಿದರು. ಅಷ್ಟೇ ತಲ್ಲೀನತೆಯಿಂದ ನನ್ನೊಂದಿಗೆ ಲೋಕಾರೂಢಿ ಹರಟಿದರು. ಅಲ್ಲಿಂದಾಚೆಗೆ ಆಗಾಗ್ಗೆ ಅವರ ಮನೆಗೆ ಭೇಟಿ ನೀಡಿ, ಅವರು ವಿರಾಮದಿಂದಿದ್ದರೆ ಹರಟೆ ಹೊಡೆದು ಬರುವ ಪರಿಪಾಠ ಬೆಳೆಸಿಕೊಂಡೆ.

ಸಾಮಾನ್ಯವಾಗಿ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಪ್ರತಿ ತಿಂಗಳಿಗೊಮ್ಮೆ ನಾಗರಿಕ ಸಮಿತಿ ಸಭೆ ನಡೆಸುವ ಪ್ರತೀತಿ ಇದೆ. ಅಂತೆಯೇ ಕೋಟ ಪೊಲೀಸ್ ಠಾಣಾ ಪ್ರಭಾರ ವಹಿಸಿಕೊಂಡ ನಂತರ ಮೊದಲ ನಾಗರಿಕ ಸಮಿತಿ ಸಭೆಗೆ ಏನಾದರೂ ಮಾಡಿ ಡಾ. ಶಿವರಾಮ ಕಾರಂತರನ್ನು ಕರೆಸಲೇಬೇಕೆಂದು ಮನಸ್ಸಿನಲ್ಲಿ ಕಾಡುತ್ತಿತ್ತು. ಹಾಗಾಗಿ ನಾಗರಿಕ ಸಮಿತಿಯ ಮೂವತ್ತು ಸದಸ್ಯರ ಪಟ್ಟಿಯನ್ನು ನವೀಕರಿಸಲು ನಿರ್ಧರಿಸಿದೆ. ಈ ಪಟ್ಟಿಗೆ ಕಾರಂತಜ್ಜರನ್ನು ಸೇರಿಸುವುದು ನನ್ನ ಇರಾದೆಯಾಗಿತ್ತು. ಒಂದು ಸಂಜೆ ಅವರ ಮನೆಗೆ ಹೋಗಿ ಅಳುಕಿನಿಂದಲೇ ಅವರ ಅನುಮತಿ ಕೇಳಿದೆ. ಸಭೆಯ ವಿಚಾರ, ಕಾರ್ಯವೈಖರಿ, ಉದ್ದೇಶ ಮೊದಲಾದವುಗಳನ್ನು ನನ್ನೊಂದಿಗೆ ಚರ್ಚಿಸಿ ನಂತರ ಒಪ್ಪಿಗೆ ಕೊಟ್ಟರು. ನನಗೋ ಎಲ್ಲಿಲ್ಲದ ಖುಷಿ. 1987ರ ನವೆಂಬರ್ ತಿಂಗಳ ಒಂದು ದಿನ ಸಭೆಯ ದಿನಾಂಕ ಗೊತ್ತು ಮಾಡಿ ಎಲ್ಲರಿಗೂ ಸುದ್ದಿ ತಲುಪಿಸುವ ವ್ಯವಸ್ಥೆ ಮಾಡಿದೆ.



ಕಾರಂತಜ್ಜ ಈ ಪೊಲೀಸ್ ಸಭೆಗೆ ಬರುತ್ತಿರೋ ವಿಚಾರ ಕೇಳಿ ಇತರೆ ಸದಸ್ಯರೆಲ್ಲಾ ಅಚ್ಚರಿ ವ್ಯಕ್ತಪಡಿಸಿದರು. 'ಇಲ್ಲಾ, ಅವರು ಬರೋಲ್ಲ' ಬಿಡಿ ಎಂಬ ನಕಾರಾತ್ಮಕ ಮಾತುಗಳನ್ನೇ ಆಡಿದರು. ಆದರೆ ನನಗೆ ವಿಶ್ವಾಸವಿತ್ತು. ಈ ಕೌತುಕ ನೋಡುವುದಕ್ಕೋ ಏನೋ, ಸಭೆಯ ದಿನ ಪಟ್ಟಿಯಲ್ಲಿದ್ದ ಮೂವತ್ತು ಸದಸ್ಯರ ಪೈಕಿ ದಾಖಲೆಯ ಇಪ್ಪತ್ತೇಳು ಜನ ಅವಧಿಗೂ ಮುನ್ನವೇ ಠಾಣೆಯಲ್ಲಿ ಬಂದು ಜಮಾಯಿಸಿದರು. ಅವರ ಉತ್ಸಾಹ ಕಂಡು ನನಗೂ ಕೊಂಚ ದಿಗಿಲು ಶುರುವಾಯ್ತು. ಕಾರಂತಜ್ಜ ಕೊನೇ ಘಳಿಗೆಯಲ್ಲಿ ಮನಸ್ಸು ಬದಲಾಯಿಸಿಬಿಟ್ಟರೆ, ಇವರೆದುರಿಗೆ ಮುಜುಗರ ಅನುಭವಿಸಬೇಕಾಗುತ್ತದಲ್ಲ ಅಂತ ಒಳಗೊಳಗೇ ಗಲಿಬಿಲಿಗೊಂಡೆ. ಕಾರಂತರನ್ನು ಕರೆತರಲು ಒಬ್ಬ ಎ.ಎಸ್.ಐ.ಗೆ ಹೇಳಿ ಕಾರಿನ ವ್ಯವಸ್ಥೆ ಮಾಡಿ ಕಳಿಸಿದೆ.

ಕೊನೆಗೂ ಕಾರಂತರು ಸಭೆಗೆ ಬಂದೇಬಿಟ್ಟರು. ಎಲ್ಲರಿಗೂ ಆಶ್ಚರ್ಯ! ನನಗೆ ಮಾತ್ರ ನಿಟ್ಟುಸಿರು!!. ಹಾರ ಹಾಕಿ ಸ್ವಾಗತಿಸಿ ಸಭೆ ಶುರು ಮಾಡಿದೆವು. ಸುಮಾರು ಎರಡು ಗಂಟೆ ಕಾಲ ನಡೆದ ಸಭೆಯುದ್ದಕ್ಕೂ ಉಪಸ್ಥಿತರಿದ್ದ ಕಾರಂತಜ್ಜ ಅಪರಾಧ ತಡೆ, ಸುಗಮ ಸಂಚಾರ ಸುವ್ಯವಸ್ಥೆ ಹಾಗೂ ಸಾಮಾಜಿಕ ಪಿಡುಗುಗಳನ್ನು ಹತ್ತಿಕ್ಕುವ ಬಗ್ಗೆ ಬಹಳಷ್ಟು ಉಪಯುಕ್ತ ಸಲಹೆ ನೀಡಿದರು. ಕೊನೆಗೆ, ಕಾರಿನಲ್ಲೇ ಅವರನ್ನು ಬೀಳ್ಕೊಡುವ ವ್ಯವಸ್ಥೆ ಮಾಡಿದೆವು. ಅಂತೂ ಕಾರಂತರನ್ನು ಠಾಣೆಗೆ ಕರೆಸಿದ ನನ್ನ 'ಸಾಹಸ'(!)ವನ್ನು ಎಲ್ಲರು ಅವತ್ತು ಕೊಂಡಾಡಿದ್ದೇ, ಕೊಂಡಾಡಿದ್ದು!! ನಾನೂ ಹಿರಿಹಿರಿ ಹಿಗ್ಗಿ ಹೋದೆ. ಮಾರನೇ ದಿನ 'ಉದಯವಾಣಿ' ಪತ್ರಿಕೆಯಲ್ಲಿ ಕೋಟ ಪೊಲೀಸ್ ಠಾಣೆಯಲ್ಲಿ ಡಾ.ಶಿವರಾಮ ಕಾರಂತರು ಎನ್ನುವ ಶೀರ್ಷಿಕೆಯಲ್ಲಿ ನಾಗರಿಕ ಸಮಿತಿ ಸಭೆಯ ನಡವಳಿಗಳ ಕುರಿತು ಲೇಖನ ಪ್ರಕಟವಾಗಿತ್ತು.

ನನ್ನ ಪಾಲಿನ ಅತಿದೊಡ್ಡ ದುರದೃಷ್ಟಕರ ಸಂಗತಿಯೆಂದರೆ,ಈ ಖಾಕಿ ಸಮವಸ್ತ್ರದ ಹೊಣೆ ಹೊತ್ತೇ ನಾನು ಅವರ ಅಂತ್ಯಸಂಸ್ಕಾರದ ಬಂದೋಬಸ್ತ್ ಡ್ಯೂಟಿಯನ್ನೂ ಮಾಡಬೇಕಾಗಿ ಬಂದದ್ದು. 1997 ರಲ್ಲಿ ನಾನು ಕಾರ್ಕಳದ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೆ. ಡಿಸೆಂಬರ್ 9 ರ ಮುಂಜಾನೆ ಉಡುಪಿಯ ಎಸ್.ಪಿ.ಯವರು ಫೋನ್ ಮಾಡಿ, 'ಶಿವರಾಮ ಕಾರಂತರು ಆಸ್ಪತ್ರೆಯಲ್ಲೇ ಕೊನೆಯುಸಿರೆಳೆದಿದ್ದಾರೆ. ಅವರ ಹುಟ್ಟೂರು ಕೋಟಾದಲ್ಲೇ ಅಂತ್ಯಸಂಸ್ಕಾರ ನಡೆಯಲಿದ್ದು, ಕೂಡಲೇ ಸ್ಥಳಕ್ಕೆ ಹೋಗಿ ಬಂದೋಬಸ್ತ್ ಉಸ್ತುವಾರಿ ವಹಿಸಿ' ಎಂದರು. ಎರಡು ದಿನದ ಹಿಂದಷ್ಟೇ, ಅವರು ಆಸ್ಪತ್ರೆಗೆ ದಾಖಲಾಗಿದ್ದಾಗ, ಯೋಗಕ್ಷೇಮ ವಿಚಾರಿಸಲೆಂದು ಬಂದಿದ್ದ ಅಂದಿನ ಮುಖ್ಯಮಂತ್ರಿ ಜೆ.ಎಚ್.ಪಟೇಲರು ಹಾಗೂ ಸಚಿವರಾಗಿದ್ದ ಅನಂತನಾಗ್ ಅವರ ಸಂಗಡ ನಾನೂ ಹೋಗಿ ಹಾಸಿಗೆ ಮೇಲೆ ಪ್ರಜ್ಞಾಹೀನರಾಗಿ ಮಲಗಿದ್ದ ಕಾರಂತಜ್ಜರನ್ನು ಕಣ್ತುಂಬಿಕೊಂಡು ಬಂದಿದ್ದೆ. ಆದಷ್ಟು ಬೇಗ ಅವರು ಗುಣಮುಖರಾಗಲಿ ಎಂಬ ನನ್ನ ಮನವಿ ದೇವರನ್ನು ತಲುಪುವ ಮೊದಲೇ, ಕಾರಂತರ ಅಗಲಿಕೆಯ ಬೇಸರದ ವಾರ್ತೆ ನನ್ನನ್ನು ದುಃಖಕ್ಕೀಡು ಮಾಡಿತ್ತು.

ಉಡುಪಿ-ಕುಂದಾಪುರ ಮುಖ್ಯರಸ್ತೆಯಲ್ಲಿರುವ ಶ್ರೀ ಶಿವರಾಮ ಕಾರಂತರವರ ಹಳೆಯ ಮನೆ ಬಳಿ ಸೂಕ್ತ ಪೊಲೀಸ್ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಿದೆ. ಬೆಳಿಗ್ಗೆ ಸುಮಾರು 11 ಗಂಟೆಗೆ ಡಾ. ಶಿವರಾಮ ಕಾರಂತರ ಪಾರ್ಥಿವ ಶರೀರವು ಆಂಬ್ಯುಲೆನ್ಸ್ ಮೂಲಕ ಬಂದು ತಲುಪಿತು. ಅವತ್ತು ಕಾರಂತಜ್ಜನಿಗೆ ವಿದಾಯ ಹೇಳಲು ಸುಮಾರು ನಾಲ್ಕೈದು ಸಾವಿರ ಜನ ನೆರೆದಿದ್ದರು. ಸಾರ್ವಜನಿಕ ದರ್ಶನದ ನಂತರ ಸಂಜೆ ಸುಮಾರು 5-30ಕ್ಕೆ ಮನೆಯ ಹಿಂಭಾಗದ ತೋಟದಲ್ಲಿ ಮೊದಲೇ ಸಿದ್ದಪಡಿಸಿದ್ದ ಚಿತೆಯೇರಿದ ಕಾರಂತಜ್ಜನ ಶರೀರ ತನ್ನೆಲ್ಲಾ ಚೇತನವನ್ನು ನಮ್ಮಲ್ಲೇ ಉಳಿಸಿ, ನಿಸರ್ಗದಲ್ಲಿ ಲೀನವಾಯ್ತು. ಇತ್ತ ಚಿತೆಯ ಕೆನ್ನಾಲೆಗಳು ಕಡಲ ಭಾರ್ಗವನನ್ನು ತಬ್ಬಲು ಮುಗಿಲತ್ತ ಮುಖ ಮಾಡಿ ಸ್ಪರ್ಧೆಗಿಳಿದಿದ್ದರೆ, ಅತ್ತ ಪಡುವಣ ದಿಕ್ಕಿನಲ್ಲಿ ನೇಸರ ಕೂಡಾ ಭಾರವಾದ ಮನಸ್ಸಿನಿಂದ ಕಡಲಾಳದಲ್ಲಿ ಲೀನವಾಗುತ್ತಿದ್ದ.



- ಜಿ.ಎ. ಜಗದೀಶ್
ಪೊಲೀಸ್ ಅಧೀಕ್ಷಕರು (ನಿ)
ದಾವಣಗೆರೆ.

## ಅಪ್ರಾಪ್ತೆಯ ಅತ್ಯಾಚಾರ : ಕಾರಾಗೃಹ ಶಿಕ್ಷೆ

ದಾವಣಗೆರೆ, ಡಿ.10- ಆಟವಾಡುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಅತ್ಯಾಚಾರವೆಸಗಿದ್ದ ಆರೋಪಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ರೂ.ಗಳ ದಂಡ ವಿಧಿಸಿ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ (ಪೋಕ್ಸೋ) ನ್ಯಾಯಾಲಯ ತೀರ್ಪು ನೀಡಿದೆ.

ಸ್ಥಳೀಯ ಇಮಾಂ ನಗರದ ವಾಸಿ ಸಾಧಿಕ್ ಶಿಕ್ಷೆಗೊಳಗಾದ ಆರೋಪಿ. ಮೇ 19, 2019ರಂದು ಮಧ್ಯಾಹ್ನ 3ರ ವೇಳೆ ಅದೇ ಭಾಗದ ಝುಂಡೇ ಕಟ್ಟೆ ಬಳಿ ಆಟವಾಡುತ್ತಿದ್ದ 8 ವರ್ಷದ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ, ಈತನು ಅತ್ಯಾಚಾರವೆಸಗಿದ್ದ. ಈ ಬಗ್ಗೆ ಮಹಿಳಾ ಪೊಲೀಸ್ ಠಾಣೆಯಲ್ಲಿ ಆರೋಪಿ ಸಾಧಿಕ್ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಮಹಿಳಾ ಠಾಣೆಯ ವೃತ್ತ ನಿರೀಕ್ಷಕಿ ಪ್ರಭಾವತಿ ಶೇತಸನದಿ ಹಾಗೂ ಸಿಬ್ಬಂದಿಗಳು ಆರೋಪಿತನ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ ಕಲಂ 6 (ಪೋಕ್ಸೋ) 2012 ಹಾಗೂ 376 ಐಪಿಸಿ ಸೆಕ್ಷನ್‌ನಡಿ ಆರೋಪಣಾ ಪಟ್ಟಿ ಸಲ್ಲಿಸಿದ್ದರು.

ಸುದೀರ್ಘ ವಿಚಾರಣೆ ನಡೆದು ಆರೋಪಿ ಸಾಧಿಕ್ ಅಪರಾಧ ಎಸಗಿದ್ದು ಸಾಬೀತಾದ ಹಿನ್ನೆಲೆಯಲ್ಲಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ (ಪೋಕ್ಸೋ) ನ್ಯಾಯಾಲಯದ ನ್ಯಾಯಾಧೀಶರಾದ ಎಸ್. ನಾಗಶ್ರೀ ಅವರು ಆರೋಪಿತನಿಗೆ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದರು.

ಸರ್ಕಾರದ ಪರ ವಿಶೇಷ 2ನೇ ಹೆಚ್ಚುವರಿ ಮತ್ತು ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕ ಎಸ್.ಎಚ್.ಎಸ್. ಶೌಕತ್ ಅಲಿ ವಾದ ಮಂಡಿಸಿದ್ದರು.

## ಭಾರತ - ನೇಪಾಳ ನಡುವೆ ವೈಮಾನಿಕ ಸಂಪರ್ಕ

ನವದೆಹಲಿ, ಡಿ. 10 – ದ್ವಿಪಕ್ಷೀಯ ಏರ್ ಬಬಲ್ ವ್ಯವಸ್ಥೆಯಡಿ ವಿಮಾನ ಯಾನ ಸೇವೆಯನ್ನು ಪುನರಾರಂಬಿಸಲು ಭಾರತ ಮತ್ತು ನೇಪಾಳ ನಿರ್ಧರಿಸಿವೆ ಎಂದು ಮೂಲಗಳು ತಿಳಿಸಿವೆ. ಆರಂಭಿಕ ಹಂತದಲ್ಲಿ ದೆಹಲಿ ಹಾಗೂ ಕಠ್ಮಂಡು ನಡುವೆ ಪ್ರತಿನಿತ್ಯ ಒಂದು ವಿಮಾನ ಮಾತ್ರ ಸಂಚರಿಸಲಿದೆ. ಕೊರೊನಾ ಹರಡಿದ ನಂತರ ಉಭಯ ದೇಶಗಳ ನಡುವಿನ ವಿಮಾನ ಯಾನ ಸ್ಥಗಿತಗೊಳಿಸಲಾಗಿತ್ತು.

## ಮಾಲೀಕರ ವಿರುದ್ಧ ಕ್ರಮಕ್ಕೆ ಸಚಿವರ ಸೂಚನೆ

(1ನೇ ಪುಟದಿಂದ) ಸ್ವಚ್ಛತೆಗೆ ಹೆಚ್ಚಿನ ಗಮನ ನೀಡಬೇಕು. ರಸ್ತೆಗಳ ಮೇಲೆಲ್ಲಾ ಅಲ್ಲಲ್ಲಿ ಕಸ ಸುರಿದಿರುವುದು ಕಂಡು ಬರುತ್ತಿದ್ದು, ಅದನ್ನು ಸ್ವಚ್ಛಗೊಳಿಸುವ ಕೆಲಸ ಆಗಬೇಕು ಎಂದರು.

**ವಸತಿಗೃಹ ಶೀಘ್ರ ಸಿದ್ದಪಡಿಸಿ ನೀಡಲು ಸೂಚನೆ:** ಮಹಾನಗರ ಪಾಲಿಕೆ ವತಿಯಿಂದ ಪೌರ ಕಾರ್ಮಿ ಕರಿಗೆ ನೀಡಲು ಸಿದ್ದಗೊಳ್ಳುತ್ತಿರುವ ವಸತಿ ಗೃಹಗಳ ನಿರ್ಮಾಣ ಕಾರ್ಯ ವನ್ನು ಒಂದೆರಡು ತಿಂಗಳಲ್ಲಿ ಸಂಪೂ ರ್ಣಗೊಳಿಸಿ ಉದ್ಘಾಟನೆ ಮಾಡಿ ಸಲು ಕ್ರಮ ವಹಿಸುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಜಲಸಿರಿ ಯೋಜನೆಯ ಕಾಮಗಾರಿ ಪ್ರಗತಿ ಯಲ್ಲಿದ್ದು, 2022 ರೊಳಗೆ ಪೂರ್ಣಗೊಳಿಸುವಂತೆ ಏಜೆನ್ಸಿಯವರಿಗೆ ಗಡುವು ನೀಡಲಾಗಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 2022 ರವರೆಗೆ ಕಾಯುವುದು ಬೇಡ. ಅಲ್ಲಿಯವರೆಗೆ ಜನರಿಗೆ ಕುಡಿಯುವ ನೀರು ಬೇಡವೇ? ಆದಷ್ಟು ಬೇಗ ನನ್ನ ಅವಧಿಯಲ್ಲಿಯೇ ಪೂರ್ಣಗೊಳಿಸಲು ಕ್ರಮ ವಹಿಸಿ ಎಂದರು.

ಜಿಲ್ಲೆಯಲ್ಲಿ 109 ಕಡೆ ಐಎಲ್‌ಆರ್ ಪಾಯಿಂಟ್‌ಗಳು ಸಿದ್ದವಿದ್ದು, ತಾಲ್ಲೂಕು ಹಂತಗಳಲ್ಲಿ ಸಭೆಗಳು ನಡೆದಿವೆ. ಇಂದೇ ಕೋವಿಡ್ ಲಸಿಕೆ ಬಂದರೂ ಸಂಬಂಧಿಸಿದವರಿಗೆ ನೀಡಲು ಎಲ್ಲಾ ರೀತಿಯ ತಯಾರಿಯಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

**ಜನಸಂಪರ್ಕ ಸಭೆ :** ಮುಂಬರುವ ಜನವರಿಯಿಂದ ತಾಲ್ಲೂಕು ಮಟ್ಟದಲ್ಲಿ ಜನಸಂಪರ್ಕ ಸಭೆಗಳನ್ನು ಆಯೋಜಿಸಿ, ಅರ್ಜಿದಾರರಿಂದ ಅರ್ಜಿಗಳನ್ನು ಪಡೆದು ಶೀಘ್ರವಾಗಿ ವಿಲೇವಾರಿ, ಸೌಲಭ್ಯ ಒದಗಿಸುವಂತೆ ಸೂಚನೆ ನೀಡಿದ ಅವರು ತಾವೂ ಜನಸಂಪರ್ಕ ಸಭೆಗಳಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಜಿ.ಪಂ. ಸಿಇಓ ಪದ್ಮಾ ಬಸವಂತಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಮಮತಾ ಹೊಸಗೌಡರ್ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ಎಸ್‌ಎಲ್‌ಓ ರೇಷ್ಮಾ ಹಾನಗಲ್, ಡಿಹೆಚ್‌ಓ ಡಾ. ನಾಗರಾಜ್, ಡಿಎಸ್‌ಓ ಡಾ.ರಾಘವನ್ ಇತರರಿದ್ದರು.

### ಬೇಕು ನಂಬಿಕೆ ಭಕ್ತಿ

ಏಕೆ ಬೇಕು ಭಕ್ತಿ ಎಲ್ಲಿಹನು ಪರಮಾತ್ಮ?
ಸಾಕಲ್ಲವೆ ನಮಗೆ ಕಾಣಿಸುವ ಪ್ರಕೃತಿ?
ಮೂಕರೆ ನಾವು ಮೂಢ ನಂಬಿಕೆ ಬೇಕೆ?
ಉಕ್ಕುವ ವಿಜ್ಞಾನ ಒಂದೆ ಸಾಲದೆ?

ಎಂಬ ಪ್ರಶ್ನೆಯ ಅಂತರಂಗಕ್ಕೆ ಹಾಕಿಕೊ
ನಂಬಲಾರದ ಸತ್ಯಗಳನೊಪ್ಪಿಕೋ
ಬೆಂಬಿಡದೆಪ್ರತಿಕ್ಷಣವುರಕ್ಷಿಪುದನೆನಸಿಕೋ
ಬಿಂಬನಾಗಿರುವ ದೇವನ ಕಂಡುಕೋ

ಎಲ್ಲರಿಗೂ ಬಂದ ಜ್ವರ ನಿನಗೇಕೆ ಬರಲಿಲ್ಲ
ಕಲ್ಲನ್ನು ತೂರಿದ್ದು ತಾಕಲಿಲ್ಲ?
ಹುಲ್ಲಲ್ಲಿ ಅಡಗಿದ್ದ ಹಾವೇಕೆ ಕಚ್ಚಲಿಲ್ಲ?
ಇಲ್ಲೆ ಶಾಶ್ವತ ಯಾಕ್ಯಾರೂ ಇಲ್ಲ?

ಪ್ರತಿಯೊಂದು ನಿಶ್ಚಿತ ದೇವನ ಜಗದಲ್ಲಿ
ಪ್ರೀತಿ ಭಕ್ತಿಗಳಿರೆ ಎಲ್ಲ ಸೊಗಸು
ನಿತ್ಯ ಅನುಮಾನದಲಿ ಹೀನಾಯ ಬದುಕು
ಸತ್ಯನ ನಂಬಿದರೆ ನಿಶ್ಚಿಂತ ಬದುಕು

ನಂಬಿ ಆ ಶಕ್ತಿಯನು ಬಾಳಿದರೆ ನೇಮದಲಿ
ಅಂಬಿಗನಂತೆ ಭವ ದಾಟಿಸುವನು
ಜಂಬ ಮಾಡಿ ನಾನು ನಾನೆಂದು ಎದ್ದವನು
ಡಿಂಬದ ಜೊತೆಯಲ್ಲೆ ಕರಗಿಹೋಗುವನು

ಬೇಕು ಭಕ್ತಿ ಶ್ರದ್ಧೆ ನಿಷ್ಠೆ ದಾನ ಧರ್ಮ
ಸಾಕು ಸ್ವೇಚ್ಛಾಚಾರ ದುಷ್ಟ ಕರ್ಮ
ಏಕೋಭಾವದಲಿ ಬಾಳಾಗಲಿ ಸುಗಮ
ಸಾಕಾರ ಸಿರಿಹರಿಯ ಅರಿತು ಮರ್ಮ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

### ದಿನದ ಚುಟುಕು

ಗಟ್ಟಿ ಕಾಳುಗಳಲ್ಲಿ ಬೆಳಸಿಯಿದೆ
ಜೊಳ್ಳು-ಹೊಟ್ಟಿನಲಿ ಕೊಳೆಯಿದೆ
ಗಟ್ಟಿ ಕಾಳುಗಳಿಗಿರುವುದೆಂದು ಬೆಲೆ
ಜೊಳ್ಳಿಗಿಹುದು ತೂರಿಕೊಳ್ಳುವ ಕಲೆ !!

- ವೀಕೆಎಂ.


**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು, ಮನೆಗಳು ಮಾರಾಟಕ್ಕಿವೆ**
50x80 South, 50x80 East, 50x80 West, 40x60 South, 40x60 East 40x50, 40x50 North, ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಸೈಟ್‌ಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ**
ಶಿವಪಾರ್ವತಿ ಬಡಾವಣೆಯಲ್ಲಿ 40x65 ಪೂರ್ವ, 30x56 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, 40x50 ಪೂರ್ವ
ಸ್ವಾಮಿ, ಏಜೆಂಟ್, ವಿದ್ಯಾನಗರ
ಮೊ. 97421-44715
ಶಾಮನೂರು ನಾಗರಾಜ
ಮೊ. 98448-83303

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇ ಔಟ್‌ನಲ್ಲಿ 40×60 ಪೂರ್ವ, 30×40 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30×36 ಉತ್ತರ, ಡಾಲರ್ಸ್‌ಕಾಲೋನಿಯಲ್ಲಿ 30×55 ಉತ್ತರ, ಪೂರ್ವ ಕಾರ್ನರ್
ಶಾಮನೂರು ಧನ್ಯಕುಮಾರ್
ಮೊ.97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ.97421 44715

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ ಮನೆ, ಇಂಡಿಪೆಂಡೆಂಟ್ ಹೌಸ್ ಕುವೆಂಪು ಬಡಾವಣೆಯಲ್ಲಿ, 30x50 South 3 floor ಮನೆ ಸಿದ್ದವೀರಪ್ಪ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, 5ನೇ ಕ್ರಾಸ್ 'ನಿಧಿ ನೆಸ್ಟ್' ಮೊದಲನೇ ಮಹಡಿಯಲ್ಲಿ 2 BHK ಹಾಗೂ ಸ್ಟುಡಿಯೋ ಫ್ಲಾಟ್ ಬಾಡಿಗೆಗೆ ಇದೆ. ಬೋರ್, ಕಾರ್ಪೋರೇಶನ್ ನೀರು ಹಾಗೂ ಲಿಫ್ಟ್ ಸೌಲಭ್ಯವಿದೆ.
ಆಸಕ್ತರು ಸಂಪರ್ಕಿಸಿ:
99028 57134
91104 80194

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಬಡಾವಣೆ ಹಾಗೂ ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**ಸೈಟ್‌ಗಳು ಮಾರಾಟಕ್ಕಿವೆ**
70X50 East, South Cornner ಆಂಜನೇಯ ಬಡಾವಣೆಯಲ್ಲಿ, 40x60 West ರಂಗನಾಥ ಬಡಾವಣೆಯಲ್ಲಿ, 40x60 North ವಿವೇಕಾನಂದ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಫೋಟೋ ಶಾಪ್, ಡಿಸೈನಿಂಗ್ ಹಾಗೂ ಟೈಪಿಂಗ್ ಅನುಭವ ಇರುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜು ಪ್ರಿಂಟರ್ಸ್, ದಾವಣಗೆರೆ.
9964028818, 9742774340

**ಸೈಟು ಮಾರಾಟಕ್ಕಿದೆ**
ಹಾರ್ಟ್ ಹಾಸ್ಪಿಟಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, 47×60 ಅಡಿ (ಪೂರ್ವ)
ಮೋಹನ್ಸ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ.: 97424 34049

**ಮನೆ ಬಾಡಿಗೆಗೆ ಇವೆ**
#34,42, 5ನೇ ಕ್ರಾಸ್, 6ನೇ ಕ್ರಾಸ್ 'ಎ' ಬ್ಲಾಕ್, ದೇವರಾಜ ಅರಸ್ ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ. 2ಬೆಡ್ ರೂಂ, ಎಕ್ಸ್‌ಟ್ರಾ 1 ರೂಂ ಇದೆ.
94492 46224
79751 22289

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಐಗೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ,**
ಐಗೂರು, ದಾವಣಗೆರೆ ತಾ।। ಜಿ।।

**ವಾರ್ಷಿಕ ಮಹಾಸಭೆಯ ನೋಟೀಸ್**

ಸನ್ಮಾನ್ಯ ಸಂಘದ ಸದಸ್ಯರುಗಳಿಗೆ,

ದಿನಾಂಕ : 19.12.2020ರ ಶನಿವಾರ ಬೆಳಿಗ್ಗೆ 10.30ಕ್ಕೆ ಸರಿಯಾಗಿ ನಮ್ಮ ಸಂಘದ ಕಛೇರಿಯಲ್ಲಿ ವಾರ್ಷಿಕ ಮಹಾಸಭೆಯನ್ನು ಕರೆಯಲಾಗಿದೆ. ಆದ್ದರಿಂದ ತಾವುಗಳು ಭಾಗವಹಿಸಬೇಕಾಗಿ ಈ ಮೂಲಕ ಕೋರಲಾಗಿದೆ.

1. ಮಾನ್ಯ ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ಚರ್ಚಿಸಲು 3 ದಿನಗಳಿಗೂ ಮುಂಚಿತವಾಗಿ ಅರ್ಜಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು.
2. ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಪರವಾಗಿ

ಅಧ್ಯಕ್ಷರು — ಜಿ.ಎಂ. ಬಸವರಾಜು
ಉಪಾಧ್ಯಕ್ಷರು — ಬಿ.ಎಸ್. ತಿಪ್ಪೇರುದ್ರಪ್ಪ

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

**ತಕ್ಷಣ ಕೆಲಸ**
2nd ಪಿಯುಸಿ, ಡಿಗ್ರಿ ಪಾಸ್/ಫೇಲ್ ಆಗಿರುವ ಹುಡುಗಿಯರಿಗೆ ಲಾಯರ್ ರೋಡ್‌ನಲ್ಲಿ, ಆಫೀಸ್ ಕೆಲಸ ಲಭ್ಯವಿದೆ. ದ್ವಿಚಕ್ರ ವಾಹನ ಇರುವವರಿಗೆ ಮೊದಲ ಆದ್ಯತೆ (ಸರ್ಕಾರಿ ನೋಂದಾಯಿತ ಸಂಸ್ಥೆ)
95139 17777

**ಮನೆ ಮಾರಾಟಕ್ಕಿದೆ**
ಚೌಕಿಪೇಟೆ, ಮಹಾರಾಜ ಪೇಟೆ ವಿಠ್ಠಲ ಮಂದಿರದ ಹತ್ತಿರ 15x42 ಅಳತೆಯ ಹಳೆಯ ಹಂಚಿನ ಮನೆ ಮಾರಾಟಕ್ಕಿದೆ.
94838 62779

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಹಾಸಬಾವಿ ಸರ್ಕಲ್‌ನಲ್ಲಿ 2 ಬೆಡ್‌ರೂಂವುಳ್ಳ 24 ಗಂಟೆ ನೀರಿನ ಸೌಲಭ್ಯವುಳ್ಳ ಮನೆ ಬಾಡಿಗೆಗೆ ಇದೆ. (ಶುದ್ದ ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ:
96117 71620

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಹೆಸರು ಬದಲಾವಣೆ**
ಅನಿಲಕುಮಾರ ಬಿನ್ ಗೋಪಾಲಪ್ಪ, 52 ವರ್ಷ, ನೀಲಾನಹಳ್ಳಿ ಗ್ರಾಮ, ದೊಡ್ಡಬಾತಿ ಅಂಚೆ, ದಾವಣಗೆರೆ ತಾ. ಜಿಲ್ಲೆ ವಾಸಿಯಾದ ನಾನು ನನ್ನ ಡಿ.ಎಲ್.ನಲ್ಲಿ ಅಣ್ಣಪ್ಪ ಬಿ ಬಿನ್ ಬೋಪಾಲಪ್ಪ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ದಿನಾಂಕ 10.12.2020ರಂದು ನೋಟರಿ, ದಾವಣಗೆರೆಯವರ ಮುಂದೆ ನನ್ನ ಹೆಸರು ಅನಿಲಕುಮಾರ ಬಿನ್ ಗೋಪಾಲಪ್ಪ ಸರಿ ಎಂದು ಪ್ರಮಾಣೀಕರಿಸಿದ್ದೇನೆ.
ಸಹಿ/- ಅನಿಲಕುಮಾರ

**ಉತ್ತಮ ಗುಣಮಟ್ಟದ ಕಡಿಮೆ ದರದಲ್ಲಿ**
ಎಂ.ಸ್ಯಾಂಡ್, ಜಲ್ಲಿ, ಗ್ರಾವೆಲ್ ದೊರೆಯುತ್ತದೆ.
ಸಂಪರ್ಕಿಸಿ:
ಪ್ರವೀಣ್‌ಕುಮಾರ್ ಎಸ್.ಕೆ.
90604 55766

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
5ನೇ ಡ್ರಾ ನಂಬರ್
ನಂಬರ್ 890
M.S. UDAYKUMAR
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**REQUIRED MANAGER FOR INDIA'S MOST TRUSTED COMPANY**
MALE / FEMALE
Qualification : Any Degree
Age Limit : 25 to 35 years
Location : Davanagere & Ranebennuru
For more details kindly Contact
78295 17876
Hurry Up Limited Openings

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್‌ನಲ್ಲಿ ಡಿಲೆವರಿ ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler Bike ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು. ಇಂಗ್ಲಿಷ್ ಓದಲು, ಬರೆಯಲು ಬರಬೇಕು.
98800 42597
94807 95548

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮಾಲೀಕರಿಂದ ನೇರವಾಗಿ ಸೈಟುಗಳು ಮಾರಾಟಕ್ಕೆ**
ಸ್ವಾಮಿ ವಿವೇಕಾನಂದ ಬಡಾವಣೆ 30×50 ಪಶ್ಚಿಮ ದಿಕ್ಕು, ಹೊಸ DC ಆಫೀಸ್ ಎದುರುಗಡೆ, ಉತ್ತರ ದಿಕ್ಕಿನ 30×46 ಎರಡು ಸೈಟುಗಳು (ಅಲಿನೇಷನ್ ಆಗಿರುವ) ಹಾಗೂ ಮಹಾಲಕ್ಷ್ಮಿ ಲೇ ಔಟ್, 30×50 ಪಶ್ಚಿಮ ದಿಕ್ಕಿನ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೊ. : 81235 16806

**ಡ್ರೈವರ್ ಬೇಕಾಗಿದ್ದಾರೆ**
ಶ್ರೀ ಆಪ್ಟಿಕಲ್ಸ್
# 312, ವಿನಾಯಕ ಕಾಂಪ್ಲೆಕ್ಸ್, ಪೆವಿಲಿಯನ್ ರೋಡ್, ಶಿವಪ್ರಕಾಶ್ ಮೆಮೋರಿಯಲ್ ಆಸ್ಪತ್ರೆ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.
98864 04287

**ಮನೆ ಲೀಸ್ ಇದೆ**
ಕೆ.ಟಿ.ಜೆ. ನಗರ 17ನೇ ಕ್ರಾಸ್, ಬನ್ನಿ ಮಹಾಂಕಾಳಿ ರೋಡ್‌ನಲ್ಲಿ 2 ಬೆಡ್‌ರೂಂವುಳ್ಳ ಮನೆ ಲೀಸ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
88673 32114
95355 10476

**ಬೇಕಾಗಿದ್ದಾರೆ**
PUC/ITI ಆದಂತಹ ಯುವಕ, ಯುವತಿಯರು ಪಾರ್ಟ್ ಟೈಮ್/ಫುಲ್ ಟೈಮ್ ಅಂಗಡಿ/ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಜ್ಯೋತಿ ಮೆಟಲ್ಸ್,
ಗ್ಯಾಸ್ ಗೀಸರ್/ವಾಟರ್ ಪ್ಯೂರಿಫಯರ್ ಸರ್ವೀಸ್ ಸೆಂಟರ್, ಗಣಪತಿ ಗುಡಿ ಪಕ್ಕ, ಹಳೇ ಬಸ್‌ಸ್ಟ್ಯಾಂಡ್, ದಾವಣಗೆರೆ.
98800 34643/ 94800 83754

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**WANTED**
Data Entry operating
1 Lady Candidate.
office working hours
9.30 Am to 6.00 Pm
77951 01599

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838

**ಬೇಕಾಗಿದ್ದಾರೆ**
ಪ್ಲೇವುಡ್ ಅಂಗಡಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ:
96633 66710

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

## ಕೊರೊನಾ ಹುಟ್ಟು ಹಬ್ಬ

ಬಂದಿತು ಬಂದಿತು ಕೊರೊನಾ
ತಂದಿತು ನಮ್ಮಲಿ ಭಯವನ್ನ
ವಿಶ್ವದೆಲ್ಲೆಡೆ ಹರಡುತಲಿ
ಬಲಿಪಡೆಯಿತು ಬಹು ಜನರನ್ನ
ಹೇಳದೆ ಕೇಳದೆ ವರ್ಷದ ಹಿಂದೆ
ಆಕ್ರಮಿಸಿತು ಇಡೀ ಜಗವನ್ನ.

ಬಡವ ಬಲ್ಲಿದ ಭೇದವಿಲ್ಲದೆ
ಹಿರಿಯರು ಕಿರಿಯರು ಎಂದು ನೋಡದೆ
ಕಬಂಧ ಬಾಹುಗಳನು ಚಾಚುತಲಿ
ಎಲ್ಲೆಡೆಯಲ್ಲೂ ವ್ಯಾಪಿಸಿತು
ಹಸ್ತಲಾಘವ ಮಾಡಬೇಡಿ
ಕರವನು ಮುಗಿದು ಮಾತನಾಡಿ
ಸ್ವಚ್ಛತೆಯೆಡೆಗೆ ಗಮನವ ನೀಡಿ
ಆರೋಗ್ಯದ ಕಡೆ ಕಾಳಜಿ ಮಾಡಿ.

ಸರ್ಕಾರದ ಆದೇಶವನು
ನಿರ್ಲಕ್ಷಿಸದೆ ಪಾಲಿಸುವಾ
ನೀತಿನಿಯಮಗಳ ಉಲ್ಲಂಘಿಸದೆ
ಅವುಗಳ ಪಾಲನೆ ಮಾಡುವಾ
ಬಂದುದನೆಲ್ಲ ಧೈರ್ಯದಿಂದಲೇ
ಎದುರಿಸಿ ನಾವು ಬಾಳುವಾ
ಎಲ್ಲರು ಕೈ ಜೋಡಿಸಿ ಹೋರಾಡುತ
ನಮ್ಮಯ ದೇಶವ ರಕ್ಷಿಸುವಾ.

ಜೀವದ ಹಂಗನು ತೊರೆದು ರೋಗಿಗಳ
ಸೇವೆಗಾಗಿ ಪಣ ತೊಟ್ಟಿರುವ
ಆರಕ್ಷಕರಿಗೆ, ವೈದ್ಯವೃಂದಕೆ,
ದಾದಿಯರಿಗೆ, ಆಶಾ ಕಾರ್ಯಕರ್ತೆಯರಿಗೆ
ಪೌರಕಾರ್ಮಿಕರಿಗೆ ನಾವಿಂದು
ಧನ್ಯವಾದಗಳ ತಿಳಿಸೋಣ
ಅವರ ನಿಸ್ವಾರ್ಥ ಸೇವೆಗೆ ಎಲ್ಲರು
ವಂದನೆಗಳನು ಸಲಿಸೋಣ.

– ಜಿ.ಎಸ್.ಗಾಯತ್ರಿ, ಶಿಕ್ಷಕಿ.
ಬಾಪೂಜಿ ಶಾಲೆ, ಹರಿಹರ.

## ಮರೆಯಬೇಡ....

ತಾಯ್ತಂದೆಯರ ಕೀಳಾಗಿ
ಕಾಣಬೇಡವೋ ಮೂಢನೇ
ತಾಯ್ತಂದೆಯರಿಂದಲೇ ಜಗಕ್ಕೆ
ಬಂದಿರುವೆಂಬುದನು ಮರೆಯಬೇಡ.

ಬಹು ಭಾಷೆಗಳ ಕಲಿತಿರುವೆಂದು
ಗರ್ವ ಪಡದಿರು ಹೇ ಮೂರ್ಖನೇ
ಮನದ ಭಾವನೆಗಳ ಅಭಿವ್ಯಕ್ತಿಗೆ
ಮಾತೃಭಾಷೆಯೇ ಬೇಕು ಮರೆಯಬೇಡ.

ಆಸ್ತಿ ಅಂತಸ್ತು ಅಧಿಕಾರ ಬಂದೊಡನೆ
ಆಸ್ತಿ ಮದವೇರಿದಂತಾಗದಿರು ಪೆದ್ದನೇ
ವಸ್ತುಗಳ ಮೋಹದಿ ಸಂಬಂಧಗಳ ಮರೆತರೆ
ಅಸ್ಥಿಯಾಗುವೆ ಕೊನೆಗೆ ಮರೆಯಬೇಡ.

ಗುರು ಹಿರಿಯರು ಹೇಳಿದ ಮಾತುಗಳನು
ಗೌರವದಿ ಪಾಲಿಸದಿದ್ದರೆ ಹೆಡ್ಡನೇ
ಹರನ ಕೃಪೆಯಿಂದ ವಂಚಿತನಾಗುವೆ
ನೀರ ಮೇಲಣ ಗುಳ್ಳೆಯಂತಾಗುವೆ
ಮರೆಯಬೇಡ.

– ಹೆಚ್. ಶಿವಮೂರ್ತಿ,
ಕನ್ನಡ ಶಿಕ್ಷಕರು, ದಾವಣಗೆರೆ.

# ಕೊರೊನಾ: ಅಮೆರಿಕದಲ್ಲಿ 3 ಸಾವಿರಕ್ಕೂ ಹೆಚ್ಚು ಸಾವು

ವಾಷಿಂಗ್ಟನ್, ಡಿ. 10 – ಅಮೆರಿಕದಲ್ಲಿ ಕೊರೊನಾ ಪರಿಸ್ಥಿತಿ ತೀವ್ರವಾಗಿ ಉಲ್ಬಣಿಸಿದ್ದು, 3 ಸಾವಿರಕ್ಕೂ ಹೆಚ್ಚು ಜನ ಒಂದೇ ದಿನ ಸಾವನ್ನಪ್ಪಿದ್ದಾರೆ.

ಕೋವಿಡ್ ಟ್ರ್ಯಾಕಿಂಗ್ ಪ್ರಾಜೆಕ್ಟ್ ವರದಿಯ ಪ್ರಕಾರ ಒಂದೇ ದಿನ 3,054 ಜನ ಸಾವನ್ನಪ್ಪಿದ್ದು, ಇದು ಇಲ್ಲಿಯವರೆಗೆ ಒಂದೇ ದಿನ ಅತಿ ಹೆಚ್ಚು ಸಾವಿನ ದಾಖಲೆಯಾಗಿದೆ. ಈ ಹಿಂದೆ ಮೇ 7ರಂದು ಒಂದೇ ದಿನ 2,769 ಜನರು ಸಾವನ್ನಪ್ಪಿದ್ದರು. ಅಮೆರಿಕದಲ್ಲಿ ಇದುವರೆಗೆ 1.5 ಕೋಟಿಗೂ ಹೆಚ್ಚು ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. 2.86 ಲಕ್ಷ ಜನ ಸಾವನ್ನಪ್ಪಿದ್ದಾರೆ. ಜಾನ್ಸ್ ಹಾಪ್ಕಿನ್ಸ್ ವರದಿಯ ಪ್ರಕಾರ, ಇಡೀ ವಿಶ್ವದಲ್ಲಿ ಕೊರೊನಾದಿಂದ ಅತಿ ಹೆಚ್ಚು ಪೀಡಿತ ದೇಶ ಅಮೆರಿಕ ಆಗಿದೆ.

ಫಿಜರ್ - ಬಯಾನ್‌ಟೆಕ್ ಹಾಗೂ ಮೊಡೆರ್ನಾ ರೂಪಿಸಿರುವ ಎರಡು ಲಸಿಕೆಗಳಿಗೆ ಅಮೆರಿಕ ಅನುಮತಿ ನೀಡುವ ಅಂತಿಮ ಹಂತದಲ್ಲಿದೆ.

ಜನವರಿ ಒಳಗೆ ಅಮೆರಿಕದ ಐದು ಕೋಟಿ ಜನರಿಗೆ ಲಸಿಕೆ ಲಭ್ಯವಾಗುವ ನಿರೀಕ್ಷೆ ಇದೆ. ಪ್ರಥಮ ಚತುರ್ಥದ ಒಳಗೆ ಹತ್ತು ಕೋಟಿ ಜನರು ಲಸಿಕೆ ಪಡೆಯಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಅನುಭವ ಮಂಟಪ ಸಂಸತ್ತಿನ ಸ್ವರೂಪ

(1ನೇ ಪುಟದಿಂದ) ತಾಯಿ' ಆಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪದಲ್ಲಿ ಲೋಕ ಸಂಸತ್ತಿನ ನಿರ್ಮಾಣವಷ್ಟೇ ಅಲ್ಲದೇ ಅದರ ಕಾರ್ಯ ನಿರ್ವಹಣೆಯ ಖಾತ್ರಿಯನ್ನೂ ಮಾಡಿದ್ದರು ಎಂದು ಮೋದಿ ಹೇಳಿದರು.

ಈ ಹಂತದಲ್ಲಿ ಕನ್ನಡದಲ್ಲಿ ಮಾತನಾಡಿದ ಪ್ರಧಾನಿ, 'ಅನುಭವ ಮಂಟಪ ಜನಸಭೆ ನಾಡಿನ ಮತ್ತು ರಾಷ್ಟ್ರದ ಉನ್ನತಿಗೆ ಹಾಗೂ ಅಭಿವೃದ್ಧಿಗಾಗಿ ಪೂರಕವಾಗಿ ಕೆಲಸ ಮಾಡುತ್ತದೆ' ಎಂಬುದು ಬಸವಣ್ಣನವರ ಪರಿಕಲ್ಪನೆಯಾಗಿತ್ತು. ಈ ಅನುಭವ ಮಂಟಪ ಜನರೆಲ್ಲರೂ ಒಂದಾಗಿ ಕೆಲಸ ಮಾಡಲು ಪ್ರೇರಣೆ ನೀಡುತ್ತದೆ ಎಂದರು.

ಅನುಭವ ಮಂಟಪ ಸ್ಥಾಪನೆಗೂ ಮೊದಲು ಹತ್ತನೇ ಶತಮಾನದಲ್ಲಿ ತಮಿಳು ನಾಡಿನ ಚೆನ್ನೈ ಸಮೀಪದ ಉತ್ತರ ಮೆರೂರು ಗ್ರಾಮದಲ್ಲಿ ಪಂಚಾಯ್ತಿ ವ್ಯವಸ್ಥೆಯ ಉಲ್ಲೇಖವಿದೆ. ಚೋಳ ಸಾಮ್ರಾಜ್ಯದ ಸಮಯದಲ್ಲಿ ಗ್ರಾಮಗಳನ್ನು ವಾರ್ಡ್ ರೀತಿ ವಿಭಜಿಸಿ ಪ್ರತಿಯೊಂದು ಗ್ರಾಮದಿಂದ ಜನಪ್ರತಿನಿಧಿಗಳನ್ನು ಕರೆಸಲಾಗುತ್ತಿತ್ತು ಎಂದು ಪ್ರಧಾನಿ ತಿಳಿಸಿದರು.

ಸಾವಿರಾರು ವರ್ಷಗಳ ಹಿಂದೆ ಇಲ್ಲಿ ರೂಪುಗೊಂಡ ಮಹಾಸಭೆ ವ್ಯವಸ್ಥೆ ಈಗಲೂ ಮುಂದುವರೆದಿದೆ. ಇಲ್ಲಿನ ಶಿಲಾಶಾಸನದಲ್ಲಿ ಜನಪ್ರತಿನಿಧಿಗಳ ಆಯ್ಕೆಯಷ್ಟೇ ಅಲ್ಲದೇ ಅನರ್ಹತೆಗೂ ನಿಯಮ ರೂಪಿಸಲಾಗಿದೆ. ಅದರ ಪ್ರಕಾರ ತನ್ನ ಸಂಪತ್ತಿನ ವಿವರ ನೀಡದ ಜನಪ್ರತಿನಿಧಿ ಅನರ್ಹನಾಗುತ್ತಾನೆ. ಆತನ ನಿಕಟ ಸಂಬಂಧಿಗಳೂ ಚುನಾವಣೆಗೆ ನಿಲ್ಲುವಂತಿಲ್ಲ ಎಂದು ಮೋದಿ ಹೇಳಿದ್ದಾರೆ.

ಲೋಕತಂತ್ರದ ಇತಿಹಾಸ ದೇಶದ ಮೂಲೆ ಮೂಲೆಗಳಲ್ಲೂ ಕಂಡು ಬರುತ್ತಿದೆ. ಸಭಾ, ಸಮಿತಿ, ಗಣಪತಿ, ಗಣಾಧಿಪತಿ ಈ ಶಬ್ದಗಳು ನಮ್ಮ ಮನ ಮಸ್ತಿಷ್ಕದಲ್ಲಿ ಸಹಸ್ರಾರು ವರ್ಷಗಳಿಂದ ಇವೆ. ಶಾಕ್ಯ, ಮಲ್ಲ, ರೀತಿಯ ಗಣತಂತ್ರಗಳು ಹಾಗೂ ನಿಶ್ವಿಲ, ಮಲ್ಕ್, ಕಾಂಬೋಜ ರೀತಿಯ ಗಣರಾಜ್ಯಗಳು ಪ್ರಾಚೀನ ಭಾರತದಲ್ಲಿದ್ದವು. ಮೌರ್ಯ ಕಾಲದಲ್ಲಿ ಕಳಿಂಗ ಇತ್ತು. ಇವೆಲ್ಲವೂ ಪ್ರಜಾಪ್ರಭುತ್ವವನ್ನು ಆಡಳಿತದ ಆಧಾರ ಮಾಡಿದ್ದವು. ಇನ್ನೂ ಹಿಂದೆ ಹೋದರೆ ಸಾವಿರಾರು ವರ್ಷಗಳ ಹಿಂದೆ ರಚಿತವಾದ ಋಗ್ವೇದದಲ್ಲಿ ಸಮಷ್ಠಿ ಜನಪ್ರಜ್ಞೆಯ ಉಲ್ಲೇಖವನ್ನು ನೋಡಬಹುದು ಎಂದು ಪ್ರಧಾನಿ ತಿಳಿಸಿದರು.

ಪ್ರಜಾಪ್ರಭುತ್ವದ ಎಂದರೆ ಚುನಾವಣೆ, ಚುನಾವಣಾ ಪ್ರಕ್ರಿಯೆ, ಚುನಾಯಿತರು, ಶಾಸಕಾಂಗ ರಚನೆ, ಶಾಸನ ಇವುಗಳಷ್ಟೇ ಎಂಬ ಭಾವನೆ ಇದೆ. ಇಂತಹ ವ್ಯವಸ್ಥೆಯಲ್ಲಿ ಹೆಚ್ಚು ಒತ್ತು ನೀಡುವುದನ್ನೇ ಪ್ರಜಾಪ್ರಭುತ್ವ ಎನ್ನಲಾಗುತ್ತದೆ. ಭಾರತದಲ್ಲಿ ಪ್ರಜಾಪ್ರಭುತ್ವ ಒಂದು ಸಂಸ್ಕಾರವಾಗಿದೆ, ಜೀವನ ಮೌಲ್ಯ ಹಾಗೂ ಜೀವನ ಪದ್ಧತಿಯಾಗಿದೆ. ಭಾರತದ ಲೋಕ ತಂತ್ರ ಸಾವಿರಾರು ವರ್ಷಗಳ ಅನುಭವದಿಂದ ವಿಕಸಿತವಾಗಿದೆ. ಭಾರತದಲ್ಲಿ ಲೋಕತಂತ್ರದಲ್ಲಿ ಜೀವನ ಮಂತ್ರ, ಜೀವನ ತತ್ವ ಹಾಗೂ ವ್ಯವಸ್ಥೆಯ ತಂತ್ರವೂ ಇದೆ. ಭಾರತದ ಪ್ರಜಾಪ್ರಭುತ್ವ ಪರಂಪರೆಯಲ್ಲಿ ತತ್ವವೂ ಇದೆ ತಂತ್ರವೂ ಇದೆ ಎಂದವರು ತಿಳಿಸಿದರು.

ಭಾರತದ ಪ್ರಜಾಪ್ರಭುತ್ವವನ್ನು ನಮಗೆ ಪಶ್ಚಿಮ ದೇಶದ ಮೂಲಕ ತಿಳಿಸಲಾಗುತ್ತದೆ. ನಾವು ವಿಶ್ವಾಸದಿಂದ ನಮ್ಮ ಪ್ರಜಾಪ್ರಭುತ್ವದ ಇತಿಹಾಸ ನೋಡಿದಾಗ ಭಾರತ ಪ್ರಂಪಚಕ್ಕೆ 'ಮದರ್ ಆಫ್ ಡೆಮಾಕ್ರಸಿ' (ಪ್ರಜಾಪ್ರಭುತ್ವದ ತಾಯಿ) ಎನಿಸಿಕೊಳ್ಳಲಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ಭಾರತದಲ್ಲಿ ಲೋಕತಂತ್ರ ನಿತ್ಯ ನೂತನವಾಗು ತ್ತಿದೆ. ಮಹಿಳೆಯರು ಹಾಗೂ ಯುವಕರು ಹೆಚ್ಚಾಗಿ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗಿಯಾಗು ನಿರಂತರವಾಗಿ ಹೆಚ್ಚಾಗುತ್ತಿದೆ. ಭಾರತದಲ್ಲಿ ಪ್ರಜಾ ಪ್ರಭುತ್ವ ಎಂದಿನಿಂದಲೂ ಆಡಳಿತದ ಜೊತೆಗೆ ಮತಭೇದ ಹಾಗೂ ವಿರೋಧಾಭಾಸಗಳನ್ನು ಬಗೆಹರಿಸುವ ಮಹತ್ವದಪೂರ್ಣ ಮಾಧ್ಯಮವೂ ಆಗಿದೆ ಎಂದವರು ಬಣ್ಣಿಸಿದರು.

# ಖಾಲಿ ನಿವೇಶನಗಳಲ್ಲಿ ಕಿರು ಅರಣ್ಯ ಸಾಧ್ಯತೆ

## ಮಾದರಿಯಾಗಿದೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿನ 'ಮಿಯವಾಕಿ ಕಿರು ಅರಣ್ಯ'

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ ನಗರವನ್ನು ಸ್ಮಾರ್ಟ್ ಆಗಿ ಕಾಣಿಸಲು ಇದ್ದ ಮರಗಳು ಬಲಿಯಾಗಿ ಕಾಂಕ್ರೀಟ್ ಕಾಡು ಹೆಚ್ಚಾಗುತ್ತಿರುವ ಪ್ರಸ್ತುತ ದಿನಗಳಲ್ಲಿ ಕಿರು ಅರಣ್ಯ ಬೆಳೆಸುವ ಆಲೋಚನೆಯೊಂದು ನಗರದ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೊಳಕೆಯೊಡೆದಿದೆ. ಅಷ್ಟೇ ಅಲ್ಲ, ಅದೀಗ ಅರಣ್ಯವಾಗಿ ನಗರಕ್ಕೆ ಮಾದರಿಯಾಗಿದೆ.

ನಗರದಲ್ಲಿರುವ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ 40x100 ಅಡಿ ಅಳತೆಯಲ್ಲಿ 'ಮಿಯವಾಕಿ' ಅರಣ್ಯವೊಂದನ್ನು ಬೆಳೆಸಲಾಗಿದೆ. ಈ ಅರಣ್ಯದಲ್ಲಿ 1500ಕ್ಕೂ ಹೆಚ್ಚು ಮರಗಳು ಫಲವತ್ತಾಗಿ ಬೆಳೆದಿವೆ. ಈ ಅರಣ್ಯಕ್ಕೆ ಈಗ ಕೇವಲ 3 ವರ್ಷಗಳು ಮಾತ್ರ. ಹೊನ್ನೆ, ಹಳೇಮತ್ತಿ, ನೆಲ್ಲಿ, ಬಿದಿರು, ಸೀತಾಫಲ, ಕಮರಿ, ನಿಂಬೆ, ಹೆಬ್ಬೇವು, ಸಾಗುವಾನಿ, ಹೊಂಗೆ, ನೇರಳೆ, ಅರಳಿ, ಸೀಮರೂಬಾ, ರಾತ್ರಿ ರಾಣಿ, ಮಹಾಗನಿ, ಬನ್ನಿ, ಬಿಲ್ವ, ನುಗ್ಗೆ, ತೇಗ, ಸಿಲ್ವರ್, ಬಸರಿ, ಕರಬೇವು, ಸಂಪಿಗೆ, ಹುಣಸೆ, ಬಾದಾಮಿ, ಚರ್ರಿ, ಮುತ್ತಗ, ಗೋಣಿ, ತಬುಬಿಯಾ, ಟಕೋಮಾ, ತಪಸಿ, ಗ್ಲೀರಿಸಿಡಿಯಾ, ತೇಗ ಹೀಗೆ 30ಕ್ಕೂ ಹೆಚ್ಚು ಸಸಿಗಳು ಈ ಕಿರು ಅರಣ್ಯದಲ್ಲಿವೆ.


ಮಿಯವಾಕಿ ಕಿರು ಅರಣ್ಯದಲ್ಲಿ ವಿಜ್ಞಾನಿ ದೇವರಾಜ್

ಈ ವಿಧಾನದಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆಯುವ ಗಿಡಗಳ ಬದಲು, ಮಧ್ಯಮ ಎತ್ತರಕ್ಕೆ ಬೆಳೆಯುವ, ಬೃಹತ್ ಗಾತ್ರದ ಬದಲಿಗೆ ಸಾಧಾರಣ ದಪ್ಪ ಬೆಳೆಯುವ ಗಿಡಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಇದರಿಂದ ಗಾಳಿ, ಮಳೆಯ ಸಮಯದಲ್ಲಿ ನೆಲ ಕಚ್ಚುವ ಅಪಾಯ ಇರುವುದಿಲ್ಲ. ಒಂದಕ್ಕೊಂದು ಒತ್ತಟ್ಟಿಗೆ ಇರುವುದರಿಂದ ಮತ್ತೊಂದರ ಬೆಳವಣಿಗೆಗೆ ಸಹಕಾರಿಯಾಗುತ್ತವೆ. ಬಿದ್ದ ಮಳೆ ನೀರನ್ನು ಹಿಡಿದಿಟ್ಟುಕೊಂಡು ಭೂಮಿಯಲ್ಲಿ ಇಂಗುವಂತೆ ಮಾಡುತ್ತವೆ. ಎರಡು ವರ್ಷ ನೀರು ಹಾಕಿ ಗಿಡಗಳನ್ನು ಪೋಷಿಸಿದರೆ ಸಾಕು ನಮಗೇ ಗೊತ್ತಿಲ್ಲದಂತೆ ಪುಟ್ಟದೊಂದು ಅರಣ್ಯ ನಿರ್ಮಾಣವಾಗಿರುತ್ತದೆ.

ಈಗ 'ಸ್ಮಾರ್ಟ್ ದಾವಣಗೆರೆ' ವಿಷಯಕ್ಕೆ ಬರೋಣ, ವೇಗವಾಗಿ ಬೆಳೆಯುತ್ತಿರುವ ನಗರಗಳ ಸಾಲಿನಲ್ಲಿರುವ ದಾವಣಗೆರೆಯಲ್ಲೊಂದು ಸೈಟು ಕೊಂಡು ಮನೆ ಕಟ್ಟಿಸುವ ಕನಸು ಎಲ್ಲರಿಗೂ ಸಾಮಾನ್ಯ. ಆರಂಭದಲ್ಲಿ ಸೈಟು ಖರೀದಿಸಿಟ್ಟುಕೊಂಡು ಮುಂದೆ ಅನುಕೂಲವಾದಾಗ ಮನೆ ಕಟ್ಟಿಸಬಹುದು ಎಂಬ ಆಲೋಚನೆ ಹಲವರದ್ದು. ಹೀಗಾಗಿ ಸದ್ಯ ನಗರದಲ್ಲಿ ಸಾವಿರಾರು ಖಾಲಿ ಸೈಟುಗಳಿವೆ.

> ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ 40x100 ಅಳತೆ ಪ್ರದೇಶದಲ್ಲಿ 1500ಕ್ಕೂ ಹೆಚ್ಚು ಮರಗಳ ಕಿರು ಅರಣ್ಯ ಮಾಡಿದ್ದೇವೆ. ತೋಳಹುಣಸೆಯಲ್ಲಿನ ಸಂಸ್ಥೆಯ ಜಾಗದಲ್ಲೂ ಅರಣ್ಯ ಮಾಡಿದ್ದೇವೆ. ದಾವಣಗೆರೆಯಲ್ಲಿನ ಸಾಕಷ್ಟು ಖಾಲಿ ನಿವೇಶನಗಳಲ್ಲಿ ಇಂತಹ ಕಿರು ಅರಣ್ಯ ಬೆಳೆಸಲು ಸಾಧ್ಯತೆ ಇದು. ಜನರು ಮುಂದಾಗಬೇಕಿದೆ.
>
> – ಡಾ. ಟಿ.ಎನ್. ದೇವರಾಜ್,
> ಹಿರಿಯ ವಿಜ್ಞಾನಿ, ಕೃಷಿ ವಿಜ್ಞಾನ ಕೇಂದ್ರ

ಕೆಲ ಸೈಟುಗಳಲ್ಲಿ ಗಿಡ ಗಂಟೆ ಬೆಳೆದುಕೊಂಡಿದ್ದರೆ, ಮತ್ತೆ ಕೆಲವು ಕಸ ಹಾಕುವ ಡಂಪಿಂಗ್ ಯಾರ್ಡ್‌ಗಳಾಗಿ ಪರಿವರ್ತನೆಯಾಗಿ, ಸಾಂಕ್ರಾಮಿಕ ಕಾಯಿಲೆಗಳನ್ನು ತರಲಾರಂಭಿಸಿವೆ. ಇತ್ತ ಪಾಲಿಕೆ ಅಧಿಕಾರಿಗಳು ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಿ, ಮಾಲೀಕರಿಂದ ಹಣ ವಸೂಲಿ ಮಾಡುತ್ತೇವೆಂಬ ಮಾತುಗಳು (6ನೇ ಪುಟಕ್ಕೆ)

## ವಿಜೇತನ ಮೇಲೆ ಅತ್ಯಾಚಾರದ ಆರೋಪ

(1ನೇ ಪುಟದಿಂದ) ದಾಖಲಿಸಲಾಗಿದೆ. ದೂರು ನೀಡಿದ ಸಿ.ಆರ್.ಪಿ.ಎಫ್. ಸಿಬ್ಬಂದಿ ಡಿಸೆಂಬರ್ 3ರಂದು ಸೈನಿಕ ಪಡೆಗೆ ಸೇರಿದ್ದರು. ಈ ಇಬ್ಬರು ಆರೋಪಿಗಳು ಮಹಿಳಾ ಪೇದೆಗಳನ್ನು ಲೈಂಗಿಕವಾಗಿ ಪೀಡಿಸುತ್ತಿದ್ದರು ಎಂದು ಅವರು ದೂರಿದ್ದಾರೆ.


ಈ ಇಬ್ಬರು ಮಹಿಳಾ ಪೇದೆಗಳು ಸ್ನಾನ ಮಾಡುವಾಗ ಗುಪ್ತವಾಗಿ ನಗ್ನ ಚಿತ್ರಗಳನ್ನು ತೆಗೆಯುತ್ತಿದ್ದರು. ನಂತರ ಈ ಚಿತ್ರಗಳನ್ನು ಅಂತರ್ಜಾಲದಲ್ಲಿ ಹರಡುವುದಾಗಿ ಬೆದರಿಕೆ ಹಾಕುತ್ತಿದ್ದರು ಎಂದು ದೂರಲಾಗಿದೆ.

ಖಜನ್ ಸಿಂಗ್ ವಿರುದ್ಧ ದಾಖಲಾಗಿರುವ ಎಫ್.ಐ.ಆರ್. ಅನ್ನು ಗಂಭೀರವಾಗಿ ಪರಿಗಣಿಸಿರುವುದಾಗಿ ಹೇಳಿರುವ ಸಿ.ಆರ್.ಪಿ.ಎಫ್ ವಕ್ತಾರ ಮೋಸಸ್ ದಿನಕರನ್, ಐ.ಜಿ. ಹಂತದ ಅಧಿಕಾರಿಯ ಆಂತರಿಕ ಸಮಿತಿಯೊಂದನ್ನು ಈಗಾಗಲೇ ತನಿಖೆಗಾಗಿ ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ದೂರು ನೀಡಿದ ಮಹಿಳೆ ನಗರದಿಂದ ಹೊರಗಿದ್ದಾರೆ. ಹೀಗಾಗಿ ಇನ್ನೂ ಅವರ ಹೇಳಿಕೆ ಪಡೆದಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

2014ರಲ್ಲಿ ಸಿ.ಆರ್.ಪಿ.ಎಫ್.ನ ಇನ್ಸ್‌ಪೆಕ್ಟರ್ ಜನರಲ್ ಬಳಿ ಔಪಚಾರಿಕವಾಗಿ ದೂರು ದಾಖಲಿಸಲಾಗಿತ್ತು. ಈ ಬಗ್ಗೆ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರಿಗೂ ಪತ್ರ ಬರೆಯಲಾಗಿತ್ತು ಎಂದು ಮಹಿಳೆ ಹೇಳಿದ್ದಾರೆ ಎಂದು ಎಫ್.ಐ.ಆರ್.ನಲ್ಲಿ ತಿಳಿಸಲಾಗಿದೆ.

# ಶಸ್ತ್ರ ಚಿಕಿತ್ಸೆಗೆ ಅವಕಾಶ ನೀಡದಂತೆ ಐ.ಎಂ.ಎ ಪದಾಧಿಕಾರಿಗಳ ಮನವಿ




ರಾಣೇಬೆನ್ನೂರು, ಡಿ.10 - ಆಯುರ್ವೇದ ವೈದ್ಯರಿಗೆ ಶಸ್ತ್ರಚಿಕಿತ್ಸೆಗೆ ಅವಕಾಶ ನೀಡದಂತೆ ಒತ್ತಾಯಿಸಿ ಇಲ್ಲಿನ ಐ.ಎಂ.ಎ ಪದಾಧಿಕಾರಿಗಳು ತಹಶೀಲ್ದಾರರಿಗೆ ಮನವಿ ಪತ್ರ ಅರ್ಪಿಸಿದರು. ಡಾ. ಪ್ರವೀಣ ಖನ್ನೂರ, ಡಾ. ಚಂದ್ರಶೇಖರ್ ಕೇಲಗಾರ, ಡಾ. ರವಿ ಕುಲಕರ್ಣಿ, ಡಾ ಸಾವುಕಾರ, ಡಾ ವಿರುಪಾಕ್ಷಪ್ಪ ಮುಂತಾದವರಿದ್ದರು.

## ಕೂಡ್ಲಿಗಿಯಲ್ಲಿ ಚುನಾವಣಾಧಿಕಾರಿಗಳಿಗೆ ತರಬೇತಿ

ಕೂಡ್ಲಿಗಿ, ಡಿ.10- ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಗ್ರಾಮ ಪಂಚಾಯ್ತಿ ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ವೇದಿಕೆಯಲ್ಲಿ ಡಿವೈಎಸ್ಪಿ ಹರೀಶ್ ರೆಡ್ಡಿ, ತಹಶೀಲ್ದಾರ್ ಎಸ್. ಮಹಾಬಲೇಶ್ವರ್, ಸಿಪಿಐ ಪಂಪನಗೌಡ ಸೇರಿದಂತೆ ವಿವಿಧ ತಾಲ್ಲೂಕುಗಳ ಅಧಿಕಾರಿಗಳು ವೇದಿಕೆಯಲ್ಲಿದ್ದರು. ಪಿಡಬ್ಲ್ಯೂಡಿ ಅಧಿಕಾರಿ ಜಿ. ನಾಗನಗೌಡ ಸೇರಿದಂತೆ ವಿವಿಧ ಅಧಿಕಾರಿಗಳು, ಸಿಬ್ಬಂದಿಗೆ ತರಬೇತಿ ನೀಡಿದರು.

## ಹರಾಜು ಆಯ್ಕೆ ಮಾಡಿದರೆ ಕ್ರಿಮಿನಲ್ ಮೊಕದ್ದಮೆ

(1ನೇ ಪುಟದಿಂದ) ಈ ಬಗ್ಗೆ ಯಾರಾದರೂ ಸಾರ್ವಜನಿಕರಲ್ಲಿ ಮಾಹಿತಿ ಇದ್ದಲ್ಲಿ ಕೂಡಲೇ ಜಿಲ್ಲಾಧಿಕಾರಿ ಕಚೇರಿಗೆ ಅಥವಾ ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರರಿಗೆ ಮಾಹಿತಿ ನೀಡಬೇಕು. ಮಾಹಿತಿ ನೀಡಿದವರ ವಿವರಗಳನ್ನು ಗೌಪ್ಯವಾಗಿಡ ಲಾಗುವುದೆಂದು ಅವರು ತಿಳಿಸಿದ್ದಾರೆ.

## ರುದ್ರಾಕ್ಷಿ ಬಾಯಿಗೆ ಪ್ರಶಸ್ತಿ

ದಾವಣಗೆರೆ, ಡಿ.10- ತಾಲ್ಲೂಕಿನ ಚಿನ್ನಸಮುದ್ರದಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರುದ್ರಾಕ್ಷಿಬಾಯಿ ಪುಟ್ಯಾನಾಯ್ಕ ಅವರಿಗೆ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದಿಂದ ಚಿನ್ನಸಮುದ್ರದ ಚಿನ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ ಪ್ರಶಸ್ತಿ ಪ್ರದಾನ ಮಾಡಿದರು.ಮಕ್ಕಳ ಲೋಕದಲ್ಲಿ ಉಚಿತವಾಗಿ ಬಡ ಹಾಗೂ ಕಾರ್ಮಿಕ ಮಕ್ಕಳಿಗೆ ಜನಪದ ಸಂಗೀತ, ಶಾಸ್ತ್ರೀಯ, ಸುಗಮ ಸಂಗೀತ ಹೇಳಿಕೊಡುತ್ತಿದ್ದರು ಹಾಗೂ ಸಂಸ್ಥೆಯ ಪ್ರಾಚಾರ್ಯರೂ ಹೌದು. ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ ಎಂದು ತಿಳಿಸಿದರು.


ಪ್ರಸಾದ ವ್ಯವಸ್ಥೆಯನ್ನು ಮಕ್ಕಳ ಲೋಕದ ಅಧ್ಯಕ್ಷ ಎನ್. ಪುಟ್ಯಾನಾಯ್ಕ ಮಾಡಿದ್ದರು. 26 ಮಕ್ಕಳು ಕನ್ನಡ ಬರವಣಿಗೆ ಸ್ಪರ್ಧೆಯಲ್ಲಿ ಸೇವಾಲಾಲ್ ಗುರುಗಳಿಂದ, ಹೆಬ್ಬಾಳು ಶ್ರೀಗಳಿಂದ ಬಹುಮಾನ ಪಡೆದರು.ರುದ್ರಾಕ್ಷಿ ಬಾಯಿ ತಂದೆ, ತಾಯಿ ಕಾಳ್ಯಾನಾಯ್ಕ ಹಾಗೂ ಗಂಗೀಬಾಯಿ ಸಭೆಯಲ್ಲಿದ್ದರು.

## ಕುವೆಂಪು ಸಾಹಿತ್ಯ ಪರಿಸರ ಯಾನ ಕಮ್ಮಟಕ್ಕೆ ಅರ್ಜಿ

ದಾವಣಗೆರೆ, ಡಿ.10- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕುವೆಂಪು ಸಾಹಿತ್ಯ ಪರಿಸರ ಯಾನ ಎಂಬ ರಾಜ್ಯಮಟ್ಟದ ಮೂರು ದಿನಗಳ ಕಮ್ಮಟವನ್ನು ಇದೇ ದಿನಾಂಕ 27 ರಿಂದ 29 ರವರೆಗೆ ಕುವೆಂಪು ಪ್ರತಿಷ್ಠಾನ ಕುಪ್ಪಳ್ಳಿ ಇವರ ಸಹಯೋಗದೊಂದಿಗೆ ಕುಪ್ಪಳ್ಳಿ, ಶಿವಮೊಗ್ಗದಲ್ಲಿ ನಡೆಸಲು ಉದ್ದೇಶಿಸಿದ್ದು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ 20 ರಿಂದ 40 ವಯೋಮಾನದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ನಾಳೆ ದಿನಾಂಕ 11 ರೊಳಗೆ ಅರ್ಜಿ ಸಲ್ಲಿಸಬಹುದು. ಆಸಕ್ತರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http:// karnatakasahithyaacademy.org ನಿಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ಕರಿಯಪ್ಪ ತಿಳಿಸಿದ್ದಾರೆ.

# ಹಿಂದೂ - ಮುಸ್ಲಿಂ ಸಂಸ್ಕೃತಿ ಸಂಗಮ ನಿಸಾರ್ ಅಹಮದ್ : ಪ್ರೊ|| ರಂಗನಾಥ್



ದಾವಣಗೆರೆ, ಡಿ.10- ಹಿಂದೂ ಮತ್ತು ಮುಸ್ಲಿಂ ಸಂಸ್ಕೃತಿಗಳ ಸಂಗಮ ನಿತ್ಯೋತ್ಸವದ ಕವಿ ನಿಸಾರ್ ಅಹಮದ್ ಎಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ|| ಎಸ್.ಬಿ.ರಂಗನಾಥ್ ಬಣ್ಣಿಸಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಅಂತರ್ಜಾಲ ಆಧಾರಿತ 'ಕನ್ನಡ ನುಡಿಹಬ್ಬ' ಕಾರ್ಯಕ್ರಮದಲ್ಲಿ 'ನಿತ್ಯೋತ್ಸವ ಕವಿ ನಿಸಾರ್ ಅಹಮದ್' ವಿಷಯದ ಕುರಿತಾಗಿ ಅವರು ಉಪನ್ಯಾಸ ನೀಡಿದರು.

1976ರಲ್ಲಿ ಶಿವಮೊಗ್ಗದ ಕಾಲೇಜಿನ ಉಪನ್ಯಾಸಕರಾಗಿದ್ದಾಗಲೇ 6 ಕವನ ಸಂಕಲನಗಳನ್ನು ಹೊರತಂದು ಪ್ರಸಿದ್ಧರಾಗಿದ್ದರು. ಬೆಂಗಳೂರು ಆಕಾಶವಾಣಿಯಿಂದ ಆ ವರ್ಷದ ರಾಜ್ಯೋತ್ಸವದ ಅಂಗವಾಗಿ ಪ್ರಸಾರ ಮಾಡಲು ಕವನವೊಂದನ್ನು ಬರೆದುಕೊಡಲು ನಿಸಾರ್ ಅವರಿಗೆ ಒತ್ತಾಯಪೂರ್ವಕವಾಗಿ ಕೋರಿಕೆ ಬಂದಿದ್ದರ ಫಲವೇ ನಿಸಾರರ ಅಜರಾಮರ ಗೀತೆ ನಿತ್ಯೋತ್ಸವ. ಹೀಗಾಗಿ ಕನ್ನಡ ರಾಜ್ಯೋತ್ಸವಕ್ಕೂ ನಿಸಾರರ ನಿತ್ಯೋತ್ಸವಕ್ಕೂ ಬಿಡಿಸಲಾಗದ ನಂಟಿದೆ ಎಂದು ಅವರು ಹೇಳಿದರು.

ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ನಿಸಾರ್ ಅಹಮದ್‌ರವರದ್ದು ಮುಂಚೂಣಿಯ ಹೆಸರು. ಆರು ದಶಕಗಳ ಸುದೀರ್ಘ ಸಾಹಿತ್ಯದ ಯಾನದಲ್ಲಿ ನಿಸಾರ್ ಅವರು ಸೃಷ್ಟಿಸಿದ ಸಾಹಿತ್ಯ ವೈವಿಧ್ಯಮಯ. ನಿಸಾರ್ ಅವರು 20 ಕವನ ಸಂಕಲನಗಳು ಮತ್ತು 10 ಗದ್ಯ ಕೃತಿಗಳು, 5 ಅನುವಾದಗಳು, 5 ಮಕ್ಕಳ ಪುಸ್ತಕಗಳು, 13 ಸಂಪಾದನಾ ಕೃತಿಗಳು ಹಾಗೂ 13 ಧ್ವನಿ ಸುರುಳಿಗಳು ಅವರ ಸಾಹಿತ್ಯದ ಕೃಷಿಯಿಂದ ಮೂಡಿ ಬಂದಿವೆ ಎಂದು ತಿಳಿಸಿದರು.

ಗದ್ಯ-ಪದ್ಯ ಎರಡರಲ್ಲೂ ನಿಸಾರರ ಕೃತಿಗಳು ಅನನ್ಯ, ಅಪೂರ್ವ. ಇವರು ಯಾವ ಪಂಥಕ್ಕೂ ಕಟ್ಟು ಬೀಳದೆ, ತಮ್ಮದೇ ಆದ ರಾಜ ಮಾರ್ಗದಲ್ಲಿ ಶ್ರಮಿಸಿದವರು. ಅವರ ಕೃತಿಗಳ ಮೂಲಧಾತು, ಜೀವನ ಪ್ರೀತಿ, ಮಾನವೀಯ ಅನುಕಂಪ, ಆತ್ಮವಿಶ್ವಾಸ, ಉದಾತ್ತತೆ, ವಿಶಾಲ ದೃಷ್ಟಿ, ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಪ್ರತಿಭಟನೆ ಅವರ ಕೃತಿಗಳ ಮೂಲಧಾತುಗಳಾಗಿ ಕಂಡುಬರುತ್ತವೆ.

ಹಿಂದೂ ಮತ್ತು ಮುಸ್ಲಿಂ ಸಂಸ್ಕೃತಿಗಳ ಸಂಗಮ ನಿತ್ಯೋತ್ಸವದ ಕವಿ ನಿಸಾರ್ ಅವರು. ಇವರ ಕೃತಿಗಳಲ್ಲಿ ವಿಶ್ವ ದೃಷ್ಟಿಯನ್ನು ಕಾಣಬಹುದಾಗಿದೆ.

ಸಾಹಿತ್ಯದ ಸರ್ವ ಪ್ರಕಾರಗಳಲ್ಲೂ ತಮ್ಮದೇ ಛಾಪು ದಾಖಲಿಸಿದ ನಿಸಾರ್ ಅವರು, ಕನ್ನಡ ಜನಮನದ ನಿತ್ಯ ನೂತನ ಕವಿಗಳಾಗಿ ಕಂಗೊಳಿಸುತ್ತಿದ್ದಾರೆ ಎಂದು ನಿಸಾರ್ ಅವರ ಕುರಿತಾಗಿ ರಂಗನಾಥ್ ಅವರು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ನಿಸಾರ್ ಅಹಮದ್ ಅವರು ರಾಷ್ಟ್ರ ಕವಿಯಾಗಬೇಕು ಎಂಬ ಚಿಂತನೆ, ಅಭಿಲಾಷೆ ಅವರ ಅಭಿಮಾನಿಗಳಲ್ಲಿ ಇತ್ತು. ದುರದೃಷ್ಟವಶಾತ್ ಇಂದು ಅವರು ನಮ್ಮೊಂದಿಗಿಲ್ಲ ಎಂದು ಅವರನ್ನು ಸ್ಮರಿಸಿದರು.

ನಿಸಾರ್ ಅವರು ರಚಿಸಿದ ನಿತ್ಯೋತ್ಸವ ಗೀತೆ ಕನ್ನಡ ನುಡಿ ಹಬ್ಬಕ್ಕೆ ಮೆರಗು ತಂದುಕೊಟ್ಟಿದೆ. ಇಂದು ನಿಸಾರ್ ಅವರು ರಚಿಸಿರುವ ಗೀತೆಗಳ ಮೂಲಕ ಕನ್ನಡ ಅಭಿಮಾನಿಗಳ ಹೃದಯಗಳಲ್ಲಿ ಅಜರಾಮರರಾಗಿದ್ದಾರೆ. ನಿಸಾರ್ ಅವರ ಗೀತೆಗಳು ಇಂದಿಗೂ ಕನ್ನಡಿಗರ ನಾಲಿಗೆಯಲ್ಲಿ ಸುಳಿದಾಡುತ್ತಿರುತ್ತವೆ. ಅಂತಹ ಅದ್ಭುತ ಕವಿ ನಿಸಾರ್ ಎಂದು ಅವರನ್ನು ಸ್ಮರಿಸುತ್ತಾ ಗೌರವಾರ್ಪಣೆ ಸಲ್ಲಿಸಿದರು.

ಕೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ರುದ್ರಮುನಿ ಹಿರೇಮಠ ಸ್ವಾಗತಿಸಿದರು. ಸುಶ್ರಾವ್ಯ ಸಂಗೀತ ಮಹಾವಿದ್ಯಾಲಯದ ಶ್ರೀಮತಿ ಯಶಾ ದಿನೇಶ್ ಮತ್ತು ಅವರ ಬಳಗದವರು ನಾಡಗೀತೆ ಮತ್ತು ನಿಸಾರ್ ರಚಿಸಿದ ಗೀತೆಗಳನ್ನು ಹಾಡುವುದರೊಂದಿಗೆ ಸುಗಮ ಸಂಗೀತ ಕಾರ್ಯಕ್ರಮ ನೆರವೇರಿಸಿಕೊಟ್ಟರು.

**ದಾವಣಗೆರೆ ಶ್ರೀ ದಾನೇಶ್ವರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,**

# 619/1, ಮೊದಲನೇ ಮಹಡಿ, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002. ಫೋ. : 08192-232354

**ಆರನೇಯ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

*ಮಾನ್ಯ ಷೇರುದಾರರೇ,*

ಈ ಸಹಕಾರಿಯ 2019-20ನೇ ಸಾಲಿನ **ಆರನೇಯ ವಾರ್ಷಿಕ ಮಹಾಸಭೆ**ಯನ್ನು **ದಿನಾಂಕ 19.12.2020ನೇ ಶನಿವಾರದಂದು ಬೆಳಿಗ್ಗೆ 11.30** ಗಂಟೆಗೆ **ಆಡಳಿತ ಮಂಡಳಿ ಕಚೇರಿ, ಪಿ.ಜೆ. ಬಡಾವಣೆ, ದಾವಣಗೆರೆ** ಇಲ್ಲಿ ಸಹಕಾರಿಯ **ಅಧ್ಯಕ್ಷ ಶ್ರೀ ರವಿಶಂಕರ್ ಕೆ.ಎಂ.** ಇವರ ಘನ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ವಾರ್ಷಿಕ ಸಭೆಯ ಆಹ್ವಾನ ಪತ್ರಿಕೆಯನ್ನು ಎಲ್ಲಾ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿರುತ್ತೇವೆ. ಒಂದು ವೇಳೆ ತಲುಪದೇ ಇದ್ದಲ್ಲಿ ಇದನ್ನೇ ವಿಶೇಷ ಆಹ್ವಾನವೆಂದು ಭಾವಿಸಿ ಸಭೆಗೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡು, ತಮ್ಮ ಸಲಹೆ-ಸೂಚನೆಗಳನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ವಿಶೇಷ ಸೂಚನೆ : ಕೋವಿಡ್-19 ಇರುವುದರಿಂದ ಸಭೆಯನ್ನು ಸರಳವಾಗಿ ನಡೆಸಲಾಗುವುದು. (ಮಾಸ್ಕ್ ಮತ್ತು ಅಂತರ ಕಡ್ಡಾಯ)


ಆಡಳಿತ ಮಂಡಳಿಯ ಪರವಾಗಿ
ಮುಖ್ಯ ಕಾರ್ಯನಿರ್ವಾಹಕರು

**ಹುಟ್ಟುಹಬ್ಬದ ಶುಭಾಶಯಗಳು**




ಹರಿಹರ ವಿಧಾನಸಭಾ ಕ್ಷೇತ್ರದ ಜನಪ್ರಿಯ
ಮಾಜಿ ಶಾಸಕರೂ, ಕರ್ನಾಟಕ ರಾಜ್ಯ ಪ್ರದೇಶ
ಜಾತ್ಯತೀತ ಜನತಾ ದಳದ ಪ್ರಧಾನ
ಕಾರ್ಯದರ್ಶಿಗಳೂ, ವಿಧಾನ ಪರಿಷತ್ತಿನ ಮಾಜಿ
ಸದಸ್ಯರೂ, ನಮ್ಮ ನೆಚ್ಚಿನ ಯುವ ನಾಯಕರೂ ಆದ
**ಶ್ರೀ ಹೆಚ್.ಎಸ್. ಶಿವಶಂಕರ್**
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.


**ಮಹಾಂತೇಶ್ ವಿ. ಒಣರೊಟ್ಟಿ**
ಶ್ರೀ ಬಸವೇಶ್ವರ ಟ್ರಾನ್ಸ್‌ಪೋರ್ಟ್ ಕಂಪನಿ
110/32ಬಿ, ಸಂಗಮ್ ಕಾಂಪ್ಲೆಕ್ಸ್,
ಬಿ.ಟಿ. ಲೇ ಔಟ್, ಆರ್.ಎಂ.ಸಿ. ಲಿಂಕ್ ರಸ್ತೆ,
ದಾವಣಗೆರೆ. ಮೊ. : 94483 39312


**ಎನ್.ಆರ್. ನಾಗಭೂಷಣರಾವ್**
ಪಿಕಾಕ್ ಗ್ರೂಪ್ಸ್
ಬಿ.ಟಿ. ಲೇಔಟ್,
ಮಹಾವೀರ ರಸ್ತೆ, ದಾವಣಗೆರೆ.
94480 43405


**ಬೆಳ್ಳೂಡಿ ಶಿವಕುಮಾರ್**
ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಟ್ರಾನ್ಸ್‌ಪೋರ್ಟ್
ವಡ್ಡನಹಳ್ಳಿ, ಪಿ.ಬಿ. ರಸ್ತೆ,
ದಾವಣಗೆರೆ.
ಮೊ. : 94481 19815


**ಎಸ್. ಓಂಕಾರಪ್ಪ**
ಉಪಾಧ್ಯಕ್ಷರು, ಶ್ರೀ ಮುರುಘರಾಜೇಂದ್ರ
ಕೋ-ಆಪರೇಟಿವ್ ಬ್ಯಾಂಕ್,
ಉಪಾಧ್ಯಕ್ಷರು, ಲಯನ್ಸ್ ಕ್ಲಬ್, ದಾವಣಗೆರೆ.
ಮೊ. : 98441 83863

## ಬೇಸಿಗೆಯಲ್ಲಿ ಕಡಿಮೆ ನೀರು ಕೇಳುವ ಬೆಳೆಯನ್ನು ಬೆಳೆಯಿರಿ



ದಾವಣಗೆರೆ, ಡಿ.10 - ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ನಿಕ್ರಾ ಗ್ರಾಮದ ಅಗಸನಕಟ್ಟೆ ರೈತರಿಗೆ ಮಾಹಿತಿ ನೀಡಿದರು. ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ಬೇಸಿಗೆಯಲ್ಲಿ ಕೊಳವೆ ಬಾವಿಯ ಮೂಲಕ ಬೆಳೆಯನ್ನು ಬೆಳೆಯುವ ರೈತರು ಕಡಿಮೆ ನೀರು ಕೇಳುವ ಬೆಳೆಗಳನ್ನು ಬೆಳೆಯುವುದು ಸೂಕ್ತ. ರಾಗಿಯಲ್ಲಿ ನವೀನ ತಳಿಯಾದ ಎಂಎಲ್ 365, ಬೇಸಿಗೆಯಲ್ಲಿ ಬೆಳೆಯುವುದು ಉತ್ತಮ ಎಂದು ಮಾಹಿತಿ ನೀಡಿದರು. ತರಬೇತಿಯಲ್ಲಿ ಭಾಗವಹಿಸಿದ 25 ರೈತ ಬಾಂಧವರಿಗೆ ಒಳಸುರಿ ಆದ ರಾಗಿ ಬೀಜವನ್ನು ಪ್ರಾತ್ಯಕ್ಷಿಕೆ ಅಂಗವಾಗಿ 50 ಎಕರೆ ಪ್ರದೇಶಕ್ಕೆ ರೈತರಿಗೆ ವಿತರಿಸಲಾಯಿತು.

# ರೈತ ವಿರೋಧಿ ಕಾಯ್ದೆ ವಿರೋಧಿಸಿ ಪ್ರತಿಭಟನಾ ಜಾಥಾ

ದಾವಣಗೆರೆ, ಡಿ.10- ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಭೂಸ್ವಾಧೀನ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಬಿಲ್ ಕಾಯ್ದೆ ಸೇರಿದಂತೆ ರೈತ ವಿರೋಧಿ, ಜನ ವಿರೋಧಿ ತಿದ್ದುಪಡಿ ಕಾಯ್ದೆಗಳನ್ನು ವಿರೋಧಿಸಿ ರೈತ ಕೃಷಿ-ಕಾರ್ಮಿಕರ ಸಂಘಟನೆ (ಆರ್‌ಕೆಎಸ್) ರಾಜ್ಯ ಸಮಿತಿಯ ಕರೆಗೆ ಇಂದು ಆರ್‌ಕೆಎಸ್ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ತಾಲ್ಲೂಕಿನ ಮಾಯಕೊಂಡ ಗ್ರಾಮದಲ್ಲಿ ಜಮಾಯಿಸಿದ್ದ ಸಮಿತಿ ಪದಾಧಿಕಾರಿಗಳು, ಮಸೂದೆಗಳ ಪ್ರತಿಗಳನ್ನು ಸುಟ್ಟು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಆರ್‌ಕೆಎಸ್ ರಾಜ್ಯಾಧ್ಯಕ್ಷೆ ಸುನೀತ ಕುಮಾರ್ ಮಾತನಾಡಿ, ಸರ್ಕಾರದ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಯಿಂದ ಜನರಲ್ಲಿ ಆಹಾರದ ಅಸಮತೋಲನಕ್ಕೆ ಎಡೆಮಾಡಿಕೊಡುತ್ತದೆ. ಇಂದಿನ ನಿರುದ್ಯೋಗದಿಂದ ಜನರು ಆರ್ಥಿಕವಾಗಿ ದಿವಾಳಿಯಾಗಿರುವಾಗ ಬೆಲೆ ಏರಿಕೆಯಿಂದ ತಲ್ಲಣಗೊಂಡಿದ್ದಾರೆ. ಶಿಕ್ಷಣ, ಆರೋಗ್ಯ, ವ್ಯಾಪಾರೀಕರಣ ಈ ಎಲ್ಲಾ ಭೀಕರ ಸಮಸ್ಯೆಗಳೇ ಜನರ ಹೋರಾಟಕ್ಕೆ ಕಾರಣವಾಗಿವೆ ಎಂದು ತಿಳಿಸಿದರು.



ನಂತರ ಬಾವಿಹಾಳ್, ಆನಗೋಡು ಗ್ರಾಮಗಳಲ್ಲಿ ಈ ಪ್ರತಿಭಟನಾ ಜಾಥಾ ಮುಂದುವರೆಯಿತು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ತಿಪ್ಪೇಸ್ವಾಮಿ ಅಣಬೇರು, ಸಂಘಟನಾಕಾರರಾದ ಮಧು ತೊಗಲೇರಿ, ಪರಶುರಾಮ್, ಭಾರತಿ, ನಾಗಜ್ಯೋತಿ, ಕಾವ್ಯ, ಸ್ಮಿತಾ, ಕರ್ನಾಟಕ ರಾಜ್ಯ ರೈತ ಸಂಘದ (ಪುಟ್ಟಣ್ಣಯ್ಯ ಬಣ) ಜಿಲ್ಲಾ ನಾಯಕರಾದ ಪ್ರತಾಪ್, ಅಶೋಕ್ ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಕುರುಬ ಸಮಾಜದ ಜಾಗೃತಿ ಸಮಾವೇಶ : ಸಭೆ

ದಾವಣಗೆರೆ, ಡಿ.10- ಕುರುಬ ಸಮುದಾಯಕ್ಕೆ ಎಸ್.ಟಿ. ಮೀಸಲಾತಿ ನೀಡುವಂತೆ ನಡೆಸುತ್ತಿರುವ ಹೋರಾಟಕ್ಕೆ ಸಂಬಂಧಿಸಿದಂತೆ ಮೂರು ಜಿಲ್ಲೆಗಳಲ್ಲಿ ಜಾಗೃತಿ ಸಮಾವೇಶ ನಡೆಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ನಗರದಲ್ಲಿ ನಾಡಿದ್ದು ದಿನಾಂಕ 12 ರ ಶನಿವಾರ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಕುರುಬರ ಎಸ್.ಟಿ. ಹೋರಾಟ ಸಮಿತಿ ಅಧ್ಯಕ್ಷ ಬಿ.ಎಂ. ಸತೀಶ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಸಮಾವೇಶದ ರೂಪುರೇಷೆ ಕುರಿತು ಚರ್ಚಿಸಲು ನಗರದ ಬೀರೇಶ್ವರ ಭವನದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ ಎಂದರು.

ಸಭೆಯಲ್ಲಿ ಕಾಗಿನೆಲೆಯ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶಾಖಾ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ ಸೇರಿದಂತೆ ಸಚಿವರುಗಳಾದ ಕೆ.ಎಸ್. ಈಶ್ವರಪ್ಪ, ಹೆಚ್.ವಿಶ್ವನಾಥ್, ಭೈರತಿ ಬಸವರಾಜ್, ಹೆಚ್.ಎಂ. ರೇವಣ್ಣ, ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಕೆ.ಮುಕುಡಪ್ಪ ಇತರರು ಭಾಗವಹಿಸಲಿದ್ದಾರೆ ಎಂದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಸಭೆಗೆ ಪ್ರತಿ ಗ್ರಾಮದಿಂದ ಇಬ್ಬರು ಪಾಲ್ಗೊಳ್ಳುವಂತೆಯೂ, ನಂತರ ನಡೆಯುವ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಳ್ಳುವಂತೆ ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಪಿ.ಜೆ. ರಮೇಶ್, ಹಾಲೇಕಲ್ಲು ವೀರಣ್ಣ, ಶಿವಣ್ಣ ಮೇಷ್ಟ್ರು, ಅಡಾಣಿ ಸಿದ್ದಪ್ಪ ಮತ್ತು ಇತರರು ಉಪಸ್ಥಿತರಿದ್ದರು.

### ಜಿಎಂಐಟಿಯಲ್ಲಿ ಕನಕ ಜಯಂತಿ

ದಾವಣಗೆರೆ, ಡಿ.10- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್, ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಷ್ಚಂದ್ರ ಹಾಗೂ ಕಾಲೇಜು ಸಿಬ್ಬಂದಿ ವರ್ಗದವರು ಹಾಜರಿದ್ದರು.

### ದಿನದ ಚುಟುಕು

ಭಾವ ಬೆಸೆದ ಅನುಬಂಧ
ಬಿಗಿ ಹಿಡಿತದೊಳು ಸಂಬಂಧ
ಬೀಸಿದರೆ ಭಾವಕ್ಕೆ ಹೊಡೆತ
ಕಡಿಯಿತಲ್ಲಿ ತಂತು ಮಿಡಿತ!!

- ಶ್ರೀಮತಿ ವೀಕೆಎಂ

### ನಗರಕ್ಕೆ ಇಂದು ಸಂಸದರು

ಸಂಸದ ಜಿ.ಎಂ.ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ 12 ರಿಂದ ಮಧ್ಯಾಹ್ನ 3 ರವರೆಗೆ ಜಿಎಂಐಟಿ ಅತಿಥಿ ಗೃಹದಲ್ಲಿ ಸಾರ್ವಜನಿಕರನ್ನು ಭೇಟಿಯಾಗಲಿದ್ದಾರೆ.

## ಬಿಜೆಪಿ ಅಧ್ಯಕ್ಷರ ಬೆಂಗಾವಲು ವಾಹನಗಳ ಮೇಲೆ ದಾಳಿ

**ದಾಳಿಯಲ್ಲಿ ಬಿಜೆಪಿ ಹಿರಿಯ ಮುಖಂಡರಿಗೆ ಗಾಯ, ನಡ್ಡಾ ಪಾರು**

ಡೈಮಂಡ್ ಹಾರ್ಬರ್, ಡಿ. 10 – ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಬೆಂಗಾವಲು ವಾಹನಗಳು ಪಶ್ಚಿಮ ಬಂಗಾಳದಲ್ಲಿ ತೆರಳುವಾಗ ಹಲ್ಲೆ ನಡೆಸಲಾಗಿದೆ. ಇದರ ಹಿಂದೆ ತೃಣಮೂಲ ಕಾಂಗ್ರೆಸ್ ಕೈವಾಡ ಇದೆ ಎಂದು ಬಿಜೆಪಿ ಆರೋಪಿಸಿದೆ.

ಸಭೆಯೊಂದರಲ್ಲಿ ಪಾಲ್ಗೊಳ್ಳಲು ನಡ್ಡಾ ಡೈಮಂಡ್ ಹಾರ್ಬರ್ ಬಳಿ ತೆರಳುವಾಗ ಹಲ್ಲೆ ನಡೆಸಲಾಗಿದೆ. ಇದರಿಂದಾಗಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಸ್ ವಿಜಯವರ್ಗೀಯ ಸೇರಿದಂತೆ ಹಲವು ನಾಯಕರಿಗೆ ಗಾಯಗಳಾಗಿವೆ. ಆದರೆ, ನಡ್ಡಾ ದಾಳಿಯಿಂದ ಪಾರಾಗಿದ್ದಾರೆ.

ಡೈಮಂಡ್ ಹಾರ್ಬರ್ ಕ್ಷೇತ್ರವನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರ ಸಂಬಂಧಿ ಅಭಿಷೇಕ್ ಬ್ಯಾನರ್ಜಿ ಪ್ರತಿನಿಧಿಸುತ್ತಿದ್ದಾರೆ.

ನಂತರ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ನಡ್ಡಾ, ನಾನು ಇಂದು ನೋಡಿರುವುದು ಆಘಾತಕಾರಿ ಹಾಗೂ ಅಭೂತಪೂರ್ವವಾಗಿದೆ. ಪಶ್ಚಿಮ ಬಂಗಾಳ ಅರಾಜಕ ಹಾಗೂ ಅಸಹಿಷ್ಣುವಾಗುತ್ತಿದೆ. ಆಡಳಿತ ಸಂಪೂರ್ಣ ವಿಫಲವಾಗಿದ್ದೂ ಗೂಂಡಾ ರಾಜ್ಯ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.

ನಾನು ಗುಂಡು ನಿರೋಧಕ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಕಾರಣ ಹಾನಿಯಾಗಿಲ್ಲ. ಆದರೆ, ಉಳಿದ ಬೆಂಗಾವಲು ವಾಹನಗಳಲ್ಲಿದ್ದವರು ಹಲ್ಲೆಗೆ ಗುರಿಯಾಗಿದ್ದಾರೆ. ಬಿಜೆಪಿ ಹಿರಿಯ ನಾಯಕರಿಗೆ ಹೀಗೆ ಆಗುತ್ತಿರುವಾಗ, ಸಾಮಾನ್ಯ ಕಾರ್ಯಕರ್ತರ ಪರಿಸ್ಥಿತಿ ಏನೆಂಬುದನ್ನು ಸುಲಭವಾಗಿ ಊಹಿಸಬಹುದಾಗಿದೆ ಎಂದಿದ್ದಾರೆ.

ದುರ್ಗಾ ಮಾತೆಯ ಕೃಪೆಯಿಂದಾಗಿ ನಾನು ಇಲ್ಲಿಗೆ ತಲುಪಲು ಸಾಧ್ಯವಾಗಿದೆ. ಬಂಗಾಳದ ಸಾಮಾನ್ಯ ಕಾರ್ಯಕರ್ತರ ಪರಿಸ್ಥಿತಿ ಎಷ್ಟು ಕಷ್ಟವಾಗಿದೆ ಎಂಬುದನ್ನು ನಾನು ಊಹಿಸಬಲ್ಲೆ ಎಂದು ತಿಳಿಸಿದ್ದಾರೆ.

# ಆಹಾರ ಭದ್ರತೆ, ಉದ್ಯೋಗ ಖಾತ್ರಿ, ಮಾಹಿತಿ ಹಕ್ಕು, ಶಿಕ್ಷಣ ಹಕ್ಕು ಜಾರಿಗೆ ಶ್ರಮಿಸಿದ ಸೋನಿಯಾ ಗಾಂಧಿ



ದಾವಣಗೆರೆ, ಡಿ.10- 2004 ರಲ್ಲಿ ರಾಷ್ಟ್ರದಲ್ಲಿ ಸೋನಿಯಾಗಾಂಧಿ ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಇಡೀ ರಾಷ್ಟ್ರವೇ ಸೋನಿಯಾಜೀ ಪ್ರಧಾನಿಯಾಗಬೇಕೆಂದು ಬಯಸಿದ್ದರೂ ಸಹ, ತಾವು ಹುದ್ದೆ ಅಲಂಕರಿಸದೆ ಆರ್ಥಿಕ ತಜ್ಞ ಡಾ.ಮನಮೋಹನ್ ಸಿಂಗ್ ಅವರಿಗೆ ಪ್ರಧಾನಮಂತ್ರಿ ಹುದ್ದೆ ನೀಡುವ ಮೂಲಕ ತ್ಯಾಗಮಯಿಯಾದರು ಎಂದು ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಎಂದು ಹೇಳಿದರು.

ನಗರದ ವನಿತಾ ಸಮಾಜದ ಹಿರಿಯ ವನಿತೆಯರ ಆನಂದಧಾಮದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದಿಂದ ನಿನ್ನೆ ಏರ್ಪಡಿಸಿದ್ದ ಎಐಸಿಸಿ ಅಧ್ಯಕ್ಷರಾದ ಸೋನಿಯಾಗಾಂಧಿ ಅವರ 74ನೇ ಜನ್ಮ ದಿನ ಹಿನ್ನೆಲೆಯಲ್ಲಿ ಹಿರಿಯ ಜೀವಗಳಿಗೆ ಹಣ್ಣು ವಿತರಿಸಿ ಅವರು ಮಾತನಾಡಿದರು.

ಸೋನಿಯಾಗಾಂಧಿ ಅವರು ರಾಜಕೀಯ ಮುತ್ಸದ್ಧಿ ನಾಯಕಿಯಾಗಿದ್ದು, ಕಾಂಗ್ರೆಸ್ ಪಕ್ಷದ 135 ವರ್ಷಗಳ ಇತಿಹಾಸದಲ್ಲಿ ದೀರ್ಘಕಾಲ ಅಧ್ಯಕ್ಷ ಹುದ್ದೆ ಅಲಂಕರಿಸಿದ್ದಾರೆ. ಯುಪಿಎ ಅಧ್ಯಕ್ಷರಾಗಿ 2004 ರಿಂದ 14 ರವರೆಗೆ ರಾಷ್ಟ್ರದ ಚುಕ್ಕಾಣಿ ಹಿಡಿದಿದ್ದ ಮನಮೋಹನ್ ಸಿಂಗ್ ಅವರಿಗೆ ಮಾರ್ಗದರ್ಶನ ಮಾಡಿ, ಬಡವರ ಹಾಗೂ ಜನಪರ ಕಾರ್ಯಕ್ರಮ ಜಾರಿಗೆ ತಂದರು. ಸೋನಿಯಾಗಾಂಧಿ ಅವರ ಕನಸಿನ ಯೋಜನೆಗಳಾದ ಆಹಾರ ಭದ್ರತೆ, ರಾಷ್ಟ್ರೀಯ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸೋನಿಯಾಗಾಂಧಿ ಅವರು ಶ್ರಮಿಸುವ ಮೂಲಕ ದೇಶ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಕೋಮುವಾದಿಗಳು ಪದೇ ಪದೇ ವಿದೇಶಿ ಮಹಿಳೆಯೆಂದು ಸೋನಿಯಾ ಅವರನ್ನು ಟೀಕಿಸಿದ್ದಕ್ಕೆ ಸರಿಯಾದ ಉತ್ತರ ನೀಡಿದ ಅವರು, ಭಾರತ ನನ್ನ ಮನೆ, ನನ್ನ ದೇಶ, ನಾನು ಇಲ್ಲಿಯೇ ಕೊನೆಯುಸಿರು ಎಳೆಯುತ್ತೇನೆ. ನನ್ನ ಅಸ್ಥಿಯು ಭಾರತದ ಮಣ್ಣಿನಲ್ಲಿಯೇ ವಿಲೀನಗೊಳ್ಳುತ್ತದೆ. ಭಾರತದೊಂದಿಗೆ ನನ್ನ ಬಾಂಧವ್ಯ ಎಂದು ಹೇಳುವ ಮೂಲಕ ಸೋನಿಯಾಜೀ ಅವರು ರಾಷ್ಟ್ರಪ್ರೇಮ ಮೆರೆದಿದ್ದಾರೆ ಎಂದು ಶ್ಲಾಘಿಸಿದರು.

ಈ ವೇಳೆ ಪಾಲಿಕೆ ಸದಸ್ಯರಾದ ದೇವರಮನೆ ಶಿವಕುಮಾರ್, ಮಂಜುನಾಥ ಗಡಿಗುಡಾಳ್, ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಕೆ.ಎಂ. ಮಂಜುನಾಥ, ಬಿ.ಶಿವಕುಮಾರ್, ಎಂ.ಕೆ. ಲಿಯಾಖತ್ ಅಲಿ, ಬಾಷಾ ಆರ್‌ಬಿಜೆಡ್, ವಿ. ಶ್ರೀನಿವಾಸ್ ಮತ್ತು ಇತರರು ಇದ್ದರು.

## ಕ್ಷಯರೋಗ ಪತ್ತೆ ಚಿಕಿತ್ಸಾ ಆಂದೋಲನ



ದಾವಣಗೆರೆ, ಡಿ.10- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರದ ವತಿಯಿಂದ ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನ ಕಾರ್ಯಕ್ರಮ ಶ್ರೀರಾಮನಗರದ ಶ್ರೀ ಆಂಜನೇಯ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

31ನೇ ವಾರ್ಡ್ ಪಾಲಿಕೆ ಸದಸ್ಯೆ ಗೀತಾ ನಾಗರಾಜ್, ಮುಖಂಡರಾದ ಚಂದ್ರಪ್ಪ, ತಾಲ್ಲೂಕು ಕ್ಷಯರೋಗ ಮೇಲ್ವಿಚಾರಕ ಬಸವರಾಜ್, ಎಸ್‌ಟಿಎಲ್‌ಎಸ್ ಎಚ್.ವಿ. ಕುಮಾರ್, ಅಬ್ದುಲ್, ಪ್ರಕಾಶ್, ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತೆಯರು ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ನಗರದಲ್ಲಿ ವೈದಿಕ ಪಾಠ ಶಾಲೆ ಆರಂಭ

ದಾವಣಗೆರೆ, ಡಿ.10- ಇಲ್ಲಿನ ವಿನೋಬನಗರದ ಶ್ರೀ ಜಗದ್ಗುರು ಪಂಡಿತಾರಾಧ್ಯ ವೇದಾಗಮ ಸಂಸ್ಕೃತ ಪೀಠ ಶಾಲೆಯಿಂದ ಶೀಘ್ರದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವೈದಿಕ ಪಾಠಶಾಲೆ ಪುನರಾರಂಭಗೊಳ್ಳಲಿದೆ. ಆಸಕ್ತ ಜಂಗಮ ವಟುಗಳು ಶ್ರೀಶೈಲ ಮಠದ ಕಚೇರಿಯಲ್ಲಿ ಹೆಸರು ನೋಂದಾಯಿಸುವಂತೆ ಬನ್ನಯ್ಯ ಸ್ವಾಮಿ ತಿಳಿಸಿದ್ದಾರೆ.

## ಶಿವ ಸಹಕಾರಿ ಬ್ಯಾಂಕ್ ನಿಯಮಿತ, (ಕೋರ್ ಬ್ಯಾಂಕಿಂಗ್)

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.
ಫೋ. : 08192 -256107. ಮೊ.ನಂ. 94498 19322, 99644 34634, 94804 47320

ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರುಗಳು :



ಶ್ರೀ ಎಂ.ಬಿ. ಸಂಗಮೇಶ್ವರಗೌಡರು, ಅಧ್ಯಕ್ಷರು
ಶ್ರೀ ದೊಗ್ಗಳ್ಳಿ ಎಂ. ಬಸವರಾಜ್, ನಿರ್ದೇಶಕರು
ಶ್ರೀ ಬಿ.ಎಸ್. ಪ್ರಕಾಶ್, ನಿರ್ದೇಶಕರು
ಶ್ರೀ ಕೆ.ಜಿ.ಡಿ. ಪ್ರಭು, ನಿರ್ದೇಶಕರು
ಶ್ರೀ ಕೆ.ಪಿ. ಪ್ರದೀಪ್, ನಿರ್ದೇಶಕರು
ಶ್ರೀ ಗೌಡ್ರು ಸಿದ್ದಪ್ಪ, ನಿರ್ದೇಶಕರು
ಶ್ರೀ ಜಿ.ಪಿ. ವಾಗೀಶ್ ಬಾಬು, ನಿರ್ದೇಶಕರು
ಶ್ರೀ ಜೆ.ಎಸ್. ಸಿದ್ದಪ್ಪ, ನಿರ್ದೇಶಕರು
ಶ್ರೀಮತಿ ಎನ್. ವಸಂತ, ನಿರ್ದೇಶಕರು
ಶ್ರೀಮತಿ ಡಿ. ನಿರ್ಮಲ, ನಿರ್ದೇಶಕರು
ಶ್ರೀ ಈ. ಚಂದ್ರಣ್ಣ, ವೃತ್ತಿಪರ ನಿರ್ದೇಶಕರು
ಶ್ರೀ ಎಸ್. ರಾಜಶೇಖರ್, ವೃತ್ತಿಪರ ನಿರ್ದೇಶಕರು
ಶ್ರೀ ಎ.ಆರ್. ಸಿದ್ದರಾಮಪ್ಪ, ಪ್ರಧಾನ ವ್ಯವಸ್ಥಾಪಕರು
ಶ್ರೀ ಐಗೂರು ಸಿ. ಚಂದ್ರಶೇಖರ್, ಉಪಾಧ್ಯಕ್ಷರು

### ಬ್ಯಾಂಕಿನ 46ನೇ ವಾರ್ಷಿಕ ಮಹಾಸಭೆಯ ನೋಟೀಸು

**ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ 2019-2020ನೇ ಸಾಲಿನ 46ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ದಿನಾಂಕ 13-12-2020ರ ಭಾನುವಾರ ಬೆಳಗ್ಗೆ 11.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್/ ವರ್ಚುವಲ್ ಮುಖಾಂತರ ಶ್ರೀಯುತ ಎಂ.ಬಿ ಸಂಗಮೇಶ್ವರಗೌಡರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ವಿಡಿಯೋ ಕಾನ್ಫರೆನ್ಸ್/ ವರ್ಚುವಲ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.**

**ಸಭೆಯ ಕಾರ್ಯಕಲಾಪಗಳು :**

1) ಪ್ರಾರ್ಥನೆ. 2) ಸ್ವಾಗತ. 3) ಮರಣ ಹೊಂದಿದ ಬ್ಯಾಂಕಿನ ಸದಸ್ಯರಿಗೆ ಸಂತಾಪ ಸೂಚಿಸುವುದು. 4) 2018-19ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ರಿಕಾರ್ಡ್ ಮಾಡುವುದು. 5) 2019-20ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು. 6) 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆ, ಲಾಭ - ನಷ್ಟ ತಃಖ್ತೆಗಳನ್ನು ಪರಿಶೀಲಿಸಿ ಅಂಗೀಕರಿಸುವುದು. 7)2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ದೋಷಗಳಿಗೆ ಅನುಪಾಲನಾ ವರದಿಯನ್ನು ಪರಿಶೀಲಿಸುವುದು. 8)2019-20ನೇ ವರ್ಷದ ಆಯವ್ಯಯದಲ್ಲಿನ ಹೆಚ್ಚುವರಿ ಖರ್ಚುಗಳ ಅನುಮೋದನೆ ಹಾಗೂ 2020-21ನೇ ವರ್ಷದ ಆಯವ್ಯಯದ ಮಂಜೂರಾತಿ. 9) ನಿಯಮಾನುಸಾರ ಲಾಭವನ್ನು ವಿನಿಯೋಗಿಸುವುದು, ಲಾಭಾಂಶ ಪ್ರಮಾಣವನ್ನು ಅನುಮೋದಿಸುವುದು. 10) ಬ್ಯಾಂಕು ಪಡೆಯಬಹುದಾದ ಸಾಲದ ಮಿತಿಯನ್ನು ನಿರ್ಧರಿಸುವುದು. 11) 2020-21ನೇ ಸಾಲಿಗೆ ಸನ್ನದು ಲೆಕ್ಕಪರಿಶೋಧಕರ ಆಯ್ಕೆ ಮತ್ತು ಶುಲ್ಕ ನಿಗದಿಗೊಳಿಸುವುದು. 12)ಬ್ಯಾಂಕಿನ ಸಂಚಯನಗಳನ್ನು ಪರಿಶೀಲಿಸಿ ಅಂಗೀಕರಿಸುವುದು. 13)2020-21ನೇ ಸಾಲಿನ ಆಡಳಿತ ಮಂಡಲಿ ರೂಪಿಸಿದ ಕಾರ್ಯ ಚಟುವಟಿಕೆಗಳನ್ನು ಅನುಮೋದಿಸುವುದು. 14)ಆಡಳಿತ ಮಂಡಲಿಯು ನಿಯಮಾನುಸಾರ ರೂಪಿಸಿದ ಠೇವಣಿ/ಸಾಲ ನಿಯಮ/ ಸಿಬ್ಬಂದಿ ಸೇವಾ ನಿಯಮಗಳ ಅನುಮೋದನೆ. 15) ಬ್ಯಾಂಕಿನ ಕಾರ್ಯಕ್ಷೇತ್ರ ವ್ಯಾಪ್ತಿಯ ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಹೊಸ ಶಾಖೆಯನ್ನು ತೆರೆಯಲು ಆರ್.ಬಿ.ಐ ಅನುಮತಿ ಕೇಳುವ ಪ್ರಸ್ತಾವನೆಯನ್ನು ಅನುಮೋದಿಸುವುದು. 16) ಸಹಕಾರ ಸಂಘಗಳ ನಿಯಮಾನುಸಾರ ತಿದ್ದುಪಡಿಯಾದ ಬ್ಯಾಂಕಿನ ಉಪನಿಯಮಗಳನ್ನು ಅನುಮೋದಿಸುವುದು. 17) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು. 18)ವಂದನಾರ್ಪಣೆ.

**ಆಡಳಿತ ಮಂಡಲಿ ಪರವಾಗಿ,**

**ಬ್ಯಾಂಕಿನ ಸದಸ್ಯರ ಗಮನಕ್ಕೆ**

ಬ್ಯಾಂಕಿನ ಸದಸ್ಯರ ಗಮನಕ್ಕೆ ಈ ಮೂಲಕ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್-19 ವೈರಸ್ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ, ಸಇ43ಸಿ.ಎಲ್‌ಎಮ್ 2020(ಇ), ಬೆಂಗಳೂರು, ದಿನಾಂಕ 21.10.2020ರನ್ವಯ, ಮುಖ್ಯವಾಗಿ ಬ್ಯಾಂಕಿನ ಸರ್ವಸದಸ್ಯರ ಸುರಕ್ಷತೆಯನ್ನು ಕಾಪಾಡುವ ಉದ್ದೇಶದಿಂದ ದಿನಾಂಕ 28.10.2020ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ **ವಾರ್ಷಿಕ ಮಹಾಸಭೆಯನ್ನು 'ವಿಡಿಯೋ ಕಾನ್ಫರೆನ್ಸ್/ ವೆಬ್‌ಕಾಸ್ಟ್'** ಮೂಲಕ **ದಿನಾಂಕ 13.12.2020ರ ಭಾನುವಾರ ಬೆಳಗ್ಗೆ 11.30 ಗಂಟೆಗೆ** ನಡೆಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಮಾನ್ಯ ಸದಸ್ಯರುಗಳು ತಮ್ಮ ಹತ್ತಿರದ ಶಾಖೆಗೆ ಕೂಡಲೇ ಭೇಟಿ ನೀಡಿ ತಮ್ಮ ಮೊಬೈಲ್ ಸಂಖ್ಯೆಯನ್ನು Update ಮಾಡಿಸಿದ್ದಲ್ಲಿ ತಮ್ಮ ಮೊಬೈಲ್‌ಗೆ **ವಾಟ್ಸಾಪ್ ಮತ್ತು ಎಸ್.ಎಂ.ಎಸ್ ಮೂಲಕ https://seeall.live/SSCBLD** ಲಿಂಕ್ ಕಳುಹಿಸಲಾಗುವುದು. ದಿನಾಂಕ 13-12-2020ರಂದು ಬೆಳಗ್ಗೆ 11.30 ಗಂಟೆಗೆ ಈ ಲಿಂಕ್ ಒತ್ತಿ Member ID **(ಸದಸ್ಯತ್ವ ಸಂಖ್ಯೆ)** Entry **ಮಾಡುವುದರ** ಮೂಲಕ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ **ವಿಡಿಯೋ ಕಾನ್ಫರೆನ್ಸ್/ ವೆಬ್‌ಕಾಸ್ಟ್'** ಮೂಲಕ ಭಾಗವಹಿಸಲು ವಿನಂತಿಸಲಾಗಿದೆ. ಈ ಲಿಂಕ್ ಅನ್ನು ತಾವುಗಳು ಉಪಯೋಗಿಸಿದಲ್ಲಿ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಸದಸ್ಯರು ಮೂರು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಾತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಎಲ್ಲಾ ಅರ್ಹ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿರುತ್ತದೆ ಹಾಗೂ ವಿಷಯ ಸೂಚಿಯನ್ನು ದಿನಾಂಕ 29.11.2020ರಂದು ಜನತಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಮಾನ್ಯ ಸದಸ್ಯ ಬಾಂಧವರಿಗೆ ವಾರ್ಷಿಕ ಮಹಾಸಭೆಯ ಪುಸ್ತಕವು ಸ್ವೀಕೃತಿಯಾಗದೇ ಇದ್ದಲ್ಲಿ ಪ್ರಕಟಣೆಯೇ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವೆಂದು ಪರಿಗಣಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಹಾಸಭೆಗೆ ಹಾಜರಾಗಲು ವಿನಂತಿಸಲಾಗಿದೆ.

**ಆಡಳಿತ ಮಂಡಲಿ ಪರವಾಗಿ**

**ಎಂ.ಬಿ. ಸಂಗಮೇಶ್ವರಗೌಡರು,** ಅಧ್ಯಕ್ಷರು — **ಐಗೂರು ಸಿ. ಚಂದ್ರಶೇಖರ್,** ಉಪಾಧ್ಯಕ್ಷರು

### ನ್ಯಾಮತಿ : ರಾಮೇಶ್ವರದಲ್ಲಿ ಪೌಷ್ಠಿಕ ಕೈತೋಟ ತರಬೇತಿ



ನ್ಯಾಮತಿ, ಡಿ.10- ದಾವಣಗೆರೆಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನ್ಯಾಮತಿ ತಾಲ್ಲೂಕು ರಾಮೇಶ್ವರ ಗ್ರಾಮದಲ್ಲಿ ಪೌಷ್ಠಿಕ ಕೈತೋಟ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಮಾತನಾಡಿ, ಪಾರಂಪರಿಕ ಕೃಷಿ ವಿಕಾಸ ಯೋಜನೆಯಡಿ ನೀಡಿರುವ ಜೀವಾಮೃತ ಘಟಕಗಳನ್ನು ಪರಿಣಾಮಕಾರಿಯಾಗಿ ಬಳಸಿ ಕೈತೋಟದ ಸದುದ್ಧೇಶವನ್ನು ಈಡೇರಿಸಬೇಕೆಂದು ಕರೆ ನೀಡಿದರು.

ರೈತ ಮಹಿಳೆಯರಿಗೆ ಹಳದಿ ಅಂಟು ಚೀಟಿ ಮತ್ತು ಬೇವಿನ ಪುಡಿಯನ್ನು ವಿತರಿಸಲಾಯಿತು. ರೈತ ಮಹಿಳೆಯರಾದ ಯಶೋದಮ್ಮ, ಗಾಯತ್ರಮ್ಮ, ಪಾರ್ವತಿ, ಶಿಲ್ಪ, ಹೇಮಾವತಿ, ಸಾಕಮ್ಮ ಇನ್ನಿತರರಿದ್ದರು.

### ರಾಣೇಬೆನ್ನೂರು : ಲಕ್ಷ ದೀಪೋತ್ಸವ ಬದಲು ಸಹಸ್ರ ದೀಪೋತ್ಸವ



ರಾಣೇಬೆನ್ನೂರು, ಡಿ.10- ನಗರದ ಹೊರವಲಯದಲ್ಲಿರುವ ಹಿರೇಮಠದ ಶ್ರೀ ಶನೈಶ್ಚರ ಮಂದಿರದಲ್ಲಿ 8 ನೇ ವರ್ಷದ ಲಕ್ಷ ದೀಪೋತ್ಸವವನ್ನು ಕೊರೊನಾ ಹಿನ್ನೆಲೆಯಲ್ಲಿ ಲಕ್ಷ ದೀಪೋತ್ಸವ ಬದಲಾಗಿ ಸಹಸ್ರ ದೀಪೋತ್ಸವವನ್ನು ನಾಡಿದ್ದು ದಿನಾಂಕ 12 ರ ಶನಿವಾರ ಸಂಜೆ 7 ಗಂಟೆಗೆ ನೆರವೇರಿಸಲಾಗುವುದು ಎಂದು ಮಂದಿರದ ಶ್ರೀ ಶಿವಯೋಗಿ ಶ್ರೀಗಳು ತಿಳಿಸಿದ್ದಾರೆ.

ಶಾಸಕ ಅರುಣಕುಮಾರ ಪೂಜಾರ ದೀಪೋತ್ಸವ ಉದ್ಘಾಟಿಸುವರು. ಹರ ಗುರು ಚರ ಮೂರ್ತಿಗಳು, ಸಮಿತಿಯ ಪದಾಧಿಕಾರಿಗಳು ದೀಪೋತ್ಸವದಲ್ಲಿ ಭಾಗವಹಿಸುವರು. ನಾಳೆ ದಿನಾಂಕ 11 ರ ಶುಕ್ರವಾರ ನಡೆಯಬೇಕಿದ್ದ 1008 ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಕೇವಲ 108 ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಈ ಬಾರಿಯ ಮನುಕುಲ ಸದ್ಭಾವನಾ ಪ್ರಶಸ್ತಿಯನ್ನು ರದ್ದು ಪಡಿಸಲಾಗಿದೆ. ಇದರ ಜೊತೆಗೆ 384 ದಿನಗಳ ಕಾಲ ನಡೆಯುತ್ತಿರುವ ಜಪ, ಯಾಗ, ಹವನ, ಯಜ್ಞ ಮತ್ತಿತರೆ ಪ್ರವಚನ, ಧಾರ್ಮಿಕ ಹಾಗೂ ಪೂಜಾ ಕಾರ್ಯಕ್ರಮಗಳು ಸರಳವಾಗಿ ನಿರಂತರವಾಗಿ ಜರುಗುವವು ಎಂದು ಶ್ರೀಗಳು ವಿವರಿಸಿದ್ದಾರೆ.

# ಖಾಲಿ ನಿವೇಶನಗಳಲ್ಲಿ ಕಿರು ಅರಣ್ಯ ಸಾಧ್ಯತೆ

**(5ನೇ ಪುಟದಿಂದ)** ಹೇಳಿಕೆಗಷ್ಟೇ ಸೀಮಿತವಾಗಿವೆ.

ಇಂತಹ ಖಾಲಿ ನಿವೇಶನಗಳನ್ನು ಹಸಿರುಗೊಳಿಸುವ ಚಿಂತನೆಯೇ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳ 'ಮಿಯವಾಕಿ ಕಿರು ಅರಣ್ಯ'

ಜಪಾನ್ ದೇಶದ ಮಿಯವಾಕಿ ಎಂಬ ಪರಿಸರ ತಜ್ಞ ನಗರ ಪ್ರದೇಶಗಳಲ್ಲಿ ಕಡಿಮೆ ಜಾಗದಲ್ಲಿ ಕಿರು ಅರಣ್ಯ ಬೆಳೆಸುತ್ತಿದ್ದರು. ಅತ್ಯಲ್ಪ ಸ್ಥಳದಲ್ಲಿ ನಿರೀಕ್ಷೆಗೂ ಮೀರಿ ಗಿಡಗಳನ್ನು ಬೆಳೆಸಲಾಗಿತ್ತು. ಈ ಮಾದರಿ ಯಶಸ್ಸು ಕಂಡ ಹಿನ್ನೆಲೆಯಲ್ಲಿ ಇತರೆ ನಗರಗಳಿಗೂ ವ್ಯಾಪಿಸಿದೆ. ಇಂತಹ ಕಿರು ಅರಣ್ಯ ನಿರ್ಮಾಣವನ್ನು 'ಮಿಯವಾಕಿ ವಿಧಾನ' ಎಂದೇ ಕರೆಯಲಾಗುತ್ತಿದೆ.

ಇಂತಹ ಮಿಯವಾಕಿ ವಿಧಾನವನ್ನು ದಾವಣಗೆರೆ ನಗರದಲ್ಲೂ ಅನುಸರಿಸಿದರೆ ಕಾಂಕ್ರೀಟ್ ಕಾಡಿನ ನಡುವೆಯೂ ಅಲ್ಲಲ್ಲಿ ಹಸಿರು ಕಾಣಬಹುದು ಎನ್ನುತ್ತಾರೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರೂ, ಹಿರಿಯ ವಿಜ್ಞಾನಿಗಳೂ ಆದ ಡಾ.ಟಿ.ಎನ್. ದೇವರಾಜ್.

'ಅರಣ್ಯ' ಎಂದೊಡನೆ ಹತ್ತಾರು ವರ್ಷಗಳ ಬೃಹತ್ ಮರಗಳು ಮನದಲ್ಲಿ ಮೂಡುತ್ತವೆ. ಆದರೆ ಈ 'ಕಿರು ಅರಣ್ಯ'ದಲ್ಲಿ ಕೇವಲ ಒಂದೆರಡು ವರ್ಷಗಳಲ್ಲೇ ಹೆಚ್ಚು ಎತ್ತರಕ್ಕೆ ಬೆಳೆಯುವ ಕಡಿಮೆ ನೀರು ಬೇಡುವ ಸಸಿಗಳನ್ನು ಬೆಳೆಸಬಹುದು. ಸದ್ಯ ಕೃಷಿ ವಿಜ್ಞಾನ ಕೇಂದ್ರದಲ್ಲಿನ ಕಿರು ಅರಣ್ಯದಲ್ಲಿರುವುದು ಇಂತಹದ್ದೇ ಸಸಿಗಳು.

ಒಂದೊಂದು ಬಡಾವಣೆಯಲ್ಲೂ 30x40, 40x50 ಹೀಗೆ ವಿವಿಧ ಅಳತೆಯ ಸಾಕಷ್ಟು ಖಾಲಿ ನಿವೇಶನಗಳಿವೆ.

ಮನೆ ಕಟ್ಟಲು ಇನ್ನೂ ಮೂರ್ನಾಲ್ಕು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಸಮಯ ಬೇಕು ಎನ್ನುವವರು ಖಾಲಿ ಜಾಗದಲ್ಲಿ ಸಸಿಗಳನ್ನು ಬೆಳೆಸಬಹುದು. ಮನೆ ಕಟ್ಟುವ ಪ್ರಸಂಗ ಬಂದರೆ ಮರಗಳನ್ನು ಕಡಿಯಬಹುದು ಎನ್ನುತ್ತಾರೆ ದೇವರಾಜ್.

ಅರಣ್ಯ ಇಲಾಖೆಯಿಂದ ಉಚಿತವಾಗಿ ಸಸಿಗಳು ದೊರೆಯುತ್ತವೆ. ಮಳೆಗಾಲದ ಆರಂಭದಲ್ಲಿ ಸಸಿಗಳನ್ನು ನೆಟ್ಟರೆ ಅನುಕೂಲ. ಬೇಸಿಗೆಯಲ್ಲೂ ಸಸಿ ಬೆಳೆಸಬಹುದು. ಆದರೆ ಆರಂಭದಲ್ಲಿ ಒಂದಿಷ್ಟು ನೀರುಣಿಸಬೇಕಾಗುತ್ತದೆ. ಪ್ರಕೃತಿಗೆ ಒಂದಿಷ್ಟು ಕೊಡುಗೆ ಕೊಡಬೇಕೆನ್ನುವ ಮನೋಭಾವ ಇದ್ದರೆ ಸಸಿಗಳಿಗೆ ನೀರು ಕೊಡುವುದು ದೊಡ್ಡ ವಿಷಯವಲ್ಲ.

ಈ ರೀತಿ ನಿವೇಶನಗಳಲ್ಲಿ ಕಿರು ಅರಣ್ಯ ಬೆಳೆಸುವುದರಿಂದ ಕಸದ ರಾಶಿ ಬೆಳೆಯುವುದು ತಪ್ಪುತ್ತದೆ. ಪಕ್ಷಿಗಳು ಮರಗಳನ್ನು ಆಶ್ರಯಿಸುವುದರಿಂದ ಚಿಲಿ-ಪಿಲಿ ಸದ್ದು ಕೇಳಬಹುದು. ಅಲ್ಲದೆ ಮಕ್ಕಳಿಗೂ ಅರಣ್ಯ ಬೆಳೆಸುವ, ಪ್ರಕೃತಿಯನ್ನು ಪ್ರೀತಿಸುವ ಪಾಠ ಹೇಳಿಕೊಡಬಹುದು ಎನ್ನುವುದು ದೇವರಾಜ್ ಅವರ ಮಾತು.

ಇನ್ನೇಕೆ ತಡ? ಖಾಲಿ ನಿವೇಶನವಿದ್ದರೆ ಕೂಡಲೇ ಮಿಯವಾಕಿ ಮಾದರಿ ಅರಣ್ಯ ಬೆಳೆಸಲು ಮುಂದಾಗಿ. ನಿಮ್ಮ ಮನೆ ಕಟ್ಟುವ ಕನಸು ನನಸಾಗುವವರೆಗೂ ನಿಮ್ಮ ನಿವೇಶನ ಕಿರು ಅರಣ್ಯವಾಗಿರಲಿ.

# ಧಾರ್ಮಿಕ ವಿನ್ಯಾಸ, ರಾಷ್ಟ್ರ ಸಂಕೇತಗಳ ನೂತನ ಸಂಸತ್ತು

ನವದಹಲಿ, ಡಿ. 10 – ನೂತನವಾಗಿ ನಿರ್ಮಿಸಲು ಉದ್ದೇಶಿಸಿರುವ ಸಂಸತ್ ಭವನ ತ್ರಿಕೋನ ಸ್ವರೂಪದ್ದಾಗಿದ್ದು, ಇದು ವಿವಿಧ ಧರ್ಮಗಳ ಪವಿತ್ರ ಜ್ಯಾಮಿತಿ ಸೂತ್ರವನ್ನು ಬಿಂಬಿಸಲಿದೆ. ಇದರ ಒಳಾಂಗಣ ಮೂರು ರಾಷ್ಟ್ರೀಯ ಸಂಕೇತಗಳಾದ ಕಮಲ, ನವಿಲು ಹಾಗೂ ಆಲದ ಮರಗಳನ್ನು ಪ್ರತಿನಿಧಿಸಲಿದೆ.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗುರುವಾರ ನೂತನ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿದ್ದು, 971 ಕೋಟಿ ರೂ. ವೆಚ್ಚದ ನೂತನ ಕಟ್ಟಡ ದೇಶದ 75ನೇ ಸ್ವಾತಂತ್ರ್ಯ ದಿನಾಚರಣೆಯ ವೇಳೆಗೆ ಸಿದ್ಧವಾಗುವ ನಿರೀಕ್ಷೆ ಇದೆ.

ನೂರು ವರ್ಷಗಳ ಹಿಂದೆ ದೇಶದ ಹಾಲಿ ಸಂಸತ್ ಕಟ್ಟಡವನ್ನು 83 ಲಕ್ಷ ರೂಗಳ ವೆಚ್ಚದಲ್ಲಿ ನಿರ್ಮಿಸಾಗಿತ್ತು. ಅದನ್ನು ಈಗ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲಾಗುವುದು.

ನೂತನ ಸಂಸತ್ ಕಟ್ಟಡವು ತ್ರಿಕೋನ ಸ್ವರೂಪದ್ದಾಗಿರಲಿದೆ. ಲೋಕಸಭೆ, ರಾಜ್ಯಸಭೆ ಹಾಗೂ ಸೆಂಟ್ರಲ್ ಲಾಂಜ್‌ಗೆ ಇದು ಅವಕಾಶ ಕಲ್ಪಿಸಲಿದೆ.

ಅಲ್ಲದೇ ತ್ರಿಕೋನವು ದೇಶದ ಹಲವಾರು ಧರ್ಮ ಹಾಗೂ ಸಂಸ್ಕೃತಿಗಳಲ್ಲಿ ಪವಿತ್ರ ಸಂಕೇತವಾಗಿದೆ ಎಂದು ನೂತನ ಸಂಸತ್ ಭವನದ ಶಿಲ್ಪಿ ಬಿಮಲ್ ಪಟೇಲ್ ತಿಳಿಸಿದ್ದಾರೆ.

ಲೋಕಸಭಾ ಛೇಂಬರ್‌ನಲ್ಲಿ ನಾವು ರಾಷ್ಟ್ರಪಕ್ಷಿಯಾದ ನವಿಲಿನ ವಿನ್ಯಾಸ ಬಳಸಿದ್ದೇವೆ. ರಾಜ್ಯಸಭಾ ಛೇಂಬರ್‌ಗೆ ಕಮಲ ಹಾಗೂ ಸೆಂಟ್ರಲ್ ಲಾಂಜ್‌ಗೆ ಆಲದ ಮರದ ವಿನ್ಯಾಸ ಬಳಸಿದ್ದೇವೆ ಎಂದು ಪಟೇಲ್ ಹೇಳಿದ್ದಾರೆ.

ಹಳೆಯ ಹಾಗೂ ಹೊಸ ಕಟ್ಟಡಗಳು ಸಮನ್ವಯಗೊಳ್ಳುವ ರೀತಿ ವಿನ್ಯಾಸ ರೂಪಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ. ಹಳೆಯ ಕಟ್ಟಡವನ್ನು ಕೆಲವು ಸಮಾರಂಭಗಳಿಗೆ ಪ್ರಸ್ತಾಪಿತ ಸಂಸತ್ ಭವನದ ವಿಸ್ತೃತ ಭಾಗವಾಗಿ ಬಳಸಲು ಉದ್ದೇಶಿಸಲಾಗಿದೆ.

ನಾಲ್ಕು ಅಂತಸ್ತಿನ ನೂತನ ಕಟ್ಟಡವನ್ನು 64,500 ಚದುರ ಮೀಟರ್ ಪ್ರದೇಶದಲ್ಲಿ ನಿರ್ಮಿಸಲಾಗುವುದು.

# ಕಮ್ಯೂನಿಸ್ಟ್ ಪಕ್ಷದ ಸಿದ್ಧಾಂತ ಒಪ್ಪುವವರಿಗೆ ಪಂಚಾಯ್ತಿ ಚುನಾವಣೆಯಲ್ಲಿ ಬೆಂಬಲ

ದಾವಣಗೆರೆ, ಡಿ.10- ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಸ್ಪರ್ಧೆ ಮಾಡಲಿದ್ದು, ಬಿಜೆಪಿ ಹೊರತುಪಡಿಸಿ ಪಕ್ಷದ ಸಿದ್ಧಾಂತ ಒಪ್ಪಿಕೊಳ್ಳುವವರನ್ನು ಬೆಂಬಲಿಸುವಂತೆ ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್ ಕಾರ್ಯಕರ್ತರಿಗೆ ಕರೆ ನೀಡಿದರು.




ನಗರದ ಕಮ್ಯುನಿಸ್ಟ್ ಪಕ್ಷದ ಕಚೇರಿಯಲ್ಲಿ ಗುರುವಾರ ಗ್ರಾಮ ಪಂಚಾಯ್ತಿ ಚುನಾವಣಾ ತಯಾರಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕರು ಹಾಗೂ ಆಡಳಿತ ಶಾಹಿ ವರ್ಗವು ಗ್ರಾಮ ಪಂಚಾಯ್ತಿ ಹಾಗೂ ಗ್ರಾಮ ಸಭೆಗಳಿಗಿದ್ದ ಸಂವಿಧಾನ ಬದ್ಧ ಹಕ್ಕುಗಳನ್ನು ಮೊಟಕುಗೊಳಿಸಲು ಹೊರಟಿವೆ. ನಾವು ಗ್ರಾಮ ಪಂಚಾಯ್ತಿಗೆ ಇರುವ ಅಧಿಕಾರವನ್ನು ಜನತೆಗೆ ತಿಳಿಸುವ ಅಗತ್ಯವಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ರೈತ ವಿರೋಧಿ, ಕಾರ್ಮಿಕ ವಿರೋಧಿ ಕಾಯ್ದೆಗಳ ವಿರುದ್ಧ ಹಿಂದೆಂದೂ ಕಾಣದ ಸುದೀರ್ಘ ಹಾಗೂ ವ್ಯವಸ್ಥಿತ ಹೋರಾಟ ನಡೆಯುತ್ತಿರುವಾಗಲೇ ಗ್ರಾಮ ಪಂಚಾಯ್ತಿ ಚುನಾವಣೆ ನಡೆಯುತ್ತಿದೆ. ಈ ವೇಳೆ ಜನತೆಗೆ ಕೇಂದ್ರ ಸರ್ಕಾರದ ಜನ ವಿರೋಧಿ ಧೋರಣೆಗಳನ್ನು ತಿಳಿಸಬೇಕು ಎಂದರು.

**ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್**

ಅಧಿಕಾರ ವಿಕೇಂದ್ರೀಕರಣವಾಗುವ ಬದಲು ಪಂಚಾಯ್ತಿಗಳಲ್ಲಿ ಭ್ರಷ್ಟಾಚಾರ ವಿಕೇಂದ್ರೀಕರಣವಾಗುತ್ತಿದೆ. ಗ್ರಾಮ ಪಂಚಾಯ್ತಿ ಅಧ್ಯಕ್ಷರೂ, ಸದಸ್ಯರಿಗೂ ಪರ್ಸೆಂಟೇಜ್ ಆಮಿಷ ತೋರಿಸಿ ಭ್ರಷ್ಟಾಚಾರದಲ್ಲಿ ಭಾಗಿಯಾಗುವಂತೆ ಶಾಸಕರು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಸಿಪಿಐ ಜಿಲ್ಲಾ ಮಂಡಳಿ ಪ್ರಧಾನ ಕಾರ್ಯದರ್ಶಿ ಹೆಚ್.ಕೆ. ರಾಮಚಂದ್ರಪ್ಪ ಮಾತನಾಡುತ್ತಾ, ಜನರಿಗಾಗಿ ನಾವು ಕೆಲಸ ಮಾಡಬೇಕೇ ಹೊರತು, ನಮಗಾಗಿ ಅಲ್ಲ. ಈ ಬಾರಿಯ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ನಮ್ಮ ಪಕ್ಷ ಬೆಂಬಲಿತ ಹತ್ತು ಸ್ಪರ್ಧಿಗಳಲ್ಲಿ ಒಬ್ಬರು ಗೆದ್ದರೂ ಸಾಕು ಎಂದು ಹೇಳಿದರು.

ಸಿಪಿಐ ಜಿಲ್ಲಾ ಮಂಡಳಿ ಖಜಾಂಚಿ ಆನಂದ್ ರಾಜ್, ಸಹ ಕಾರ್ಯದರ್ಶಿ ಆವರಗೆರೆ ಚಂದ್ರು, ಹೆಚ್.ಜಿ. ಉಮೇಶ್, ಎಂ.ಬಿ. ಶಾರದಮ್ಮ, ಆವರಗೆರೆ ವಾಸು, ಮಹಮದ್ ಭಾಷಾ, ಟಿ.ಎಸ್. ನಾಗರಾಜ್, ಮಹಮದ್ ರಫಿ, ಟಿ.ಹೆಚ್. ನಾಗರಾಜ್ ಹಾಗೂ ಇತರರು ಉಪಸ್ಥಿತರಿದ್ದರು

# ಮಲೇಬೆನ್ನೂರು : ಗೋಮಾತೆಗೆ ಪೂಜೆ



ಮಲೇಬೆನ್ನೂರು, ಡಿ.10 - ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಾದ ಹಿನ್ನೆಲೆಯಲ್ಲಿ ಗುರುವಾರ ಮಲೇಬೆನ್ನೂರಿನಲ್ಲಿ ಬಿಜೆಪಿ ವತಿಯಿಂದ ಗೋ ಮಾತೆಗೆ ವಿಶೇಷ ಪೂಜೆ ಸಲ್ಲಿಸಿ ಸಂಭ್ರಮಿಸಲಾಯಿತು.

ಜಿ.ಪಂ. ಸದಸ್ಯ ಬಿ.ಎಂ.ವಾಗೀಶ್‌ಸ್ವಾಮಿ ಅವರು ಗೋ ಮಾತೆಗೆ ಪೂಜೆ ಸಲ್ಲಿಸಿದ ನಂತರ ಮಾತನಾಡಿ ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿರುವುದನ್ನು ಸ್ವಾಗತ ಮಾಡುತ್ತೇವೆ. ಗೋ ಮಾತೆಯ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಆಗಿದ್ದು ಈ ನಿಟ್ಟಿನಲ್ಲಿ ಸರ್ಕಾರದ ಜೊತೆ ಕೈ ಜೋಡಿಸೋಣ ಎಂದು ವಾಗೀಶ್‌ಸ್ವಾಮಿ ಮನವಿ ಮಾಡಿದರು. ಪುರಸಭೆ ಸದಸ್ಯ ಬಿ.ಎಂ.ಚನ್ನೇಶ್‌ಸ್ವಾಮಿ, ಬಿಜೆಪಿ ತಾ.ಗ್ರಾ ಘಟಕದ ಪ್ರಧಾನ ಕಾರ್ಯದರ್ಶಿ ಆದಾಪುರದ ವೀರೇಶ್, ಬಿಜೆಪಿ ಮುಖಂಡರಾದ ಗೌಡ್ರ ಮಂಜುನಾಥ್, ಪಾನಿಪೂರಿ ರಂಗನಾಥ್, ಪಿ.ಕೆ. ಗಂಗಾಧರ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಬಿ. ಮಂಜ, ಸಿರಿಗೆರೆ ಶೇಖರಪ್ಪ, ಬನ್ನಿಕೋಡು ಹನುಮಂತಪ್ಪ, ನಾಗರಾಜಪ್ಪ, ಚಂದ್ರಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

# ಬಿಜೆಪಿ ಎಸ್ಸಿ ಮೋರ್ಚಾದಿಂದ ಸಂವಿಧಾನ ದಿನಾಚರಣೆ

ದಾವಣಗೆರೆ, ಡಿ.10- ಬಿಜೆಪಿ ಎಸ್ಸಿ ಮೋರ್ಚಾದ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಎಂ. ರವಿನಾಯ್ಕ್ ಅಧ್ಯಕ್ಷತೆಯಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಉತ್ತರ ವಿಧಾನಸಭಾ ಮಂಡಲ ಅಧ್ಯಕ್ಷ ಸಂಗನಗೌಡ್ರು, ಪ್ರಧಾನ ಕಾರ್ಯದರ್ಶಿ ಬಸವರಾಜಯ್ಯ, ಜಿಲ್ಲಾ ಖಜಾಂಚಿ ಡಿ.ಆರ್. ವೀರೇಶ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಹನುಮಂತನಾಯ್ಕ, ಪ್ರಧಾನ ಕಾರ್ಯದರ್ಶಿ ಗಂಗಾಧರ್, ಉತ್ತರ ಎಸ್ಸಿ ಮೋರ್ಚಾ ಉಸ್ತುವಾರಿ ಎಂ. ದುರುಗೇಶ್, ಪಾಲಿಕೆ ಸದಸ್ಯ ಪ್ರಸನ್ನಕುಮಾರ್, ಜಯಮ್ಮಗೋಪಿನಾಯ್ಕ, ಆಶ್ರಯ ಸಮಿತಿ ಸದಸ್ಯ ರಾಜು ಎಂ. ಶಾಮನೂರು, ಚಿಗಟೇರಿ ಜಿಲ್ಲಾಸ್ಪತ್ರೆ ನಾಮ ನಿರ್ದೇಶಿತ ಸದಸ್ಯ ಜಯಣ್ಣ, ವಕೀಲ ಗುಮ್ಮನೂರು ಮಲ್ಲಿಕಾರ್ಜುನ್ ಆಗಮಿಸಿದ್ದರು.

ಉತ್ತರ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಎಂ. ಚಂದ್ರಪ್ಪ, ಮಂಜು, ಕಾರ್ಯದರ್ಶಿ ವಿಠ್ಠಲ್, ಮುರುಗೇಂದ್ರ ನಾಯಕ್, ಖಜಾಂಚಿ ಶಶಿಕುಮಾರ್ ನಾಯ್ಕ, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಜಿಲ್ಲೆಗೆ ಬಂದವು 21 ನಿರ್ಭಯ ಗಸ್ತು ಬೈಕ್‌ಗಳು

ದಾವಣಗೆರೆ, ಡಿ.10- ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ದಿನದ 24 ಗಂಟೆಗಳ ಕಾಲ ತುರ್ತು ಸೇವೆ ನೀಡಲು ಜಿಲ್ಲೆಗೆ ಆಗಮಿಸಿರುವ 21 ನಿರ್ಭಯ ಗಸ್ತು ಬೈಕ್‌ಗಳು ಇಂದಿನಿಂದ ಕಾರ್ಯಾಚರಣೆಗಿಳಿದವು.



ಈ ಬೈಕ್‌ಗಳಿಗೆ ಸಂಜೆ ತಮ್ಮ ಕಚೇರಿ ಆವರಣದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ನಿರ್ಭಯ ಯೋಜನೆಯಡಿ ಜಿಲ್ಲೆಗೆ 21 ಹೊಸ ಬೈಕ್ ಗಳನ್ನು ನೀಡಲಾಗಿದ್ದು, ಅವುಗಳನ್ನು ಜಿಲ್ಲೆಯ 21 ಪೊಲೀಸ್ ಠಾಣೆಗಳಿಗೂ ತಲಾ ಒಂದು ವಿತರಿಸಲಾಗಿದೆ ಎಂದು ಹೇಳಿದರು.

21 ಪೊಲೀಸ್ ಠಾಣೆಗಳಲ್ಲೂ ಸಿಬ್ಬಂದಿಗಳಿಗೆ ವಿಶೇಷ ತರಬೇತಿ ನೀಡಿ ನಿರ್ಭಯ ಪಡೆ ರಚಿಸಲಾಗಿದ್ದು, ಅವರು ಈ ಬೈಕ್‌ಗಳ ಮೂಲಕ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ನಿರ್ಭಯ ಗಸ್ತು ನಡೆಸಲಿದ್ದಾರೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆದ ದೌರ್ಜನ್ಯದ ಘಟನಾ ಸ್ಥಳಕ್ಕೆ ಹೋಗಲು, ತನಿಖೆ ನಡೆಸಲು ಈ ಬೈಕ್‌ಗಳನ್ನು ಬಳಸುವಂತೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಈಗಾಗಲೇ ಸ್ಮಾರ್ಟ್‌ಸಿಟಿ ಯೋಜನೆಯಡಿ ಜಿಲ್ಲೆಗೆ ಬಂದಿರುವ ಮೂರು ವಿಶೇಷ ಕಮಾಂಡೋ ವಾಹನಗಳಿಗೆ ವಿವಿಧ ಉಪಕರಣಗಳನ್ನು ಅಳವಡಿಸಲಾಗಿದೆ. ಇವುಗಳನ್ನು ಉತ್ತರ ಮತ್ತು ದಕ್ಷಿಣ ವಲಯಗಳಿಗೆ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು ಪಡೆಗೆ ಒಂದೊಂದು ವಾಹನ ಹಂಚಿಕೆ ಮಾಡಲಾಗಿದೆ. ಜಿಲ್ಲೆಯಲ್ಲಿರುವ 13 ಗಸ್ತು ವಾಹನಗಳೊಂದಿಗೆ ಮೂರು ವಿಶೇಷ ಕಮಾಂಡೋ ವಾಹನಗಳು, 21 ನಿರ್ಭಯ ಗಸ್ತು ಬೈಕ್‌ಗಳು ಹಾಗೂ ಚಿತಾ ಬೈಕ್‌ಗಳು ಗಸ್ತು ನಡೆಸಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದಾಗಿ ವಿವರಿಸಿದರು.

ಈ ಸಂದರ್ಭದಲ್ಲಿ ಡಿವೈಎಸ್‌ಪಿ ಪ್ರಕಾಶ್, ಆರ್‌ಪಿಐ ಕಿರಣಕುಮಾರ್ ಸೇರಿದಂತೆ ಇತರರು ಇದ್ದರು.

# ಗೋಹತ್ಯೆ ಮಸೂದೆ ರದ್ದು ಸಿದ್ದರಾಮಯ್ಯ ಹತಾಶೆ : ಸಚಿವ ಭೈರತಿ

ದಾವಣಗೆರೆ, ಡಿ. 10 – ಅಧಿಕಾರಕ್ಕೆ ಬಂದರೆ ಗೋಹತ್ಯೆ ತಡೆ ಮಸೂದೆ ರದ್ದುಗೊಳಿಸುತ್ತೇವೆ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿರುವುದು ಹತಾಶೆ ಎಂದು ಬಣ್ಣಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಅವರ ಸರ್ಕಾರ ಅಧಿಕಾರಕ್ಕೆ ಬಂದರೆ ತಾನೇ ರದ್ದುಗೊಳಿಸುವುದು ಎಂದು ಪ್ರಶ್ನಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಇಂದು ಸಂಜೆ ನಗರಕ್ಕಾಗಮಿಸಿದ್ದ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅಧಿಕಾರಕ್ಕೆ ಬಂದಾಗ ಆ ಮಾತು ಹೇಳಲಿ. ಇನ್ನೂ ಎರಡೂವರೆ ವರ್ಷ ಕಾಲ ಬಿಜೆಪಿ ಸರ್ಕಾರಕ್ಕೆ ಅಧಿಕಾರವಿದೆ. ಸುಭದ್ರವಾದ ಸರ್ಕಾರ ನಡೆಸುತ್ತೇವೆ ಎಂದು ತಿಳಿಸಿದ್ದಾರೆ.

ಬಿಜೆಪಿ ಸರ್ಕಾರ ಯಶಸ್ವಿಯಾಗಿ ಗೋಹತ್ಯೆ ನಿಯಂತ್ರಣ ಮಸೂದೆ ಜಾರಿಗೊಳಿಸಿದೆ. ಗೋವು ದೇವರ ಸಮಾನ, ಜನರು ಇದನ್ನು ಸ್ವಾಗತ ಮಾಡಿದ್ದಾರೆ ಎಂದು ಸಮರ್ಥಿಸಿಕೊಂಡಿರುವ ಬಸವರಾಜ, ಗೋಹತ್ಯೆ ತಡೆ ಮಸೂದೆ ವಿರೋಧಿಸಿ ಕಾಂಗ್ರೆಸ್ ಸಭಾತ್ಯಾಗ ಮಾಡಿರುವುದು ಅವರ ನಿಲುವನ್ನು ತೋರಿಸುತ್ತದೆ. ಜೆಡಿಎಸ್‌ನ ಕೆಲ ಶಾಸಕರ ಮಿತ್ರರು ಗೋಹತ್ಯೆ ತಡೆ ಮಸೂದೆಗೆ ಬೆಂಬಲಿಸಿದ್ದಾರೆ. ಅದನ್ನು ಸ್ವಾಗತಿಸುತ್ತೇವೆ. ಬೆಂಬಲಿಸಿದ ಶಾಸಕರಿಗೆ ಧನ್ಯವಾದ ಸಲ್ಲಿಸುತ್ತೇವೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷದ ಜತೆ ಹೋಗಿ ಜೆಡಿಎಸ್‌ನವರು ಕೈಸುಟ್ಟುಕೊಂಡಿದ್ದಾರೆ. ಅವರಿಗೂ ಕಾಂಗ್ರೆಸ್ ಸ್ನೇಹದ ಏನು ಎಂಬುದು ಅರಿವಾಗಿದೆ. ಮುಂದಿನ ದಿನಗಳಲ್ಲಿ ಏನಾಗುತ್ತದೆ ಕಾದು ನೋಡೋಣ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

# ಲೋಕಿಕೆರೆ ನಾಗರಾಜ್ ಅಭಿಮಾನಿ ಬಳಗದಿಂದ ಕನ್ನಡ ಹಬ್ಬ ಕಾರ್ಯಕ್ರಮ

ದಾವಣಗೆರೆ, ಡಿ.10- ಇಲ್ಲಿನ ವಿದ್ಯಾನಗರದಲ್ಲಿ ಲೋಕಿಕೆರೆ ನಾಗರಾಜ್ ಅಭಿಮಾನಿ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವದ ಕನ್ನಡ ಹಬ್ಬ ಕಾರ್ಯಕ್ರಮವು ಇಂದು ಸಂಜೆ ನಡೆಯಿತು.



ಕಾರ್ಯಕ್ರಮದ ಉದ್ಘಾಟನೆಯನ್ನು ಹೆಸರಾಂತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಮತ್ತು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್ ಮತ್ತು ಗಣ್ಯರು ನೆರವೇರಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕರಿಗೆ ನಟರಾಜ್ ಎಂಟರ್ಟೈನ್ಮೆಂಟ್ ಸಂಸ್ಥೆಯು ಸಂಗೀತದ ರಸದೌತಣ ಉಣಬಡಿಸಿತು. ರಾಜೇಶ್ ಕೃಷ್ಣನ್ ಅತ್ಯದ್ಭುತವಾಗಿ ಗೀತೆಗಳನ್ನು ಹಾಡುವುದರ ಮೂಲಕ ಎಲ್ಲರ ಮನಸೂರೆ ಗೊಳಿಸಿದರು. ಇನ್ನೂ ಸರಿಗಮಪ ಜೂರಿ ಮೆಂಬರ್ಸ್‌ಗಳಾದ ಸಚಿನ್, ಹರ್ಷ ರಂಜಿನಿ, ಪುಷ್ಪ, ಸಂಗೀತ ತಸದೌತಣ ಉಣಬಡಿಸಿದರು. ಗಾಯಕರಾದ ಮೋಹನ್ ಮತ್ತು ರವಿರಾಜ್ ರಾಜೇಶ್ ಕೃಷ್ಣನ್ ಅವರಿಗೆ ಸಾಥ್ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬಿಜೆಪಿ ಜಿಲ್ಲಾ ರೈತ ಮೋರ್ಚ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಕೇವಲ ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡ ರಾಜ್ಯೋತ್ಸವ ಆಚರಣೆ ಅಲ್ಲ. ವರ್ಷದ 365 ದಿನಗಳಲ್ಲೂ ಕನ್ನಡ ಹಬ್ಬವನ್ನು ಆಚರಣೆ ಮಾಡಬೇಕು ಎಂದರು. ನಾನು ಕೊರೊನಾದಂತಹ ಸಂದರ್ಭದಲ್ಲಿ ಜನರಿಗೆ ಆಹಾರ ಕಿಟ್ ಮತ್ತು ಇನ್ನಿತರ ಸೇವೆಗಳನ್ನು ಮಾಡಿದ್ದೇನೆ. ಆದರೆ, ಕೆಲ ಜನರು ರಾಜಕೀಯಕ್ಕೋಸ್ಕರ ಈ ಸೇವೆ ಮಾಡುತ್ತಿದ್ದಾನೆ ಎಂದರು. ಆದರೆ, ನಾನು ಯಾವತ್ತೂ ರಾಜಕೀಯಕ್ಕೋಸ್ಕರ ಸೇವೆ ಮಾಡಿಲ್ಲ, ಜನರ ಸೇವೆಯೇ ದೇವರ ಸೇವೆ ಮಾಡಿದ್ದೇನೆ ಎಂದು ಹೇಳಿದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಕಾಡಜ್ಜಿ ಮಂಜುನಾಥ್ ಹಾಗೂ ಸಮಾಜ ಸೇವಕ ದಿಳ್ಳೆಪ್ಪ ಅವರುಗಳನ್ನು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ದೂಡ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯರಾದ ಗೀತಾ ದಿಳ್ಳೆಪ್ಪ, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ.ವೀರೇಶ್, ವೀಣಾ ನಂಜಪ್ಪ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಹಾಗೂ ಗಣ್ಯರು ಉಪಸ್ಥಿತರಿದ್ದರು.

# ಆಯುರ್ವೇದ ವೈದ್ಯರಿಗೆ ಶಸ್ತ್ರಚಿಕಿತ್ಸೆಗೆ ಅನುಮತಿ : ಸ್ವಾಗತ

ದಾವಣಗೆರೆ, ಡಿ.10 - ಇತ್ತೀಚೆಗೆ ಕೇಂದ್ರ ಸರ್ಕಾರ ಆಯುರ್ವೇದ ವೈದ್ಯಕೀಯದಲ್ಲಿ ಶಲ್ಯ ತಂತ್ರ ಮತ್ತು ಶಾಲಾಕ್ಯ ತಂತ್ರ ವಿಷಯದಲ್ಲಿ ಸ್ನಾತಕೋತ್ತರ ಪಡೆದ ವೈದ್ಯರಿಗೆ ಶಸ್ತ್ರಚಿಕಿತ್ಸೆ ಮಾಡಲು ಅನುಮತಿ ನೀಡಿರುವುದನ್ನು ಭಾರತೀಯ ವೈದ್ಯ ಪದ್ಧತಿಗಳ ಸಂಘಟನೆಯಾಗಿರುವ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ ಸ್ವಾಗತಿಸಿದೆ.

ಕೇಂದ್ರದ ನಿರ್ಧಾರವನ್ನು ವಿರೋಧಿಸಿ ಭಾರತೀಯ ವೈದ್ಯಕೀಯ ಸಂಘವು (ಐಎಂಎ) ನಾಳೆ ದಿನಾಂಕ 11 ರ ಶುಕ್ರವಾರ ರಾಷ್ಟ್ರ ವ್ಯಾಪಿ ಕರೆ ನೀಡಿರುವ ಬಂದನ್ನು ಅಸೋಸಿಯೇಷನ್ ಖಂಡಿಸಿದ್ದು, ಅಂದು ಆಯುರ್ವೇದ ವೈದ್ಯರು ಗುಲಾಬಿ ಬಣ್ಣದ ರಿಬ್ಬನ್ ಬಲಗೈಗೆ ಕಟ್ಟಿಕೊಂಡು ಕ್ಲಿನಿಕ್, ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿನ ರೋಗಿಗಳಿಗೆ ಉಚಿತ ಆರೋಗ್ಯ ಸೇವೆ ನೀಡುತ್ತಾರೆಂದು ಅಸೋಸಿಯೇಷನ್ ಜಿಲ್ಲಾಧ್ಯಕ್ಷ ಡಾ. ಎಸ್. ಉಮೇಶ್ ಹಿರೇಮಠ್ ತಿಳಿಸಿದ್ದಾರೆ.


# ಅಲೋಪಥಿ ವೈದ್ಯರು ಇಂದು ಓಪಿಡಿ ಸೇವೆಯಿಂದ ಹೊರಗೆ

ದಾವಣಗೆರೆ, ಡಿ.10 - ಕೇಂದ್ರ ಸರ್ಕಾರ ಆಯುರ್ವೇದ ವೈದ್ಯರಿಗೆ ಕೆಲವು ಶಸ್ತ್ರ ಚಿಕಿತ್ಸೆ ನಡೆಸಲು ಅವಕಾಶ ನೀಡಿರುವುದನ್ನು ವಿರೋಧಿಸಿ ಅಲೋಪಥಿ ವೈದ್ಯರು ಇಂದು ಹೊರ ರೋಗಿಗಳ ವಿಭಾಗದ ಸೇವೆ (ಓಪಿಡಿ)ಯಿಂದ ಹೊರಗುಳಿಯಲಿದ್ದಾರೆ.

ಇಂದು ಬೆಳಿಗ್ಗೆ 6ರಿಂದ ಸಂಜೆ 6 ಗಂಟೆಯ ವರೆಗೆ ಸೇವೆಯಿಂದ ದೂರ ಉಳಿಯಲಿದ್ದು, ಹೆರಿಗೆ, ತುರ್ತು ಚಿಕಿತ್ಸೆ, ಕೋವಿಡ್-19 ಸೇವೆಗಳಲ್ಲಿನ ವೈದ್ಯರು ಎಂದಿನಂತೆ ಕಾರ್ಯನಿರ್ವಹಿಸಲಿದ್ದಾರೆ ಎಂದು ದಾವಣಗೆರೆಯ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ|| ಎ.ಕೆ. ರುದ್ರಮುನಿ ತಿಳಿಸಿದ್ದಾರೆ.

# ನಗರದಲ್ಲಿಂದು ಪ್ರಗತಿ ಪರಿಶೀಲನಾ ಸಭೆ

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಮಟ್ಟದ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದಾರುಕೇಶ್ ತಿಳಿಸಿದ್ದಾರೆ.




# ಅಮಾನುಲ್ಲಾ ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ದಾವಣಗೆರೆ,ಡಿ.10- ಜಿಲ್ಲಾ ಜೆಡಿಎಸ್ ಮಹಾಪ್ರಧಾನ ಕಾರ್ಯದರ್ಶಿಯಾಗಿ ಜೆ. ಅಮಾನುಲ್ಲಾ ಖಾನ್ ನೇಮಕಗೊಂಡಿದ್ದಾರೆ.

# ನಗರದಲ್ಲಿ ಇಂದು - ನಾಳೆ ದಿಂಡಿ ಉತ್ಸವ

ಮಹಾರಾಜ ಪೇಟೆಯ ವಿಠ್ಠಲ ಮಂದಿರ ದೈವ ಮಂಡಳಿ, ಭಜನಾ ಮಂಡಳಿ ವತಿಯಿಂದ ದಿಂಡಿ ಉತ್ಸವ ಇಂದು ಮತ್ತು ನಾಳೆ ನಡೆಯಲಿದೆ.



ಇಂದು ಬೆಳಿಗ್ಗೆ 5 ಗಂಟೆಗೆ ಕಾಕಡಾರತಿ 8 ರಿಂದ 9 ಮತ್ತು 12ನೇ ಅಧ್ಯಯ ಶ್ರೀ ಸಂತ ಜ್ಞಾನೇಶ್ವರಿ ಪಾರಾಯಣ ನಾಮಜಪ. ಸಂಜೆ 5 ಗಂಟೆಗೆ ನಾಮಜಪ ಮತ್ತು ಪ್ರವಚನ 7 ರಿಂದ ಹರಿಪಾಠ ಭಜನೆಯ ನಂತರ ರಾತ್ರಿ 9 ಗಂಟೆಗೆ ಶ್ರೀ ಗುರುವರ್ಯ ಹ.ಭ.ಪ ಪ್ರಭಾಕರ್ (ದಾದಾ) ಬುವಾ ಬೋಧಲೆ ಮಹಾರಾಜ್ (ಪಂಡರಪುರ) ಇವರಿಂದ ಕೀರ್ತನೆ ರಾತ್ರಿ12 ರಿಂದ ಭಾರುಡ ಮತ್ತು ಪಾಳಿ ಬೈಠಕ್ ಭಜನೆ ರಾತ್ರಿ ಅಖಂಡ ವೀಣಾ ಜಾಗರಣೆ ಜರುಗಲಿದೆ.


ನಾಳೆ ಶನಿವಾರ ಬೆಳಿಗ್ಗೆ 5 ಕಾಕಡಾರತಿ 9 ಗಂಟೆಗೆ ಪಲ್ಲಕ್ಕಿ ಉತ್ಸವ ದೊಂದಿಗೆ ನಗರ ಪ್ರದಕ್ಷಣೆ. 10.30ಕ್ಕೆ ಶ್ರೀ ಸಂತ ಪೂಜಾ ಶ್ರೀ ಸಂತ ಸಮಾರಾಧನೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳ್ಳಲಿದೆ.

# ಬಿಜೆಪಿ ಪ್ರಕೋಷ್ಠದಿಂದ ಗೋ ಪೂಜೆ



ದಾವಣಗೆರೆ, ಡಿ.10- ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿಧಾನಸಭೆಯಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ವಸೂದೆಯನ್ನು ಮಂಡಿಸಿ ಅಂಗೀಕಾರ ಪಡೆದ ಹಿನ್ನೆಲೆಯಲ್ಲಿ ಬಿಜೆಪಿ ಕಾನೂನು ಪ್ರಕೋಷ್ಠದ ವತಿಯಿಂದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಗೋ ಪೂಜೆಯನ್ನು ನಡೆಸಲಾಯಿತು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ವಕೀಲರ ಸಂಘದ ಉಪಾಧ್ಯಕ್ಷ ಹೆಚ್.ದಿವಾಕರ್, ಪ್ರಕೋಷ್ಠದ ಎ.ಸಿ.ರಾಘವೇಂದ್ರ, ಮಂಜುನಾಥ, ಅನಿತಾ, ಯುವ ಮೋರ್ಚಾ ಉಪಾಧ್ಯಕ್ಷ ಕಿರಣ, ಬೀಡಾ ನಾಗರಾಜ್, ತಿರುಮಲ್ಲೇಶ್, ಅಜೀರ್, ಪ್ರಕಾಶ್ ಅಲೂರು, ರಾಕೇಶ್, ಬಂಟಿ, ಎಸ್.ಮಂಜುನಾಥ ಮುಂತಾದವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಸಭಾದ ಯುವ ಘಟಕಕ್ಕೆ ನಿಖಿಲ್



ದಾವಣಗೆರೆ,ಡಿ.10- ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನಿಖಿಲ್ ಕೊಂಡಜ್ಜಿ ನೇಮಕಗೊಂಡಿದ್ದಾರೆ.

# 13ರಂದು ನಗರದಲ್ಲಿ ಆರ್‌ಎಸ್‌ಐ ಮತ್ತು ಪಿಎಸ್‌ಐ ಹುದ್ದೆಗಳಿಗೆ ಲಿಖಿತ ಪರೀಕ್ಷೆ

ದಾವಣಗೆರೆ, ಡಿ.10- ಆರ್‌ಎಸ್‌ಐ (ಸಿಎಆರ್/ ಡಿಎಆರ್) ಮತ್ತು ಪಿಎಸ್‌ಐ (ವೈರ್‌ಲೆಸ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ 3801 ಅಭ್ಯರ್ಥಿಗಳಿಗೆ ಇದೇ ದಿನಾಂಕ 13 ರ ಭಾನುವಾರ ಬೆಳಿಗ್ಗೆ 10 ರಿಂದ 11.30 ಗಂಟೆಯವರೆಗೆ, ಮಧ್ಯಾಹ್ನ 1 ರಿಂದ 2.30 ರವರೆಗೆ ಹಾಗೂ ಸಂಜೆ 4 ರಿಂದ 5.30 ರವರೆಗೆ ಲಿಖಿತ ಪರೀಕ್ಷೆಯನ್ನು ನಗರದ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.

ಅಭ್ಯರ್ಥಿಗಳ ರೋಲ್ ಸಂಖ್ಯೆ 3500001 ರಿಂದ 3501000 ರವರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 3501001 ರಿಂದ 3501500 ರವರೆಗೆ ಎ.ವಿ. ಕಮಲಮ್ಮ ಮಹಿಳಾ ಕಾಲೇಜು, 3501501 ರಿಂದ 3502047 ರವರೆಗೆ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿಪೂರ್ವ ಕಾಲೇಜು, 3502101 ರಿಂದ 3502547 ರವರೆಗೆ ಸಿದ್ದಗಂಗಾ ಪಿಯು ಕಾಲೇಜು, 3502601 ರಿಂದ 3503100 ರವರೆಗೆ ಜಿ.ಎಂ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, 3503101 ರಿಂದ 3503540 ರವರೆಗೆ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆ, 3503541 ರಿಂದ 3503907 ರವರೆಗೆ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜುಗಳ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿ ಸೂಚಿಸಿರುವ ದಾಖಲಾತಿಗಳೊಂದಿಗೆ ಲಿಖಿತ ಪರೀಕ್ಷಾ ಕೇಂದ್ರಕ್ಕೆ ನಿಗದಿತ ಸಮಯಕ್ಕಿಂತ 60 ನಿಮಿಷ ಮುಂಚಿತವಾಗಿ ಹಾಜರಾಗುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕ ಹನುಮಂತರಾಯ ತಿಳಿಸಿದ್ದಾರೆ.

ಶ್ರೀ ದುರ್ಗಾಂಬಾ ಟ್ರಾವೆಲ್ಸ್

ಶಿವಮೊಗ್ಗ, ದಾವಣಗೆರೆ to ಬಿಜಾಪುರ

ಮಾರ್ಗ : ಶಿವಮೊಗ್ಗ, ಹರಿಹರ, ದಾವಣಗೆರೆ, ಹರಪನಹಳ್ಳಿ, ಹೊಸಪೇಟೆ, ಕುಷ್ಠಗಿ, ಇಳಕಲ್, ಹುನಗುಂದ, ಆಲಮಟ್ಟಿ, ನಿಡಗುಂದಿ, ಬಿಜಾಪುರ.

ಪ್ರತಿದಿನ ಬಿಡುವ ಸಮಯ : ✦ಶಿವಮೊಗ್ಗ - ರಾತ್ರಿ 8 ಗಂಟೆಗೆ
✦ದಾವಣಗೆರೆ : ರಾತ್ರಿ 10.30 ಗಂಟೆಗೆ, ಬಿಜಾಪುರ ಸೇರುವ ಸಮಯ ಬೆಳಿಗ್ಗೆ 6 ಗಂಟೆಗೆ

NON AC SLEEPER 2 + 1

ದಾವಣಗೆರೆ ಆಫೀಸ್ : ಫೋ. : 08192-232262

ಉಮೇಶ್ ಮೊ. : 94484 15595 | ವೀರೇಶ್ ಮೊ. : 98444 68697 | ಕುಮಾರ್ ಮೊ. : 98807 29049

ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ

# 712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ- 577 001,

**3ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ಸಹಕಾರಿಯ 2019-20ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು **ದಿನಾಂಕ 12-12-2020ನೇ ಶನಿವಾರ ಬೆಳಿಗ್ಗೆ 11-30 ಗಂಟೆಗೆ** ಸರಿಯಾಗಿ **ಸಹಕಾರಿಯ ಆವರಣದಲ್ಲಿ** ಸಹಕಾರಿಯ ಘನ ಅಧ್ಯಕ್ಷರಾದ **ಶ್ರೀ ಟಿ.ಎಂ. ಪಾಲಾಕ್ಷ,** ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.

ಸದಸ್ಯರುಗಳು ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸುವುದು ಮತ್ತು ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದನ್ನು ಕಡ್ಡಾಯ ಮಾಡಲಾಗಿದೆ. ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.

**ವಿಶೇಷ ಸೂಚನೆ :** ಮಹಾಸಭೆಗೆ ಇಟ್ಟಿರುವ ವಿಷಯಗಳ ಬಗ್ಗೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಮಹಾಸಭೆಗೆ ಐದು ದಿನಗಳ ಮುಂಚಿತವಾಗಿ ಲಿಖಿತದ ಮೂಲಕ ಸಹಕಾರಿಯ ಮುಖ್ಯ ಕಾರ್ಯದರ್ಶಿಯವರಿಗೆ ತಿಳಿಸಿದಲ್ಲಿ, ಅಂತಹ ವಿಷಯಗಳ ಬಗ್ಗೆ ಅಧ್ಯಕ್ಷರ ಅನುಮತಿ ಪಡೆದು ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯಗಳನ್ನು ಚರ್ಚಿಸಲು ಅವಕಾಶವಿರುವುದಿಲ್ಲ.

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯ ಮೇರೆಗೆ

ಅಧ್ಯಕ್ಷರು (ಟಿ.ಎಂ. ಪಾಲಾಕ್ಷ) 98450 54329 | ಉಪಾಧ್ಯಕ್ಷರು (ವಿ.ಹೆಚ್. ಕುಮಾರ) 94480 05253 | ಮುಖ್ಯ ಕಾರ್ಯದರ್ಶಿ (ಮೊಹಮ್ಮದ್ ಉಬೇದುಲ್ಲಾ) 99866 17742

# ಆಂಧ್ರ ಪ್ರದೇಶದಲ್ಲಿ ನಿಗೂಢ ರೋಗಕ್ಕೆ ಸಿಲುಕಿದ್ದ ಇಬ್ಬರ ಸಾವು


ಹೈದರಾಬಾದ್, ಡಿ. 10 – ಆಂಧ್ರ ಪ್ರದೇಶದ ಎಲೂರಿನಲ್ಲಿ ನಿಗೂಢ ರೋಗಕ್ಕೆ ಸಿಲುಕಿದ್ದ ಇಬ್ಬರು ಸಾವನ್ನಪ್ಪಿದ್ದಾರೆ. ಆದರೆ, ಈ ಸಾವುಗಳಿಗೆ ಬೇರೆ ಕಾರಣಗಳಿವೆ ಎಂದು ವೈದ್ಯರು ತಿಳಿಸಿದ್ದಾರೆ. 56 ವರ್ಷದ ಸುಬ್ಬರಾವಮ್ಮ ಹಾಗೂ 50 ವರ್ಷದ ಚಂದ್ರ ರಾವ್ ಅವರನ್ನು ಭಾನುವಾರ ಎಲೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಅವರನ್ನು ವಿಜಯವಾಡ ಆಸ್ಪತ್ರೆಗೆ ರವಾನಿಸಲಾಗಿತ್ತು. ವಿಜಯವಾಡ ಆಸ್ಪತ್ರೆಗೆ ಭೇಟಿ ನೀಡಿದ ನಂತರ ಮಾತನಾಡಿರುವ ಆಂಧ್ರ ಪ್ರದೇಶ ಆರೋಗ್ಯ ಸಚಿವ ಅಲ್ಲ ಕಾಲಿ ಕೃಷ್ಣ ಶ್ರೀನಿವಾಸ, ಸಾವಿಗೆ ಎಲೂರಿನಲ್ಲಿ ಕಂಡು ಬಂದ ನಿಗೂಢ ರೋಗ ಕಾರಣವಲ್ಲ ಎಂದಿದ್ದಾರೆ. ನಿಗೂಢ ರೋಗದ ಲಕ್ಷಣಗಳಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ, ಸುಬ್ಬರಾವಮ್ಮ ಕೊರೊನಾದಿಂದ ಹಾಗೂ ಚಂದ್ರ ರಾವ್ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ. ನಿಗೂಢ ರೋಗದಿಂದ 45 ವರ್ಷದ ಶ್ರೀಧರ್ ಒಬ್ಬರೇ ಸಾವನ್ನಪ್ಪಿದ್ದಾರೆ ಎಂದು ಎಲೂರು ಸರ್ಕಾರಿ ಆಸ್ಪತ್ರೆಯ ಅಧೀಕ್ಷಕ ಎ.ವಿ.ಆರ್. ಮೋಹನ್ ಹೇಳಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ. ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ ಹಾಗೂ ಸುತ್ತ ಮುತ್ತ ಪ್ರದೇಶಗಳು, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ, ಸುತ್ತ ಮುತ್ತಲಿನ ಪ್ರದೇಶಗಳು, ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.






















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte